# ಸಿರಿ ಕನ್ನಡ 10ನೇ ತರಗತಿ

## ಪ್ರಥಮ ಭಾಷೆ – ಕನ್ನಡ

(2024–25ನೇ ಸಾಲಿನ ಪರಿಷ್ಕೃತ ಪಠ್ಯಪುಸ್ತಕ ಆಧರಿಸಿ)

# ‘ವಿದ್ಯಾರ್ಥಿ ಅಭ್ಯಾಸ ಕೈದೀವಿಗೆ’

## ಭಾಗ – 1 ಮತ್ತು ಭಾಗ –2

[ಮೌಲ್ಯವನ್ನಾಧರಿಸಿ ಪದ್ಯಗಳ ಸಾರಾಂಶ, ವ್ಯಾಕರಣ, ಅಲಂಕಾರ, ಛಂದಸ್ಸು, ಪ್ರಬಂಧ, ಗಾದೆಗಳನ್ನು ಅಡಕಗೊಳಿಸಿದೆ]

# ಮೈಸೂರು ಮಲ್ಲಿಗೆ

**ಎನ್. ನಾಗರಾಜು.** ಎಂ.ಎ., ಬಿಇಡಿ., ಕನ್ನಡ ಭಾಷಾ ಅಧ್ಯಾಪಕ

ಸರ್ಕಾರಿ ಪ್ರೌಢಶಾಲೆ, ರೈಲ್ವೆಕಾರ್ಯಾಗಾರ ಕಾಲೋನಿ,

ಮೈಸೂರು ದಕ್ಷಿಣ ವಲಯ. ಮೈಸೂರು–570008

# ಭಾಗ – 1 ಪರಿವಿಡಿ

## ಗದ್ಯ ಭಾಗ

| ಕ್ರ ಸಂಖ್ಯೆ | ಗದ್ಯ/ಪದ್ಯದ ಹೆಸರು | ಕೃತಿಕಾರರ ಹೆಸರು | ಪುಟ ಸ |
|---|---|---|---|
| ೧ | ನಮ್ಮ ಭಾಷೆ | ಎಂ ಮರಿಯಪ್ಪ ಭಟ್ಟ | |
| ೨ | ವ್ಯಾಘ್ರಗೀತೆ | ಎ.ಎನ್ ಮೂರ್ತಿ ರಾವ್ | |
| ೩ | ಭಾಗ್ಯ ಶಿಲ್ಪಿಗಳು | ಜಯಪ್ಪ ಗೌಡ | |
| ೪ | ಎದೆಗೆ ಬಿದ್ದ ಅಕ್ಷರ | | |

## ಪದ್ಯ ಭಾಗ

| | | | |
|---|---|---|---|
| ೧ | ಸಂಕಲ್ಪಗೀತೆ | ಜಿ. ಎಸ್. ಶಿವರುದ್ರಪ್ಪ | |
| ೨ | ಹಕ್ಕಿಹಾರುತ್ತಿದೆ ನೋಡಿದಿರಾ | ದ.ರಾ.ಬೇಂದ್ರೆ | |
| ೩ | ಕೌರವೇಂದ್ರನಕೊಂದೆ ನೀನು | ಕುಮಾರವ್ಯಾಸ | |
| ೪ | ಛಲಮನೆ ಮೆರೆವೆಂ | ರನ್ನ | |

## ಪಠ್ಯ ಪೂರಕ ಅಧ್ಯಯನ

| | | | |
|---|---|---|---|
| ೧ | ವಸಂತ ಮುಖ ತೋರಲಿಲ್ಲ | ವಿಜಯಶ್ರೀ ಸಬರದ | |
| ೩ | ಭಗತ್ ಸಿಂಗ್ | ಚಿದಾನಂದ ಮೂರ್ತಿ ಜಿ.ಎಸ್. | |
| ೩ | ಉದಾತ್ತ ಚಿಂತನೆಗಳು | ಸಮಿತಿಯ ಸಂಗ್ರಹ | |

# ಭಾಗ –2 ಪರಿವಿಡಿ

## ಗದ್ಯ ಭಾಗ

| ಕ್ರ ಸಂಖ್ಯೆ | ಗದ್ಯ/ಪದ್ಯದ ಹೆಸರು | ಕೃತಿಕಾರರ ಹೆಸರು | |
|---|---|---|---|
| ೫ | ಯುದ್ಧ | ಎಂ ಮರಿಯಪ್ಪ ಭಟ್ಟ | |
| ೬ | ಶಬರಿ | ಪು.ತಿ.ನ | |
| ೭ | ಲಂಡನ್ ನಗರ | ವಿ.ಕೃ.ಗೋಕಾಕ್ | |
| ೮ | ಅಗ್ನಿ ಭೂತಿ ವಾಯುಭೂತಿಯರ ಕಥೆ | ಶಿವಕೋಟ್ಯಾ ಚಾರ್ಯ | |

## ಪದ್ಯ ಭಾಗ

| | | | |
|---|---|---|---|
| ೫ | ಹಸುರು | ಕುವೆಂಪು | |
| ೬ | ಹಲಗಲಿ ಬೇಡರು | ಜಪದ ಲಾವಣಿ(ಸಂಗ್ರಹ) | |
| ೭ | ವೀರಲವ | ಲಕ್ಷ್ಮೀಶ | |
| ೮ | ಕೆಮ್ಮನೆ ಮೀಸೆವೊತ್ತನೆ | ಪಂಪ | |

## ಪಠ್ಯ ಪೂರಕ ಅಧ್ಯಯನ

| | | | |
|---|---|---|---|
| ೪ | ವಚನಗಳು | ಸಂಗ್ರಹ | |
| ೫ | ನಾನು ಪ್ರಾಸ ಬಿಟ್ಟ ಕಥೆ | ಎಂ.ಗೋವಿಂದ ಪೈ | |
| ೬ | ಶುಕನಾಸನ ಉಪದೇಶ | ಬನ್ನಂಜೆ ಗೋವಿಂದಾಚಾರ್ಯ | |



# ಗದ್ಯಪಾಠ 1. ನಮ್ಮ ಭಾಷೆ

**– ಎಂ. ಮರಿಯಪ್ಪಭಟ್ಟ**

**ಲೇಖಕರ ಪರಿಚಯ :–** ಎಂ. ಮರಿಯಪ್ಪ ಭಟ್ಟರು ೧೯೦೬ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ಕಬಕ ಗ್ರಾಮದಲ್ಲಿ ಜನಿಸಿದರು. ಇವರು **ತುಳು–ಇಂಗ್ಲಿಷ್ ನಿಘಂಟು, ಅಭಿನವಮಂಗರಾಜನ ನಿಘಂಟು, ಜಾತಕತಿಲಕಂ, ಛಂದಸ್ಸಾರ** ಮೊದಲಾದ ಕೃತಿಗಳ ರಚಿಸಿದ್ದಾರೆ. ಇವರಿಗೆ **ಕರ್ನಾಟಕ ಸರ್ಕಾರದ ಪುರಸ್ಕಾರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ಲಭಿಸಿದೆ.

## ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.

**1. ಭಾಷೆ ಯಾವುದಕ್ಕೆ ಸಾಧನವಾಗಿದೆ?**

ಉತ್ತರ:– ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನವಾಗಿದೆ.

**2. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಪೇತು ಕೊಡುತ್ತವೆ?**

ಉತ್ತರ:– ಪ್ರಾಣಿಗಳು ತಮ್ಮ ಮಕ್ಕಳಿಗೆ ಚಲನವಲನಗಳ ವಿಷಯವಾಗಿ, ಆಹಾರ ವಿಚಾರಗಳ ವಿಚಾರವಾಗಿ ತರಪೇತು ಕೊಡುತ್ತವೆ.

**3. ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಯಾವಾಗ ಉಂಟಾಯಿತು?**

ಉತ್ತರ:– ಮನುಷ್ಯನು ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳು ಮೂಡಿದವೋ ಆಗ ಅವನಿಗೆ ಲೆಕ್ಕವಿಡುವ ಆವಶ್ಯಕತೆ ಉಂಟಾಯಿತು.

**4. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು?**

ಉತ್ತರ:– ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ನಯಸೇನ ಕವಿ.

**5. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು?**

ಉತ್ತರ:– ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಮಹಮ್ಮದೀಯರ ಆಳ್ವಿಕೆಯ ಅವಧಿಯಲ್ಲಿ ಬಂದವು.

## ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ

**1. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು?**

ಉತ್ತರ:– ವ್ಯಾವಹಾರಿಕವೆಂದರೆ ಜೀವದ್ಭಾಷೆ, ಅದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆ ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲಿಷ್. ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ, ಉದಾಹರಣೆ ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ, ಇತ್ಯಾದಿ. ಎಲ್ಲ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ. ಆದರೆ ಅದು ಗ್ರಾಂಥಿಕ ಭಾಷೆಯಲ್ಲ. ಹಾಗೆಯೇ ಎಲ್ಲ ಗ್ರಾಂಥಿಕ ಭಾಷೆಗಳು ಇಂದು ವ್ಯಾವಹಾರಿಕವಾಗಿ ಇರುವುದಿಲ್ಲ. ದೇವಭಾಷೆ ಎನ್ನಿಸಿಕೊಂಡ ಸಂಸ್ಕೃತ ಸರ್ವ ಸಂಪನ್ನತೆಯಿಂದ ಕೂಡಿದ ಗ್ರಾಂಥಿಕ ಭಾಷೆಯಾಗಿದೆ. ಆದರೆ ಇಂದು ಯಾವೊಂದು ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿರುವುದಿಲ್ಲ.

**2. ಲಿಪಿಯ ಜಾಡು ಆರಂಭಗೊಂಡ ಬಗೆ ಹೇಗೆ?**

ಉತ್ತರ:– ನವಶಿಲಾಯುಗದ ಮಾನವ, ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ. ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಎಂದು ಮೊದಲು ಮಾಡಿದನೋ ಅಂದು ಆತನಿಗೆ ಲೆಕ್ಕವಿಡುವ ಆವಶ್ಯಕತೆ ಉಂಟಾಯಿತು. ಇದೇ ಲಿಪಿಯ ಉಗಮದ ಕಾಲವೆನ್ನುವರು. ಯಾವ ಓದುಬರೆಹವಿಲ್ಲದ ಹಳ್ಳಿಯ ಕೆಲಸಗಾರನಾದರೂ

ಸರಿಯೆ, ತಾನು ದಿನಗೆಲಸಕ್ಕೆ ಹೋದ ಲೆಕ್ಕವನ್ನು ಗೋಡೆಯ ಮೇಲೆ ದಿನಂಪ್ರತಿ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಎಣಿಸಿ ಲೆಕ್ಕಹಾಕಿ ಸಂಬಳವನ್ನು ಪಡೆಯುತ್ತಾನೆ. ಹಾಲು ಮಾರುವವರೂ ಹೀಗೆಯೇ ಲೆಕ್ಕವಿಡುವುದುಂಟು. ಹೀಗೆ ಲಿಪಿಯ ಜಾಡು ಆರಂಭಗೊಂಡಿತು.

**3. ಲಿಪಿಯ ಮೂಲಕ ಜ್ಞಾನ ಭಂಡಾರ ಯಾವ ರೀತಿ ಭದ್ರವಾಯಿತು?**

ಉತ್ತರ:– ಮಾನವನಿಗೆ ಬಿಡುವು ಹೆಚ್ಚಿದಂತೆ, ಜೀವನದ ಸೌಕರ್ಯಗಳನ್ನು ವಿಶಿಷ್ಟ ಮೇಧಾಶಕ್ತಿಯಿಂದ ಅಭಿವೃದ್ಧಿಗೊಳಿಸುತ್ತಾ ಹೋದಂತೆ ತನ್ನ ಆಗುಹೋಗುಗಳನ್ನು, ಸುಖ ದುಃಖಗಳನ್ನು ಕಾವ್ಯರೂಪಕ್ಕೆ ಇಳಿಸುವ ಮಾರ್ಗವನ್ನು ಕಂಡುಕೊಂಡನು. ಸಾಹಿತ್ಯ ವಿವಿಧ ರೂಪದಲ್ಲಿ ಬೆಳೆಯಿತು. ಲೆಕ್ಕಪತ್ರಗಳನ್ನಿಡಲು ಉಪಯುಕ್ತವಾದ ಮೂಲಲಿಪಿಯನ್ನು ಮತ್ತಷ್ಟು ಪರಿಷ್ಕರಿಸುತ್ತಾ ಸುಂದರವಾದ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡ. ಆ ಲಿಪಿಯ ಮೂಲಕ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲು ಸಾಧ್ಯವಾಯಿತು. ಜ್ಞಾನ ಭಂಡಾರ ಭದ್ರವಾಯಿತು. ಸಂಸ್ಕೃತಿಯ ಇತಿಹಾಸ ಉಳಿಯಿತು. ಪ್ರಗತಿಪಥ ಸುಗಮವಾಯಿತು.

**4. ಕನ್ನಡ ಭಾಷೆ ಹದಗೊಂಡದ್ದು ಹೇಗೆ?**

ಉತ್ತರ:– ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡಿತು.

**5. ಆಂಗ್ಲ ಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು?**

ಉತ್ತರ:– ಆಂಗ್ಲಭಾಷೆ ಯೂರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಆಂಗ್ಲ ಜನತೆ ಸಾಹಸಜೀವಿಯಾಯಿತು. ಬುದ್ಧಿಶಾಲಿಯಾಯಿತು. ಸೂರ್ಯನು ಎಂದೂ ಮುಳುಗನೆನ್ನುವಂತಹ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿತು. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದುವುಗಳನ್ನು ಆ ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಂಗ್ಲ ಭಾಷೆ ಬೆಳೆದು ವಿಶ್ವವ್ಯಾಪಿಯಾಗಲು ಕಾರಣವಾಯಿತು.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ**

**1. ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು ಯಾವಾಗ?**

ಉತ್ತರ:– ಒಂದು ಭಾಷೆ ಸತ್ವಪೂರ್ಣವಾಗಿ ವಿಕಾಸವಾಗಬೇಕಾದರೆ ಅದನ್ನಾಡುವ ಜನ ಅಭಿಮಾನಧನರೂ ಬುದ್ಧಿಶಾಲಿಗಳೂ ಪ್ರಯೋಗಶೀಲರೂ ಆಗಿರಬೇಕು. ಉದಾಹರಣೆಗೆ: ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲಭಾಷೆ ಯೂರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲ ಕಾರಣ ಆಂಗ್ಲ ಜನರ ಸಂಕಲ್ಪ, ಭಾಷಾಕೃಷಿ ಕಾರಣವೆಂದು ಹೇಳಬಹುದು. ಆಂಗ್ಲ ಜನರು ಸಾಹಸಜೀವಿಗಳು, ಬುದ್ಧಿಶಾಲಿಗಳಾಗಿದ್ದರು. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ಈ ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಅಲ್ಲಿನ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದುವುಗಳನ್ನು ಆಂಗ್ಲಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಅವರ ಭಾಷೆ ಸತ್ವಪೂರ್ಣವಾಗಿ ವಿಕಾಸಗೊಂಡಿತು.

ಹಾಗೆಯೇ ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೆ, ನಮ್ಮ ನಮ್ಮ ಭಾಷೆಗಳನ್ನು ಗೌರವಿಸಿ, ಪ್ರೀತಿಸಿ ಅಭಿವೃದ್ಧಿಗೊಳಿಸಬೇಕು. ನೆರೆಹೊರೆಯ ಭಾಷೆಗಳಲ್ಲಿ ಕೊಳುಕೊಡುಗೆಯ ವ್ಯವಹಾರ ನಡೆದೇ ನಡೆಯುತ್ತದೆ. ನಡೆಯಲೇಬೇಕು. ಅದು ಸಜೀವ ಭಾಷೆಯ ಲಕ್ಷಣ. ಆದರೆ ಸ್ವೀಕರಿಸುವಾಗ ತನ್ನತನವನ್ನು ಕಳೆದುಕೊಳ್ಳದಂತೆ ಕಾಪಾಡಿಕೊಳ್ಳಬೇಕು. ಸ್ವಾಭಾವಿಕವಾಗಿ ಗಡಿ ಜನರ

ವ್ಯವಹಾರ ಸಂಪರ್ಕಗಳಿಂದ ನೆರಮಾತುಗಳಲ್ಲಿ ಕೊಳುಕೊಡುಗೆ ನಡೆಯುತ್ತಲೇ ಇದೆ. ಅದರ ನೆರನುಡಿಗಳೂ ಪರಸ್ಪರ ಎರವುಗಳಿಂದ ಅಭಿವೃದ್ಧಿ ಹೊಂದಿ ಭಾಷೆ ಸತ್ವಪೂರ್ಣವಾಗಿ ವಿಕಾಸವಾಗಲು ಸಾಧ್ಯವಾಗುತ್ತದೆ.

**2. ಕನ್ನಡಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ? ವಿವರಿಸಿ.**

ಉತ್ತರ:– ಕನ್ನಡ ಭಾಷೆಗೆ ಪ್ರಾಚೀನ ಕಾಲದಿಂದಲೂ ಸಂಸ್ಕೃತ ಭಾಷೆಯ ಪೋಷಣೆ ದೊರೆಯುತ್ತಾ ಬಂದಿದೆ. ಕನ್ನಡದ ಪಂಡಿತರು ವೈದಿಕ ಹಾಗೂ ಧಾರ್ಮಿಕ ತತ್ವಗಳನ್ನು ಕನ್ನಡದಲ್ಲಿ ವಿವರಿಸಲು ಅಭಿಲಾಷೆಯಿಂದ ಕಾವ್ಯಗಳನ್ನು ರಚಿಸಿದರು. ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡುದರಿಂದ ಅದು ಸುಲಿದ ಬಾಳೆಯ ಹಣ್ಣಿನಂತೆ, ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ ಸುಲಭವೂ ರುಚಿಯುಳ್ಳದ್ದೂ ಆಯಿತು.

ಸಂಸ್ಕೃತ, ಪ್ರಾಕೃತ ಭಾಷೆಗಳಿಂದ (ತತ್ಸಮ ತದ್ಭವಗಳಾಗಿ) ಅನೇಕ ಶಬ್ದಗಳನ್ನು ಕನ್ನಡ ತನ್ನಲ್ಲಿ ಅಳವಡಿಸಿಕೊಂಡಿದೆ. ಮಹಮ್ಮದೀಯರ ಆಳ್ವಿಕೆಯ ಅವಧಿಯಲ್ಲಿ ಪರ್ಷಿಯನ್ ಭಾಷೆಯಿಂದ ಅನೇಕ ಶಬ್ದಗಳು ಕನ್ನಡಕ್ಕೆ ಬಂದಿವೆ. ಅಸಂಖ್ಯಾತ ಇಂಗ್ಲಿಷ್ ಶಬ್ದಗಳು ಕನ್ನಡದ ಉಡುಪನ್ನು ಧರಿಸಿ ಒಳಗೆ ಬಂದು ಬಿಟ್ಟಿವೆ. ಸ್ವಾಭಾವಿಕವಾಗಿ ಗಡಿ ಜನರ ವ್ಯವಹಾರ ಸಂಪರ್ಕಗಳಿಂದ ನೆರೆಮಾತುಗಳಲ್ಲಿ ಕೊಳುಕೊಡುಗೆ ನಡೆಯುತ್ತಲೇ ಇದೆ. ಇದರಿಂದ ಕನ್ನಡವೂ ಅದರ ನೆರನುಡಿಗಳೂ ಪರಸ್ಪರ ಎರವುಗಳಿಂದ ಅಭಿವೃದ್ಧಿ ಹೊಂದುತ್ತಲಿವೆ. ಜೊತೆಗೆ ಭಾಷೆಯಲ್ಲಿರುವ ಸಾಮಗ್ರಿಯನ್ನೇ(ಪದಗಳನ್ನು) ಬಳಸಿಕೊಂಡು ನುಡಿಗಟ್ಟುಗಳಾಗಿ ಮಾಡಿಕೊಂಡು ಕನ್ನಡ ಭಾಷೆಯು ಸಮೃದ್ಧವಾಗಿ ರೂಪಗೊಂಡಿತು.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**1. "ಸಂಸ್ಕೃತಿಯ ಇತಿಹಾಸ ಉಳಿಯಿತು"**

ಆಯ್ಕೆ:– ಈ ವಾಕ್ಯವನ್ನು 'ಎಂ.ಮರಿಯಪ್ಪ ಭಟ್ಟರು' ಬರೆದಿರುವ 'ಕನ್ನಡ ಸಂಸ್ಕೃತಿ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ನಮ್ಮ ಭಾಷೆ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ನವಶಿಲಾಯುಗದ ಮಾನವ, ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯಲು ಪ್ರಾರಂಭಿಸಿ, ಜೀವನದ ಸೌಕರ್ಯಗಳನ್ನು ವಿಶಿಷ್ಟ ಮೇಧಾಶಕ್ತಿಯಿಂದ ಅಭಿವೃದ್ಧಿಗೊಳಿಸುತ್ತಾ ಹೋದಂತೆ ತನ್ನ ಆಗುಹೋಗುಗಳನ್ನು, ಸುಖ ದುಃಖಗಳನ್ನು ಕಾವ್ಯರೂಪಕ್ಕೆ ಇಳಿಸುವ ಮಾರ್ಗವನ್ನು ಕಂಡುಕೊಂಡನು. ಸುಂದರವಾದ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡನು. ಲಿಪಿಯ ಮೂಲಕ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲು ಸಾಧ್ಯವಾಯಿತು. ಜ್ಞಾನ ಭಂಡಾರ ಭದ್ರವಾಯಿತು. "ಸಂಸ್ಕೃತಿಯ ಇತಿಹಾಸ ಉಳಿಯಿತು". ಪ್ರಗತಿಪಥ ಸುಗಮವಾಯಿತು ಎಂದು ಹೇಳಿದ ಸಂದರ್ಭವಾಗಿದೆ.

ಸ್ವಾರಸ್ಯ :– ಭಾಷೆ ನಾಡಿನ ಪರಂಪರೆ, ಸಂಸ್ಕೃತಿ, ಇತಿಹಾಸವನ್ನು ಉಳಿಸಲು, ಬೆಳೆಸಲು ಸಹಾಯಕವಾಗುತ್ತದೆ ಎಂಬುದು ಸ್ವಾರಸ್ಯಕರವಾಗಿದೆ.

**2. "ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ"**

ಆಯ್ಕೆ:– ಈ ವಾಕ್ಯವನ್ನು 'ಎಂ.ಮರಿಯಪ್ಪ ಭಟ್ಟರು' ಬರೆದಿರುವ 'ಕನ್ನಡ ಸಂಸ್ಕೃತಿ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ನಮ್ಮ ಭಾಷೆ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ಕನ್ನಡಕ್ಕೆ ಬಹಳ ಪ್ರಾಚೀನ ಕಾಲದಿಂದಲೂ ಸಂಸ್ಕೃತದ ಪೋಷಣೆ ದೊರೆಯುತ್ತ ಬಂದಿದೆ. ವೈದಿಕ ಹಾಗೂ ಜೈನ ಧಾರ್ಮಿಕ ತತ್ವಗಳನ್ನು ಕನ್ನಡದಲ್ಲಿ ವಿವರಿಸಬೇಕೆಂಬ ಅಭಿಲಾಷೆಯಿಂದ ಅನೇಕ ಪಂಡಿತರು ಉತ್ತಮ ಕಾವ್ಯಗಳನ್ನು ರಚಿಸಿದರು. ಆದರೆ ಅವರಲ್ಲಿ ಅನೇಕರು ಕನ್ನಡವನ್ನು ಸಂಸ್ಕೃತಮಯವನ್ನಾಗಿ ಮಾಡಿಬಿಟ್ಟರು. ಇಂಥ ಪರಿಸ್ಥಿತಿಯನ್ನು ಗಮನಿಸಿ 12 ನೆಯ ಶತಮಾನದ ನಯಸೇನ ಕವಿ "ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ" ಅಂದರೆ ಎಣ್ಣೆ ತುಪ್ಪದ ಮಿಶ್ರಣ ಮಾಡುವುದು ಯೋಗ್ಯವಾದುದಲ್ಲ. ನಮಗೆ ತುಪ್ಪವೂ ಬೇಕು; ಎಣ್ಣೆಯೂ ಬೇಕು. ಸಂಸ್ಕೃತವೂ ಬೇಕು; ಕನ್ನಡವೂ

ಬೇಕು. ಆದರೆ ಎಣ್ಣೆತುಪ್ಪದ ಅಸ್ವಾದು ಮಿಶ್ರಣಬೇಡ, ಎಂಬುದು ನಯಸೇನನ ಅಭಿಮತವನ್ನು ಲೇಖಕರು ಹೇಳಿದ ಸಂದರ್ಭವಾಗಿದೆ.

ಸ್ವಾರಸ್ಯ:- ಕನ್ನಡ ಭಾಷಾ ಸಾಹಿತ್ಯದಲ್ಲಿ ಸಂಸ್ಕೃತ ಪದಗಳನ್ನು ಸೇರಿಸಿ ಕಾವ್ಯ ರಚಿಸಿದರೆ ಕಾವ್ಯ ರುಚಿಸುವುದಿಲ್ಲ, ಅದು ಅಸ್ವಾದು ಎಂದು ಕನ್ನಡ ಭಾಷಾ ಶುದ್ಧತೆಯ ಬಗ್ಗೆ ಹೇಳಿರುವುದು ಸ್ವಾರಸ್ಯಪೂರ್ಣವಾಗಿ ಬಂದಿದೆ.

**3. "ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ"**

ಆಯ್ಕೆ:- ಈ ವಾಕ್ಯವನ್ನು 'ಎಂ.ಮರಿಯಪ್ಪ ಭಟ್ಟರು' ಬರೆದಿರುವ 'ಕನ್ನಡ ಸಂಸ್ಕೃತಿ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ನಮ್ಮ ಭಾಷೆ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :- ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡುದರಿಂದ ಅದು "ಸುಲಿದ ಬಾಳೆಯ ಹಣ್ಣಿನಂತೆ, ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ ಸುಲಭವೂ ರುಚಿಯುಳ್ಳದ್ದೂ ಆಗಿದೆ" ಎಂದು ಕವಿ ಮಹಲಿಂಗರಂಗ ಸಾರಿ ಹೇಳಿದನು ಎನ್ನುವ ವಿಚಾರವನ್ನು ಹೇಳುವ ಸಂದರ್ಭವಾಗಿದೆ.

ಸ್ವಾರಸ್ಯ :- ಕನ್ನಡ ಭಾಷೆಯು ಕಲಿಯಲು ಸುಲಭವೂ, ಸುಂದರವೂ, ಸಹಜವೂ, ರುಚಿಕರವೂ ಆಗಿದೆ ಎಂದು ಕನ್ನಡ ಭಾಷೆಯ ಸೊಬಗಿನ ಬಗ್ಗೆ ವರ್ಣಿಸಿರುವುದು ಸ್ವಾರಸ್ಯಕರವಾಗಿದೆ.

**4. "ಒಬ್ಬ ತಾಯಿಯ ಗಾನದ ಶ್ರುತಿಯಂತೆ"**

ಆಯ್ಕೆ:- ಈ ವಾಕ್ಯವನ್ನು 'ಎಂ.ಮರಿಯಪ್ಪ ಭಟ್ಟರು' ಬರೆದಿರುವ 'ಕನ್ನಡ ಸಂಸ್ಕೃತಿ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ನಮ್ಮ ಭಾಷೆ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :- ಭಾಷೆಗಳಲ್ಲಿ ಮೇಲು-ಕೀಳೆಂಬುದಿಲ್ಲ. ನಾಲ್ಕು ಜನ ಮಾತನಾಡುತ್ತಿದ್ದ ಭಾಷೆಗೂ ನಲವತ್ತು ಲಕ್ಷ ಜನ ಮಾತನಾಡುತ್ತಿದ್ದ ಭಾಷೆಗೂ ಸತ್ಯ ಹಾಗೂ ಸತ್ಯದೃಷ್ಟಿಯಿಂದ ಅಂತರವೇ ಇಲ್ಲ. ಎಲ್ಲ ಭಾಷೆಗಳೂ ಅಷ್ಟೇ. "ಒಬ್ಬ ತಾಯಿಯ ಗಾನದ ಶ್ರುತಿಯಂತೆ" ಎಲ್ಲಕ್ಕೂ ಅಷ್ಟೇ ಸ್ಥಾನವಿದೆ. ಇದನ್ನರಿತು ಭಾರತೀಯರಾದ ನಾವು ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೆ, ನಮ್ಮ ನಮ್ಮ ಭಾಷೆಗಳನ್ನು ಗೌರವಿಸಿ, ಪ್ರೀತಿಸಿ ಅಭಿವೃದ್ಧಿಗೊಳಿಸಿದರೆ ದೇಶದ ಸಂಸ್ಕೃತಿ ಮುಂದುವರಿಯುತ್ತದೆ ಎಂದು ಲೇಖಕರು ಹೇಳಿದ ಸಂದರ್ಭವಾಗಿದೆ.

ಸ್ವಾರಸ್ಯ :- ಸ್ವಭಾಷೆಯನ್ನು ಪ್ರೀತಿಸಬೇಕು, ಗೌರವಿಸಬೇಕು, ಬೆಳೆಸಬೇಕು ಎನ್ನುವ ಧಾತಂತದಲ್ಲಿ ಅನ್ಯಭಾಷೆಗಳನ್ನು ತಿರಸ್ಕರಿಸಬಾರದು ಎಂದು ಭಾಷಾ ಭಾವೈಕ್ಯತೆಯ ಬಗ್ಗೆ ಹೇಳಿರುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**ಉ) ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ.**

1. ಭಾಷೆ ಇದ್ದೂ ಅದರ **ಪೀಯೂಷವನ್ನು** ಕುಡಿದು ಅರಗಿಸಿಕೊಳ್ಳದ, ವ್ಯಕ್ತಿ ಜಂತುವೇ ಸರಿ.
2. ಕನ್ನಡಕ್ಕೆ ಬಹಳ ಪ್ರಾಚೀನ ಕಾಲದಿಂದಲೂ **ಸಂಸ್ಕೃತದ** ಪೋಷಣೆ ದೊರೆಯುತ್ತಾ ಬಂದಿದೆ.
3. ಕನ್ನಡ **ದ್ರಾವಿಡ** ಭಾಷಾ ವರ್ಗಕ್ಕೆ ಸೇರಿದೆ.
4. ಇಂಗ್ಲಿಷ್ ಶಬ್ದಗಳು **ಕನ್ನಡದ** ಉಡುಪನ್ನು ಧರಿಸಿ ಒಳಗೆ ಬಂದು ಬಿಟ್ಟಿವೆ.
5. ನಮ್ಮ ಭಾಷೆ ಗದ್ಯ ಭಾಗದ ಆಕರ ಗ್ರಂಥ **ಕನ್ನಡ ಸಂಸ್ಕೃತಿ**.

## ಊ) ಹೊಂದಿಸಿ ಬರೆಯಿರಿ.

| ಕ್ರ.ಸಂ | 'ಅ' ಪಟ್ಟಿ | 'ಬ' ಪಟ್ಟಿ | ಸರಿ ಉತ್ತರಗಳು |
|---|---|---|---|
| 1 | ವ್ಯಾವಹಾರಿಕ | ಅನ್ಯದೇಶ್ಯ | ಶ್ರವಣ |
| 2 | ದಾಸರು | ಚಾಕ್ಷುಷ | ಕೀರ್ತನೆಗಳು |
| 3 | ದಿವಾನ | ಕೀರ್ತನೆಗಳು | ಅನ್ಯದೇಶ್ಯ |

| | | | |
|---|---|---|---|
| 4 | ಗ್ರಾಂಥಿಕ | ತದ್ಭವರೂಪ | ಚಾಕ್ಷುಷ |
| 5 | ಶಿವಶರಣರು | ವಚನಗಳು<br>ಶ್ರವಣ | ವಚನಗಳು |

## ಪ್ರಾಯೋಗಿಕ ಅಭ್ಯಾಸ

**ಅ). ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.**

**ವಿಚಾರವಿನಿಮಯ:–** ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನವಾಗಿದೆ.

**ಸಂಶೋಧಕ:–** ಹೊಸ ವಸ್ತು, ಸಂಗತಿ, ವಿಚಾರಗಳನ್ನು ಶೋಧಿಸಿ ಬೆಳಕಿಗೆ ತರುವವನು ಸಂಶೋಧಕನಾಗುತ್ತಾನೆ.

**ಪರಿಷ್ಕರಿಸು:–** ಕಾನೂನುಗಳು ಕಾಲಕ್ಕೆ ತಕ್ಕಂತೆ ಪರಿಷ್ಕರಿಸಬೇಕು.

**ಪ್ರಗತಿಪಥ:–** ಭಾರತ ದೇಶವು ಪ್ರಗತಿಪಥದಲ್ಲಿದೆ.

**ಆ) ಕೊಟ್ಟಿರುವ ಕನ್ನಡರೂಪಗಳ ಮೂಲರೂಪ ಬರೆಯಿರಿ.**

1. ಹೋಟ್ಲು – ಹೋಟೆಲ್ 2. ಇಸ್ಕೂಲು – ಸ್ಕೂಲ್ 3. ಆಫೀಸು –ಆಫೀಸ್
4. ಲೈಟು – ಲೈಟ್ 5. ಹಾಸ್ಪಿಟಲು – ಹಾಸ್ಪಿಟಲ್

## ಭಾಷಾ ಚಟುವಟಿಕೆ

**1. ಕೊಟ್ಟಿರುವ ಪದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.**

ಕಾರ್ಯ, ಕತ್ತಲೆ, ಇಲ್ಲ, ಶಸ್ತ್ರ, ಸ್ಫೋಟಿಸು, ಎಚ್ಚರ, ಕಣ್ಣಿಗೆ, ಅದ್ಭುತ, ಡಾಕ್ಟರ್, ಬಟ್ಟೆ

ವಿಜಾತೀಯ ಸಂಯುಕ್ತಾಕ್ಷರಗಳು – ಕಾರ್ಯ, ಶಸ್ತ್ರ, ಸ್ಫೋಟಿಸು, ಅದ್ಭುತ, ಡಾಕ್ಟರ್

**2. ನೀಡಿರುವ ಪದಗಳಲ್ಲಿ ಅವರ್ಗೀಯ ವ್ಯಂಜನಾಕ್ಷರಗಳನ್ನು ಆರಿಸಿ ಬರೆಯಿರಿ.**

ಸಮನಾಗಿ, ದೇಶ, ಮನೆಯ, ರೋದನ, ಬಳಿಕ, ನೆಲ, ಮದುವೆ, ಮಾನುಷ, ಹೊತ್ತು, ಒಳಗೆ

| | | | | |
|---|---|---|---|---|
| ಸಮನಾಗಿ–ಸ | ದೇಶ–ಶ | ಮನೆಯ–ಯ | ರೋದನ–ರೋ | ಬಳಿಕ–ಳಿ |
| ನೆಲ–ಲ | ಮದುವೆ–ವ | ಮಾನುಷ–ಷ | ಹೊತ್ತು–ಹೊ | ಒಳಗೆ–ಳ |

**3. ಕೊಟ್ಟಿರುವ ಪದಗಳಲ್ಲಿನ ಧ್ವನಿ ವ್ಯತ್ಯಾಸದೊಂದಿಗೆ ಆಗುವ ಅರ್ಥ ವ್ಯತ್ಯಾಸ ಅರಿಯಿರಿ**

ಪ್ರದಾನ > ಪ್ರಧಾನ, ಮದ್ಯ > ಮಧ್ಯ, ಹುಣ್ಣು > ಉಣ್ಣು, ಸುಳಿ > ಸುಲಿ

**4. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ನಾಲ್ಕನೆಯ ಪದವನ್ನು ಬರೆಯಿರಿ.**

ಅ) ಕ್, ಗ್ : ಅಲ್ಪಪ್ರಾಣಾಕ್ಷರಗಳು : : ಛ್, ಝ್ : **ಮಹಾಪ್ರಾಣಾಕ್ಷರಗಳು**

ಆ) ವರ್ಗೀಯ ವ್ಯಂಜನಾಕ್ಷರಗಳು : 25 : : ಅವರ್ಗೀಯ ವ್ಯಂಜನಾಕ್ಷರಗಳು **: 9**

ಇ) ಆ, ಈ, ಊ : ದೀರ್ಘಸ್ವರಗಳು : : ಅ, ಇ, ಉ, ಋ : **ಹ್ರಸ್ವಸ್ವರಗಳು**

ಈ) ಸ್ವರಗಳು : 13 : : ಯೋಗವಾಹಗಳು : 2

**5. ಕೊಟ್ಟಿರುವ ವಿಷಯಗಳನ್ನು ಕುರಿತು ಪ್ರಬಂಧ ರಚಿಸಿರಿ.**

### 1. ರಾಷ್ಟ್ರೀಯ ಹಬ್ಬಗಳ ಮಹತ್ವ

**ಪೀಠಿಕೆ:–** ಒಂದು ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದಂತಹ ವೈವಿಧ್ಯತೆಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ಸಾಧಿಸುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ.
"ಇಡೀ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇಧಭಾವವಿಲ್ಲದೆ, ಜಾತಿ, ಧರ್ಮ, ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ನಮ್ಮದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಸಿಸಲಾಗಿದೆ. ಅವುಗಳೆಂದರೆ 1) ಸ್ವಾತಂತ್ರ್ಯ ದಿನಾಚರಣೆ 2) ಗಣರಾಜ್ಯೋತ್ಸವ 3) ಗಾಂಧಿ ಜಯಂತಿ.

**1) ಸ್ವಾತಂತ್ರ್ಯ ದಿನಾಚರಣೆ:** ಭಾರತ ಸುಮಾರು ಎರಡು ನೂರು ವರ್ಷಗಳ ಕಾಲ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು. ವ್ಯಾಪಾರಕ್ಕಾಗಿ ಬಂದ ಬ್ರಿಟೀಷರು ಭಾರತೀಯ ರಾಜರ ದೌರ್ಬಲ್ಯಗಳನ್ನು ಉಪಯೋಗಿಸಿಕೊಂಡು ಭಾರತ ದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದರು. ಭಾರತಿಯರಿಗೆ ಸ್ವಾತಂತ್ರ

ಎನ್ನವುದೇ ಇರಲಿಲ್ಲ. ಹಾಗಾಗಿ ಭಾರತೀಯರೆಲ್ಲರೂ ಒಟ್ಟಾಗಿ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ರಣಕಹಳೆಯನ್ನು ಊದಿ ಕೊನೆಗೆ **1947 ನೇ ಆಗಷ್ಟ್ 15** ರಂದು ಸ್ವಾತಂತ್ರ ವನ್ನು ಪಡೆದರು. ಆ ದಿನವನ್ನು ಪ್ರತಿವರ್ಷ ಭಾರತೀಯರೆಲ್ಲರೂ ಒಟ್ಟಾಗಿ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಿ ರಾಷ್ಟ್ರೀಯ ಐಕ್ಯತೆಯನ್ನು ಮೆರೆಯುತ್ತಾರೆ.

**2) ಗಣರಾಜ್ಯೋತ್ಸವ :** ಭಾರತದೇಶವು ಸ್ವಾತಂತ್ರ್ಯವನ್ನು ಪಡೆದ ನಂತರ ಎಲ್ಲ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ (ಒಟ್ಟುಗೂಡಿಸಿ) ಉತ್ತಮವಾದ ಆಡಳಿತ ನಡೆಸಲು ಕಾನೂನುರೂಪ ಪಡೆದ ಸಂವಿಧಾನವನ್ನು **ಜನೇವರಿ 26,1950** ರಲ್ಲಿ ಜಾರಿಗೆ ತರಲಾಯಿತು. ಆ ದಿನವೇ ಗಣರಾಜ್ಯ ದಿನ. ಇದನ್ನು ಕೂಡ ನಮ್ಮ ದೇಶದ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ.ಈ ದಿನ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ವಗಳನ್ನು ಸ್ಮರಿಸಿಕೊಳ್ಳುತ್ತಾರೆ. ಪ್ರತಿಯೊಬ್ಬರು ಸಂವಿಧಾನ ಪಾಲಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳುವ ಆಶಯನ್ನು ಪಡೆಯುತ್ತಾರೆ. ಹಾಗೆಯೇ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

**3) ಗಾಂಧಿ ಜಯಂತಿ :** ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವ ಬೇಕು. ಅಂತೆಯೇ ನಮ್ಮ ದೇಶದ ಸ್ವಾತಂತ್ರ್ಯ ಪಡೆಯಲು ನಾಯಕತ್ವವಹಿಕೊಂಡವರು ನಮ್ಮ ದೇಶದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮ ಗಾಂಧೀಜಿಯವರು. ಅವರ ಹುಟ್ಟಿದ ದಿನವೇ **ಅಕ್ಟೋಬರ್ 2**. ಆ ದಿನವನ್ನು ಗಾಂಧಿಜಯಂತಿಯೆಂದು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಲಾಗುತ್ತದೆ. ಏಕೆಂದರೆ ಗಾಂಧೀಜಿವರು ಸ್ವಾತಂತ್ರ್ಯ ಚಳುವಳಿಯ ಮುಂದಾಳತ್ವವನ್ನು ವಹಿಸಿಕೊಂಡು ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡರು. ಆದ್ದರಿಂದ ಅವರ ಆದರ್ಶಗಳನ್ನು ನೆನೆಯುತ್ತ, ಅವರನ್ನು ಸ್ಮರಿಸುತ್ತಾ ಸ್ವಾತಂತ್ರ್ಯದ ಮಹತ್ವದಬಗ್ಗೆ ಕೊಂಡಾಡುವ ದಿನವಾಗಿದೆ.

**ಉಪಸಂಹಾರ :–** ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ. ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನೆಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

## 2. ಗ್ರಂಥಾಲಯಗಳ ಮಹತ್ವ

**ಪೀಠಿಕೆ:–** 'ಗ್ರಂಥಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹದಂತೆ' ಎಂಬ ನಾಣ್ಣುಡಿಯಂತೆ ಮಾನವನ ಜೀವನದಲ್ಲಿ ಪುಸ್ತಕಗಳು ಪ್ರಮುಖ ಪಾತ್ರವಹಿಸುತ್ತವೆ. ಮಾನವನ ಮನಸ್ಸಿನ ವಿಕಾಸಕ್ಕೆ, ಜ್ಞಾನಾರ್ಜನೆಗೆ, ನಾಗರಿಕರನ್ನಾಗಿ ಮಾಡುವಲ್ಲಿ ಪುಸ್ತಕಗಳ ಪಾತ್ರ ಹಿರಿದು.

**ವಿಷಯ ನಿರೂಪಣೆ** :– ಇಂದಿನ ಯುಗದಲ್ಲಿ ಜ್ಞಾನವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗ್ರಂಥಾಲಯಗಳು ಬಹಳ ಮುಖ್ಯ ಎಸುತ್ತವೆ. ಗ್ರಂಥಾಲಯಗಳಿಂದಾಗಿ ಜ್ಞಾನಾರ್ಜನೆಯಾಗುತ್ತದೆ.

ವ್ಯಕ್ತಿತ್ವ ವಿಕಸನ, ಜ್ಞಾನವಿಕಾಸ ಮತ್ತು ನಾಗರಿಕ ಪ್ರಜ್ಞೆ ಮೂಡುತ್ತದೆ. ವೈಚಾರಿಕ ಪ್ರಜ್ಞೆ ಬೆಳೆಯುತ್ತದೆ

ಒಂದೇ ಕಡೆ ಸಾಹಿತ್ಯ, ವಿಜ್ಞಾನ, ಇತಿಹಾಸ, ಪುರಾಣ ಮೊದಲಾದ ವಿಷಯಗಳ ಮಾಹಿತಿ ದೊರೆಯುತ್ತದೆ. ಓದುವ ಹವ್ಯಾಸ ಬೆಳೆಯುತ್ತದೆ ಇತ್ಯಾದಿ.

**ಉಪಸಂಹಾರ :–** ಸಜ್ಜನರ ಸಂಘದಲ್ಲಿ ಹೆಜ್ಜೇನು ಸವಿದಂತೆ, ಗ್ರಂಥಗಳ ಅಧ್ಯಯನ ಮಾಡಿ ಜ್ಞಾನ ಸಂಪಾದನೆ ಮಾಡಿಕೊಳ್ಳಬಹುದು. 'ದೇಶ ಸುತ್ತ ಬೇಕು ಇಲ್ಲವೆ ಕೋಶ ಓದಬೇಕು' ಎಂಬ ಮಾತಿನಂತೆ ಜ್ಞಾನದ ಹರಹನ್ನು ವಿಸ್ತರಿಸಿಕೊಳ್ಳಬಹುದು. ಗ್ರಂಥಾಲಯಗಳು ಜ್ಞಾನ ವಿಕಾಸದಲ್ಲಿ ಬಹಳ ಪ್ರಮುಖವಾದ ಪಾತ್ರ ನಿರ್ವಹಿಸುತ್ತವೆ.

## 3. ಸಾಮಾಜಿಕ ಪಿಡುಗುಗಳು

**ಪೀಠಿಕೆ :–** ಸಮಾಜದ ಅಭಿವೃದ್ಧಿಗೆ ತೊಡಕನ್ನುಂಟುಮಾಡುವ ಪದ್ಧತಿಗಳನ್ನು ಸಾಮಾಜಿಕ ಪಿಡುಗುಗಳು ಎನ್ನವರು. ಇಂತಹ ಪದ್ಧತಿಗಳು ಸಮಾಜಕ್ಕೆ ಕಂಟಕವಾಗಿರುತ್ತವೆ. ಇವುಗಳಲ್ಲಿ ಸಮಾಜದಲ್ಲಿನ ಅಸಮಾನತೆ, ಹಕ್ಕುಗಳ ಉಲ್ಲಂಘನೆ, ಮೌಢ್ಯತೆ, ಶೋಷಣೆ ಇರುತ್ತದೆ.

**ವಿಷಯ ವಿವರಣೆ** :– ಪಾಚೀನ ಕಾಲದಿಂದಲೂ ನಮ್ಮ ಸಮಾಜಕ್ಕೆ ಅಂಟಿಕೊಂಡು ಬಂದಿರುವ, ಸಮಾಜದ ಅಭಿವೃದ್ಧಿಗೆ ಕಂಟಕವಾಗಿರುವ ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ, ವರದಕ್ಷಿಣೆ, ಸ್ತ್ರೀಶೋಷಣೆ, ಅಸ್ಪೃಶ್ಯತೆ, ಸತಿಪದ್ಧತಿ, ದೇವದಾಸಿ ಪದ್ಧತಿ, ಜೀತಪದ್ಧತಿ, ಮೊದಲಾದ ಸಾಮಾಜಿಕ ಪಿಡುಗುಗಳು ಇಂದಿಗೂ ಕಾಡುತ್ತಿವೆ. ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಕಾನೂನುಗಳಿದ್ದರೂ ಪ್ರಯೋಜನವಾಗಿಲ್ಲ.

**ಕಾರಣಗಳು:**

- ಅನಕ್ಷರತೆ, ಮೂಢನಂಬಿಕೆಗಳು, ಸಾಮಾಜಿಕ ಅಸಮಾನತೆ, ಸಾಮಾಜಿಕ ಹಾಗೂ ಕಾನೂನುಗಳ ಉಲ್ಲಂಘನೆ, ವೈಜ್ಞಾನಿಕ ಹಾಗೂ ವೈಚಾರಿಕ ಮನೋಭಾವದ ಕೊರತೆ.

**ಪರಿಹಾರಗಳು:**

- ಅಕ್ಷರಸ್ಥರನ್ನಾಗಿ ಮಾಡುವುದು. ಕಠಿಣ ಕಾನೂನುಗಳನ್ನು ಜಾರಿ ಮತ್ತು ಪರಿಣಾಮಕಾರಿ ಅನುಷ್ಠಾನ. ಅರಿವು ಮೂಡಿಸುವುದು. ಸಾಮಾಜಿಕ ಸಮಾನತೆ ಮತ್ತು ನ್ಯಾಯ ಒದಗಿಸುವುದು. ವೈಜ್ಞಾನಿಕ ಮನೋಭಾವವನ್ನು ಮೂಡಿಸುವುದು ಇತ್ಯಾದಿ

**ಉಪಸಂಹಾರ :–** ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಮಾಜಿಕ ಪಿಡುಗುಗಳನ್ನು ಬೇರುಸಹಿತ ಕಿತ್ತೊಗೆಯಬೇಕು. ಆ ಮೂಲಕ ಸಾಮಾಜಿಕ ಪಿಡುಗುಗಳನ್ನು ನಿವಾರಿಸಿ ಸಮಾಜ ಸ್ವಾಸ್ಥ್ಯವಾಗಿರಿಸಲು ಶ್ರಮಿಸಬೇಕು. ಆಗ ಮಾತ್ರ ನಮ್ಮ ಸಮಾಜ, ರಾಜ್ಯ, ದೇಶ ಅಭಿವೃದ್ಧಿಪಥದತ್ತ ಸಾಗಲು ಸಾಧ್ಯವೆಂದು ಹೇಳಬಹುದು.

*************

# ಗದ್ಯಪಾಠ 2. – ವ್ಯಾಘ್ರಗೀತೆ



## –ಎ ಎನ್ ಮೂರ್ತಿ ರಾವ್

**ಎ. ಎನ್ ಮೂರ್ತಿರಾವ್** ಮಂಡ್ಯ ಜಿಲ್ಲೆಯ **ಅಕ್ಕಿಹೆಬ್ಬಾಳಿನವರು.** ಇವರ ಕಾಲ ಕ್ರಿ .ಶ. 1900. ಇವರು **ಹಗಲುಗನಸುಗಳು, ಅಲೆಯುವ ಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು–ಮಿಂಚು, ಚಿತ್ರಗಳು– ಪತ್ರಗಳು, ಪೂರ್ವಸೂರಿಗಳೊಡನೆ, ಚಂಡಮಾರುತ, ದೇವರು** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ** ಲಭಿಸಿದೆ.

## ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಭಗವದ್ಗೀತೆಯನ್ನು ರಚಿಸಿದವರು ಯಾರು?**
ಭಗವದ್ಗೀತೆಯನ್ನು ರಚಿಸಿದವರು ವೇದವ್ಯಾಸರು.

**2. ಹುಲಿಗೆ ಪರಮಾನಂದವಾಗಲು ಕಾರಣವೇನು?**
ಶಾನುಭೋಗರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

**3. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?**
ಹುಲಿಗೆ ತಮ್ಮ ಮುಖ ತೋರಿಸದಂತೆ ತಪ್ಪಿಸಿಕೊಳ್ಳಲು ಕುಂಬಾರನ ತಿಗರಿಯಂತೆ ಸುತ್ತುತ್ತಿದ್ದರಿಂದ ಶಾನುಭೋಗರಿಗೆ ತಲೆ ಸುತ್ತಲಾರಂಭಿಸಿತು.

**4. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?**
ಶಾನುಭೋಗರ ಬ್ರಹ್ಮಾಸ್ತ್ರ ಅವರ ಬಳಿ ಇದ್ದ ಖಿರ್ದಿ ಪುಸ್ತಕ.

**5. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**
ಹಸಿದು ಮಲಗಿದ್ದ ಹುಲಿಯು ಎಚ್ಚೆತ್ತು "ವಿಧಿಯು ಈ ದಿನ ತನಗೆ ಆಹಾರವಾಗಿ ಏನನ್ನು ಒದಗಿಸುವುದೋ" ಎಂದು ಯೋಚಿಸಿತು.

## ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

**1. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?**
ಶಾನುಭೋಗರು ತಮ್ಮ ಹಳ್ಳಿಯನ್ನು ತಲುಪಲು ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. ಕಾಡುದಾರಿಯಲ್ಲಿ ಹೋಗುತ್ತಾ "ಕತ್ತಲಾದರೂ ಬೆಳದಿಂಗಳು ಇದೆ. ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ತಲುಪಬಹುದು" ಎಂದು ಯೋಚಿಸಿದರು.

**2. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?**

ಹುಲಿಯು ಒಳ್ಳೆಯ ವಂಶದಲ್ಲಿ ಜನಿಸಿತ್ತು. ಹಿಂದಿನಿಂದ ಹಾರಿ ಕೊಲ್ಲುವುದು ಧರ್ಮವಲ್ಲ ಎಂದು ತಿಳಿದಿತ್ತು. ಪುಣ್ಯಕೋಟಿಯ ಕತೆ ಹಾಗೂ 'ಸ್ವಧರ್ಮವೇ ನಿಧನಂ ಶ್ರೇಯಃ' ಎಂಬ ಭಗವದ್ಗೀತೆಯ ಮಾತು ನೆನಪಾಯಿತು. ಅದ್ದರಿಂದ ಹುಲಿಯು ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

**3. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ವಿವರಿಸಿ.**

ಶಾನುಭೋಗರು ಮದಲಿಂಗನ ಕಣಿವೆಯಲ್ಲಿ ಮೂರ್ಛೆ ತಪ್ಪಿದ್ದರು. ಕೆಲವು ರೈತರು ಅದೇ ಮಾರ್ಗ ಗಾಡಿಯಲ್ಲಿ ಹಿಂದಿರುಗುತ್ತಿದ್ದರು. ಶಾನುಭೋಗರು ಇದ್ದ ಹರಿದಾರಿ ದೂರದಲ್ಲೇ ಗಾಡಿ ನಿಂತಿತು. ಎತ್ತುಗಳು ಮುಂದೆ ಹೋಗದೆ ನಿಂತವು. ಅಷ್ಟರಲ್ಲಿ ಹುಲಿಯ ಘರ್ಜನೆ ಕೇಳಿಸಿತು. ರೈತರು ಗುಂಡು ಹಾರಿಸಿದರು. ಹುಲಿ ಹೆದರಿ ಓಡಿ ಹೋಯಿತು. ರೈತರು ಪಂಜು ಹೊತ್ತಿಸಿಕೊಂಡು ಮುಂದೆ ಬಂದರು. ಶಾನುಭೋಗರನ್ನು ಕಂಡರು ನೀರನ್ನು ಸಿಂಪಡಿಸಿ ಎಚ್ಚರಿಸಿದರು.

## ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸಿ.

**1. ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.**

ಹುಲಿ ಎಂದರೆ ಕ್ರೂರಪ್ರಾಣಿ ಕೊಂದು ತಿನ್ನುವುದೊಂದೆ ಅದರ ಸ್ವಭಾವ ಎಂದು ಭಾವಿಸುವವರು ಸಾಕಷ್ಟು ಜನರಿದ್ದಾರೆ. ಆದರೆ ಹುಲಿ ಆಹಾರಕ್ಕಾಗಿ ಬೇಟೆಯಾಡಿ ಪ್ರಾಣಿಗಳನ್ನು ಕೊಂದು ತಿನ್ನುವುದೇನೋ ಉಂಟು. ಆದರೆ ನಿಷ್ಪಕ್ಷಪಾತವಾದ ದೃಷ್ಟಿಯಿಂದ ನೋಡಿದರೆ ಅದರಲ್ಲಿ ತಪ್ಪೇನು ಇಲ್ಲ ಯಾಕೆಂದರೆ ಅವು ಮೂಲತಃ ಮಾಂಸಹಾರಿಗಳು. ಶಾಕಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಮಾಂಸಹಾರಿಯಾದ ಹುಲಿಯಲ್ಲಿ ಅದೊಂದು ದೊಡ್ಡ ಅಪರಾಧವೇನಲ್ಲ. ಅದು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದರಲ್ಲಿ ತಪ್ಪೇನು ಇಲ್ಲ ಆದರೆ ಹಾಗೆ ಕೊಲ್ಲುವಾಗ ಯಾವುದಾದರೊಂದು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೇ ಅಥವಾ ಧರ್ಮಾಧರ್ಮಗಳ ಲೆಕ್ಕವನ್ನೇ ಇಡದೆ ಸ್ವಚ್ಛಂದದಿಂದ ವರ್ತಿಸುತ್ತದೆಯೇ ಎಂಬುದೇ ಇಲ್ಲಿ ಮುಖ್ಯ ಪ್ರಶ್ನೆ. ಹುಲಿಗೆ ಧರ್ಮವೇನು ಬಂತು ಎನ್ನಬಹುದು. ಇತರ ದೇಶಗಳಲ್ಲಿರುವ ಹುಲಿಗಳ ವಿಷಯ ಹೇಗೋ ನನಗೆ ತಿಳಿಯದು ಆದರೆ ಭರತ ಖಂಡದ ಹುಲಿಗಳ ಧರ್ಮಶ್ರದ್ಧೆಯನ್ನು ಅನುಸರಿಸಿ ಬೇಟೆಯಾಡುತ್ತವೆ. ಎಂತಹ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಮಹರ್ಷಿ ವೇದವ್ಯಾಸರಿಂದ ರಚಿತವಾದ ಭಗದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಇಂತಹ ಈ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮದಿಂದ ನಡೆದುಕೊಳ್ಳುವುದಿಲ್ಲ ಯಾರನ್ನೇ ಆಗಲಿ ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ ಆದುದರಿಂದಲೇ ಹುಲಿಯು ಶಾನುಭೋಗರನ್ನು ಹಿಂದಿನಿಂದ ಹಾರಿ ಕೊಲ್ಲಲಿಲ್ಲ

**2. ಶಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ? ಹುಲಿಯ ಧರ್ಮವೇ? ಸಮರ್ಥನೆಯೊಂದಿಗೆ ವಿವರಿಸಿ.**

ಹುಲಿಯ ಗಮನವನ್ನು ಬೇರೆಡೆಗೆ ಸೆಳೆದ, ಅರೆ ನಿಮಿಷದ ಅವಕಾಶವನ್ನು ಒದಗಿಸಿಕೊಟ್ಟು ನನ್ನ ಪ್ರಾಣವನ್ನು ತಿಳಿದು ಅದಕ್ಕೆ ಅನಣತ ವಾತ್ಸಲ್ಯದಿಂದ, ಕೃತಜ್ಞತೆಯನ್ನು ಸಲ್ಲಿಸಿದ ಶಾನುಭೋಗರ ಮನಸ್ಸನ್ನು ಗಮಿಸಿದರೆ ಖಿರ್ದಿಪುಸ್ತಕವೇ ನನ್ನನ್ನು ರಕ್ಷಿಸಿತು ಎಂದು ತಿಳಿದಿದ್ದಾರೆ. ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದದ್ದು ಖೀರ್ಧಿಪುಸ್ತದಿಂದಲ್ಲ ಹುಲಿಯ ಧರ್ಮ ಶ್ರದ್ಧೆಯಿಂ ಎಂದು ಹೇಳಬಹುದು. ಏಕೆಂದರೆ ಅವರ ದುಂಡುದುಂಡಾದ ಶರೀರವನ್ನು ನೋಡಿದ ಹುಲಿ ಅವರು ಬೆನ್ನು ತಿರುಗಿಸಿ ನಡೆಯುತ್ತಿದ್ದರೂ ಮೇಲೆ ಬಿದ್ದು ಕೊಲ್ಲಬಹುದಾಗಿತ್ತು. ಶಾನುಭೋಗರು ಎಚ್ಚರ ತಪ್ಪಿ ಬಿದ್ದಿದ್ದಾಗ ಅವರನ್ನು ಎಳೆದುಕೊಂಡು ಹೋಗಬಹುದಾಗಿತ್ತು. ಆದರೆ ಹುಲಿ ಹಾಗೆ ಮಾಡಲಿಲ್ಲ ಏಕೆಂದರೆ ಭರತಖಂಡದ ಹುಲಿಗಳು ಶತ್ರುವನ್ನಾದರೂ ಸರಿ ಬೆನ್ನ ಹಿಂದಿನಿಂದ ಹಾರಿ ಕೊಲ್ಲುವುದು ಧರ್ಮವಲ್ಲ ಎಂದು ನಂಬಿರುವವು. ಶಾನುಭೋಗರು ಬೆನ್ನನ್ನು ಮೇಲೆ ಮಾಡಿದ್ದರಿಂದ ಅವರನ್ನು ಕೊಲ್ಲದೆ ಹಾಗೆ ಬಿಟ್ಟಿತು. ಹುಲಿಯ ಧರ್ಮ ಶ್ರದ್ಧೆಯಿಂದ ಶಾನುಭೋಗರು ಉಳಿದುಕೊಂಡರು. ಖಿರ್ದಿ ಪುಸ್ತಕದಿಂದ ಅಲ್ಲ.

## ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ.

**1. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿ ರಕ್ತವಿದೆಕೋ".**

ಆಯ್ಕೆ :– ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಂಡಿದೆ.

ಸಂದರ್ಭ :- ಶಾನುಭೋಗರು ಮದಲಿಂಗನ ಕಣಿವೆಯಲ್ಲಿ ಹೋಗುವಾಗ, ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂ ಸರಿಯೆ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು ಗೊಂದಲಕ್ಕೆ ಒಳಗಾಯಿತು. ಆಗ ಈ ಮಾತನ್ನು ನೆನಪಿಸಿಕೊಂಡಿತು.

ಸ್ವಾರಸ್ಯ :- ಪುಣ್ಯಕೋಟಿಯು ತನ್ನನ್ನು ತಿನ್ನುವಂತೆ ಕೇಳಿಕೊಂಡರೂ, ಸತ್ಯವಂತೆಯಾದ ಪುಣ್ಯಕೋಟಿ ಯನ್ನು ತಿನ್ನದೆ ಹುಲಿ ತನ್ನ ಪ್ರಾಣವನ್ನು ಬಿಟ್ಟಿತು. ಇದರ ಮೂಲಕ ಹುಲಿ ತನ್ನ ಧರ್ಮ ಮತ್ತು ಆದರ್ಶವನ್ನು ಮೆರೆಯಿತು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**2. "ಸ್ವಧರ್ಮವೇ ನಿಧನಂ ಶ್ರೇಯಃ".**

ಆಯ್ಕೆ :- ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಂಡಿದೆ

ಸಂದರ್ಭ :- ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂ ಸರಿಯೆ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂದು ತನ್ನ ಧರ್ಮವನ್ನು ನೆನೆದು ಗೊಂದಲಕ್ಕೆ ಒಳಗಾಯಿತು. ಆಗ ಭಗವದ್ಗೀತೆಯ ಈ ಮಾತು ನೆನಪಿಗೆ ಬಂದಿತು.

ಸ್ವಾರಸ್ಯ :- ಹುಲಿಗೆ ಎಷ್ಟೇ ಹಸಿವಾಗಿದ್ದರೂ, ತನ್ನ ಬೇಟೆಯ ಧರ್ಮವನ್ನು ಬಿಡದೆ ಭಗವದ್ಗೀತೆಯ ಈ ಮಾತನ್ನು ನೆನಪಿಸಿಕೊಂಡಿತು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**3. "ದೇವರೇ, ಮರ ಹತ್ತುವಷ್ಟು ಅವಕಾಶ ಕರುಣಿಸು"**

ಆಯ್ಕೆ :- ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಂಡಿದೆ

ಸಂದರ್ಭ :- ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಖಿರ್ದಿ ಪುಸ್ತಕವನ್ನು ಹುಲಿಯ ಮೇಲೆ ಎಸೆದು ಮರದ ಕಡೆ ಓಡುವಾಗ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- ಕಷ್ಟ ಬಂದಾಗ ನಿವಾರಣೆಗಾಗಿ ದೇವರ ಮೊರೆ ಹೋಗುತ್ತೇವೆ ಎಂಬುದು ಈ ಮಾತಿನ ಸ್ವಾರಸ್ಯ.

**4. "ನಾನು ಬೆನ್ನು ಮೇಲಾಗಿ ಬಿದ್ದಿದ್ದೇನೆ".**

ಆಯ್ಕೆ :- ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಂಡಿದೆ

ಸಂದರ್ಭ :- ಶಾನುಭೋಗರು ಮೂರ್ಛೆಯಿಂದ ಎಚ್ಚರಗೊಂಡಾಗ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- ಪ್ರಜ್ಞೆತಪ್ಪಿ ಬಿದ್ದಿದ್ದರೂ ಸಹ ಹುಲಿ ಏಕೆ ಆಕ್ರಮಣ ಮಾಡಲಿಲ್ಲ? ಎಂಬ ಪ್ರಶ್ನೆಗೆ ಶಾನುಭೋಗರೇ ಕಂಡುಕೊಂಡ ಉತ್ತರವು ಈ ಮಾತಿನ ಸ್ವಾರಸ್ಯವಾಗಿದೆ.

**5. "ಹುಲಿ ಈಗ ಎಷ್ಟು ಹಸಿದಿರಬೇಕು".**

ಆಯ್ಕೆ :- ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಂಡಿದೆ

ಸಂದರ್ಭ :- ಹುಲಿಯ ಆಕ್ರಮಣದಿಂದ ತಪ್ಪಿಸಿಕೊಂಡು ಬಂದ ಶಾನುಭೋಗರು, ಮನೆಯಲ್ಲಿ ರಸದೂಟ ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- ನಾನು ಹುಲಿಯಿಂದ ತಪ್ಪಿಸಿಕೊಂಡು ಬಂದು ಊಟ ಮಾಡಿದೆ. ಆದರೆ ಬೇಟೆಗೆ ಬಂದ ಹುಲಿ ನನ್ನನ್ನು ಕೊಲ್ಲಲಾಗದೆ ಹಸಿವಿನಿಂದ ಬಳಲುತ್ತಿರಬಹುದು ಎಂಬ ಮಾನವೀಯತೆಯ ಧ್ವನಿ ಈ ಮಾತಿನ ಸ್ವಾರಸ್ಯವಾಗಿದೆ.

## ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ.

1. ಮಂತ್ರಿತ್ವ ಹೋಗಿ ಕೇವಲ ಶಾನುಭೋಗಿಕೆ ಮಾತ್ರ ಉಳಿದಿತ್ತು.
2. ಖಿರ್ದಿ ಪುಸ್ತಕ ಶಾನುಭೋಗರ ಬ್ರಹ್ಮಾಸ್ತ್ರ.
3. ನೆಲದಿಂದ ನೆಲದಿಂದ ಮೇಲೆದ್ದುಕೊಂಡಿದ್ದ ಕಲ್ಲನ್ನು ಎಡವಿ ಶಾನು ಬೋಗರು ಬಿದ್ದರು
4. ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆಯುತ್ತಿದ್ದರು.

5. ಶಾನುಭೋಗರು ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ.

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆ ಪದಕ್ಕಿರುವ ಸಂಬಧವನ್ನು ಬರೆಯಿರಿ.**

**1. ರಾಜ : ರಾಯ :: ನಿಧಿ : ಬಿದಿ**

**2. ಮುಂಭಾಗ : ಭಾಗದ+ಮುಂದೆ :: ಇಮ್ಮಡಿ :ಎರಡು+ನುಡಿ**

**3. ರಸದೂಟ : ಲೋಪಸಂಧಿ :: ಬ್ರಹ್ಮಾಸ್ತ್ರ :ಸವರ್ಣ ಧೀರ್ಘಸಂಧಿ**

**4. ಹುಲಿ : ರೂಢನಾಮ :: ಆಟ : ಭಾವನಾಮ**

**5. ದೇಹ : ಶರೀರ :: ಆಯುಧ : ಹತಾರ**

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಕನ್ನಡ ಸಂಧಿಗಳನ್ನು ಹೆಸರಿಸಿ, ಎರಡೆರಡು ಉದಾಹರಣೆಗಳನ್ನು ಬರೆಯಿರಿ.**

ಉತ್ತರ: ಕನ್ನಡ ಸಂಧಿಗಳು ಮೂರು. ಅವೆಂದರೆ

**1. ಲೋಪಸಂಧಿ**

ಉದಾ: ಊರೂರು=ಊರು+ಊರು; ಬಲ್ಲೆನೆಂದು=ಬಲ್ಲೆನು+ಎಂದು

**2. ಆಗಮಸಂಧಿ**

ಕೃತಜ್ಞತೆಯನ್ನು=ಕೃತಜ್ಞತೆ+ಅನ್ನು; ಅಪರಾಧವೇನಲ್ಲ= ಅಪರಾಧ+ಏನಲ್ಲ

**3. ಆದೇಶಸಂಧಿ**

ಮಳೆಗಾಲ=ಮಳೆ+ಕಾಲ; ಮೈದೋರು=ಮೈ+ತೋರು

**2. ಸಂಸ್ಕೃತ ಸಂಧಿಗಳ ಹೆಸರುಗಳನ್ನು ಸ್ವರ ಮತ್ತು ವ್ಯಂಜನ ಸಂಧಿಗಳಾಗಿ ವಿಂಗಡಿಸಿ ಬರೆಯಿರಿ.**

ಉತ್ತರ:- **ಸಂಸ್ಕೃತ ಸ್ವರ ಸಂಧಿಗಳು**

1. ಸವರ್ಣದೀರ್ಘ ಸಂಧಿ 2. ಗುಣಸಂಧಿ 3. ವೃದ್ಧಿಸಂಧಿ 4. ಯಣ್ ಸಂಧಿ

**ಸಂಸ್ಕೃತ ವ್ಯಂಜನ ಸಂಧಿಗಳು**

1. ಜಸ್ತ್ವಸಂಧಿ 2. ಶ್ಚುತ್ವ ಸಂಧಿ 3. ಅನುನಾಸಿಕ ಸಂಧಿ

**3. ಕೊಟ್ಟಿರುವ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿ.**

**ಸುರಾಸುರ** = ಸುರ+ಅಸುರ – ಸವರ್ಣದೀರ್ಘ ಸಂಧಿ

**ಸೂರ್ಯೋದಯ** = ಸೂರ್ಯ+ಉದಯ –ಗುಣಸಂಧಿ

**ಅಷ್ಟೈಶ್ವರ್ಯ** = ಅಷ್ಟ+ಐಶ್ವರ್ಯ –ವೃದ್ಧಿಸಂಧಿ

**ಬಲ್ಲೆನೆಂದು** = ಬಲ್ಲೆನು+ಎಂದು – ಲೋಪಸಂಧಿ

**ಮಳೆಗಾಲ** = ಮಳೆ+ಕಾಲ – ಆದೇಶಸಂಧಿ

**ವೇದಿಯಲ್ಲಿ** = ವೇದಿ+ಅಲ್ಲಿ –ಆಗಮಸಂಧಿ

**ಆ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಯಾದ ನಾಲ್ಕನೆಯ ಪದ ಬರೆಯಿರಿ.**

1. ಬೇಗ ಬೇಗ : ದ್ವಿರುಕ್ತಿ : : ಧೀರ ಶೂರ : ________
2. ಲೋಪ ಸಂಧಿ : ಸ್ವರ ಸಂಧಿ : : ಆದೇಶ ಸಂಧಿ : ________
3. ಕಟ್ಟಕಡೆಗೆ : ಕಡೆಗೆ ಕಡೆಗೆ : : ಮೊತ್ತಮೊದಲು : ________
4. ಶರಚ್ಚಂದ್ರ : ಶ್ಚುತ್ವ ಸಂಧಿ : : ದಿಗಂತ : ________

**ಉತ್ತರಗಳು: ೧. ಜೋಡಿಪದ, ೨. ವ್ಯಂಜನ ಸಂಧಿ, ೩. ಮೊದಲು ಮೊದಲು, ೪. ಜಸ್ತ್ವಸಂದಿ**

## ಗಾದೆಗಳನ್ನು ವಿಸ್ತರಿಸಿ ಬರೆಯಿರಿ.

### 1.ಕಟ್ಟುವುದು ಕಠಿಣ; ಕೆಡಹುವುದು ಸುಲಭ

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ವೇದಗಳ ತಲೆದಿಂಬು. ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ. ಅಂತಹ ಗಾದೆಗಳಲ್ಲಿ ಇದೂ ಒಂದು

ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆಯು ಕಷ್ಟಪಟ್ಟು ದುಡಿದರೆ ಸುಖ ಎಂಬರ್ಥವನ್ನು ಕೊಡುತ್ತದೆ. ಕುಳಿತು ತಿಂದರೆ ಕುಡಿಕೆ ಹೊನ್ನು ಸಾಲದು ಎಂಬ ಮಾತಿದೆ. ಜೀವನೋಪಾಯಕ್ಕಾಗಿ ಯಾವುದಾದರೂ ಒಂದು ಕೆಲಸವಿರಬೇಕು. ಕಷ್ಟಪಟ್ಟು ದುಡಿದರೆ ಜೀವನ ಸುಖವಾಗಿರುತ್ತದೆ. **ಕರ್ಮಣ್ಯೇವಾಧಿಕಾಸ್ತೇ ಮಾ ಫಲೇಷು ಕದಾಚನ** ಎಂಬ ಗೀತೆಯ ಮಾತು ಇದನ್ನೇ ಹೇಳುವುದು.

### 2. 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ'

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ವೇದಗಳ ತಲೆದಿಂಬು. ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ. ಅಂತಹ ಗಾದೆಗಳಲ್ಲಿ 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಎಂಬುದು ಒಂದು ಪ್ರಸಿದ್ಧ ಗಾದೆ ಮಾತಾಗಿದೆ.

ಕುಂಬಾರನು ಒಂದು ಮಡಕೆಯನ್ನು ಮಾಡಬೇಕಾದರೆ ಮಣ್ಣನ್ನು ತಂದು ಹದಗೊಳಿಸಿ, ಅದಕ್ಕೊಂದು ರೂಪವನ್ನು ಕೊಟ್ಟು, ಬೇಯಿಸಬೇಕಾಗಿದೆ. ಇದಕ್ಕೆ ಬಹಳಷ್ಟು ಶ್ರಮ, ಹಣ ಹಾಗು ಸಮಯ ಬೇಕಾಗುತ್ತದೆ. ಆದರೆ ಇಂತಹ ಒಂದು ಮಡಕೆಯನ್ನು ಕೇವಲ ಒಂದು ದೊಣ್ಣೆಯಿಂದ ಒಂದೇ ನಿಮಿಷದಲ್ಲಿ ನಾಶ ಮಾಡಬಹುದಾಗಿದೆ. ಇದಕ್ಕೆ ಹೇಳುವುದು **'ಕುಂಬಾರನಿಗೆ ವರುಷ,** ದೊಣ್ಣೆಗೆ ನಿಮಿಷ'. ಈ ಗಾದೆಯು **'ಕಟ್ಟುವುದು ಕಠಿಣ, ಕೆಡಿಸುವುದು ಸುಲಭ'** ಎಂಬ ಗಾದೆಗೆ ಸಂವಾದಿಯಾಗಿದೆ.

## ಉ) ಈ ವಿಷಯಗಳಿಗೆ ಪ್ರಬಂಧ ಬರೆಯಿರಿ.

## 1. ಸ್ವಚ್ಛಭಾರತ ಅಭಿಯಾನ

ಪೀಠಿಕೆ:– ಭವ್ಯ ಭಾರತ ನಿರ್ಮಾಣದ ಕನಸ್ಸನ್ನು ಕಾಣುತ್ತಿರುವ ಸನ್ಮಾನ್ಯ ಪ್ರಧಾನಮಂತ್ರಿಯವರಾದ ಶ್ರೀ ನರೇಂದ್ರ ಮೋದಿಯವರ ಕನಸಿನ ಕೂಸು ಸ್ವಚ್ಛ ಭಾರತ ಅಭಿಯಾನ ಯೋಜನೆ. ಇದನ್ನು ಪ್ರಧಾನಮಂತ್ರಿಯವರು ದಿನಾಂಕ: 2/10/2014 ರಂದು ಗಾಂಧೀಜಿಯವರ ಜನ್ಮದಿನದಂದು ಘೋಷಿಸಿದರು. ಇದು ಸಮುದಾಯ ಅಭಿವೃದ್ಧಿ ಕಾರ್ಯಕ್ರಮವಾದ 'ನಿರ್ಮಲ ಭಾರತ ಅಭಿಯಾನದ' ಮುಂದುವರೆದ ಭಾಗವಾಗಿದೆ.

**ವಿಷಯ ನಿರೂಪಣೆ:–**

**ಉದ್ದೇಶಗಳು:**

* ಬಯಲು ಮುಕ್ತ ಶೌಚಾಲಯಗಳನ್ನು ರೂಪಿಸುವುದು.
* ಸ್ವಚ್ಛತೆಗೆ ಒತ್ತು ಹಾಗು ಒಳಚರಂಡಿ ವ್ಯವಸ್ಥೆ
* ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಆದ್ಯತೆ ನೀಡುವುದು.
* ತ್ಯಾಜ್ಯಗಳ ಸಮರ್ಪಕ ಸಂರಕ್ಷಣೆ ಹಾಗು ನಿರ್ವಹಣೆ

ಇವೇ ಮೊದಲಾದ ಘನೋದ್ದೇಶಗಳನ್ನು ಕಾರ್ಯಕ್ರಮವು ಹೊಂದಿದೆ. ಈ ಕಾರ್ಯಕ್ರಮಕ್ಕೆ ಆಯವ್ಯಯದಲ್ಲಿ ಸಾಕಷ್ಟು ಹಣ ನಿಗದಿ ಮಾಡಿದ್ದು, ಅನುಷ್ಟಾನಕ್ಕಾಗಿ ವಿಶೇಷ ವ್ಯಕ್ತಿಗಳು, ನಟರು ಹಾಗು ಸಮಾಜ ಸೇವಕರು ರಾಯಭಾರಿಗಳಾಗಿ ತೊಡಗಿಸಿಕೊಂಡಿದ್ದಾರೆ. ಅಲ್ಲದೆ ಘನವೆತ್ತ ಭಾರತ ಸರ್ಕಾರವು ಸ್ವಚ್ಛ ನಗರಗಳನ್ನು ಗುರುತಿಸಿ, ಪ್ರೋತ್ಸಾಹಿಸುತ್ತಿದೆ.

ಮುಕ್ತಾಯ:– ಗಾಂಧೀಜಿಯವರು ಕಂಡಿದ್ದ ಸ್ವಚ್ಛ ಭಾರತದ ಕನಸನ್ನು ನನಸಾಗಿಸಲು ಪ್ರತಿಯೊಬ್ಬ ನಾಗರಿಕನು ಕೈ ಜೋಡಿಸಿದ್ದಲ್ಲಿ ಸಕಾರಗೊಳಿಸಬಹುದಾಗಿದೆ.

### 2. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

ಪೀಠಿಕೆ:– ಯಾವುದೇ ಒಂದು ದೇಶದ ಇತಿಹಾಸವನ್ನು ತಿಳಿಯಬೇಕಾದರೆ ಪ್ರಾಚ್ಯವಸ್ತುಗಳು ಪ್ರಮುಖ ಪಾತ್ರ ವಹಿಸುತ್ತವೆ. ಅದೇ ರೀತಿಯಾಗಿ ಭಾರತದ ಹಾಗೂ ಕರ್ನಾಟಕ ಇತಿಹಾಸದ ಮಹತ್ವದ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಾಚ್ಯವಸ್ತುಗಳು ಬಹಳ ಮುಖ್ಯವಾಗಿರುತ್ತವೆ. ಅವುಗಳೆಂದರೆ ಶಾಸನಗಳು, ನಾಣ್ಯಗಳು, ಪ್ರಾಚೀನ ದೇವಾಲಯಗಳು, ತಾಮ್ರಪಟ, ತಾಳೆಗರಿ ಮುಂತಾದ ಪ್ರಾಚ್ಯವಸ್ತುಗಳನ್ನು ಸಂರಕ್ಷಿಸುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ .

**ವಿಷಯ ನಿರೂಪಣೆ:–** ಪ್ರಾಚ್ಯ ವಸ್ತುಗಳ **ಸಂರಕ್ಷಿಸಲು ಕೈಗೊಳ್ಳಬೇಕಾದ ಕ್ರಮಗಳು** –

* ಪ್ರಾಚ್ಯವಸ್ತುಗಳ ಮಹತ್ವವನ್ನು ಪ್ರತಿಯೊಬ್ಬರಿಗೂ ತಿಳಿಸಿ ಕೊಡಬೇಕು.
* ಪ್ರಾಚ್ಯವಸ್ತುಗಳ ಸಂರಕ್ಷಣೆಗಾಗಿ ಇಲಾಖೆಯಿಂದ ವಿಶೇಷ ಕಾಳಜಿ ವಹಿಸುವುದು ಹಾಗೂ ಕಾನೂನುಗಳನ್ನು ರೂಪಿಸುವುದು.

* ಪ್ರಾಚ್ಯವಸ್ತುಗಳ ಕೇಂದ್ರಗಳನ್ನು ಪ್ರವಾಸಿ ತಾಣಗಳನ್ನಾಗಿ ಪರಿವರ್ತಿಸುವುದು.
* ಪ್ರಾಚ್ಯವಸ್ತುಗಳ ಸ್ಥಳ, ಕೇಂದ್ರಗಳನ್ನು ಪುನರುಜ್ಜೀವನಗೊಳಿಸುವುದು.
* ಐತಿಹಾಸಿಕ ಕೇಂದ್ರಗಳಲ್ಲಿ ವಸ್ತುಸಂಗ್ರಹಾಲಯಗಳನ್ನು ನಿರ್ಮಿಸಿ ಪ್ರಾಚ್ಯವಸ್ತುಗಳನ್ನು ಸಂರಕ್ಷಿಸುವುದು.
* ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿದ ಜನರಿಗೆ ಪ್ರೋತ್ಸಾಹ ನೀಡುವುದು.
* ಐತಿಹಾಸಿಕ ಸ್ಥಳಗಳಲ್ಲಿ ಜನವಸತಿಯನ್ನು ನಿಷೇಧಿಸುವುದು.
* ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರಾಚ್ಯ ವಸ್ತುಗಳ ಸಂರಕ್ಷಣೆ ಕುರಿತು ಮಾಧ್ಯಮಗಳ ಮೂಲಕ ಜಾಹೀರಾತು ನೀಡುವುದು.
* ಪ್ರಾಚ್ಯವಸ್ತುಗಳ ಮಹತ್ವವನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸುವುದು.

ಮುಕ್ತಾಯ:- ನಮ್ಮ ದೇಶ ಐತಿಹಾಸಿಕವಾಗಿ ತನ್ನದೆ ಆದ ಪ್ರಾಮುಖ್ಯತೆ ಪಡೆದರೂ ಕೂಡ ಬೇರೆ ದೇಶಗಳಿಗೆ ಹೋಲಿಸಿದರೆ ಪ್ರಾಚ್ಯ ವಸ್ತುಗಳ ಸಂರಕ್ಷಣೆಗೆ ನಾವು ನೀಡುವ ಪ್ರೋತ್ಸಾಹ ಹಾಗೂ ಸಂರಕ್ಷಣಾ ಕ್ರಮ ನೋಡಿದರೆ ಇನ್ನೂ ಕಡಿಮೆ ಎನಿಸುತ್ತದೆ. ಆದ್ದರಿಂದ ಪ್ರಾಚ್ಯ ವಸ್ತುಗಳು ಒಂದು ದೇಶದ ಆಸ್ತಿ ಇದ್ದ ಹಾಗೆ ಅವುಗಳ ಸಂರಕ್ಷಣೆ ನಮ್ಮ ನಿಮ್ಮೆಲ್ಲರ ಹೊಣೆ.

### 3. ರಾಷ್ಟ್ರೀಯ ಭಾವೈಕ್ಯ

ಪೀಠಿಕೆ:- ಭಾರತವು ಅನೇಕ ಜನಾಂಗಗಳು, ಪಂಗಡಗಳು ಇರುವಂತಹ ಒಂದು ವಿಶಾಲ ರಾಷ್ಟ್ರ. ಇಲ್ಲಿ ವಿವಿಧ ಭಾಷೆ, ಸಂಸ್ಕೃತಿ, ಧರ್ಮ, ಜಾತಿಗಳ ಜನರು ತಮ್ಮ ವಿವಿಧತೆಯನ್ನು ಮರೆತು ನಾವೆಲ್ಲರೂ ಭಾರತೀಯರು ಎಂಬ ರಾಷ್ಟ್ರೀಯ ಮನೋಭಾವನೆಯನ್ನು ಹೊದಿರುವುದೇ **ರಾಷ್ಟ್ರೀಯ ಭಾವೈಕ್ಯತೆ.**

ವಿಷಯ ನಿರೂಪಣೆ:- ಭಾರತವು ಪ್ರಜಾಪ್ರಭುತ್ವ ತಳಹದಿಯ ಮೇಲೆ ರೂಪಿತವಾಗಿರುವ ಒಂದು ಜಾತ್ಯತೀತ ರಾಷ್ಟ್ರವಾಗಿದ್ದು ಪ್ರತಿಯೊಂದು ಧರ್ಮೀಯರು ತಮ್ಮ ಸಂಪ್ರದಾಯ, ಪದ್ಧತಿಗಳನ್ನು ಅಚರಿಸಲು ಅವಕಾಶವಿದೆ.

ಭಾರತವು ವಿವಿಧ ಧರ್ಮ, ಭಾಷೆ, ಬುಡಕಟ್ಟು, ಜನಾಂಗಗಳನ್ನು ಹೊದಿಂದ್ದು, ವೈವಿದ್ಯತೆಯನ್ನು ಕಾಣುತ್ತೇವೆ. ದೇಶದ ಎಲ್ಲ ಭಾಗಗಳಲ್ಲಿಯೂ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಭೌಗೋಳಿಕವಾಗಿ ; ನಂಬಿಕೆ ಮತ್ತು ಆಚರಣೆಗಳಲ್ಲಿ ವೈವಿಧ್ಯತೆಯನ್ನು ಹೊಂದಿದೆ. ಆದರೂ ನಮ್ಮಲ್ಲಿ ನಾವು ಭಾರತೀಯತೆ ಎಂಬ ಬಲವಾದ ಬೇರಿದೆ. ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರಲಾಂಛನ ಇವು ನಮ್ಮ ಏಕತೆಯ ಸಂಕೇತಗಳಾಗಿದ್ದು ದೇಶಪ್ರೇಮ, ದೇಶಾಭಿಮಾನವನ್ನು ಮೂಡಿಸುತ್ತವೆ. ಇಡೀ ದೇಶವೇ ವೈವಿಧ್ಯಮಯವಾದ ಸಾಂಸ್ಕೃತಿಕ ಪರಿಸರದಲ್ಲಿರುವಾಗ ನಾವು ಒಂದೇ ಮನೆಯವರಂತೆ ಕೂಡಿ ಬಾಳುತ್ತಿರುವುದು ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಬಹುದು.

ಮುಕ್ತಾಯ:- ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯ ಗಾಳಿಯು ಇಡೀ ವಿಶ್ವವನ್ನೇ ನಡುಗಿಸುತ್ತಿದೆ. ಆದರೆ ಭಾರತೀಯರಾದ ನಾವು ಮಾತ್ರ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಪ್ರೀತಿ ಹಾಗೂ ಸೌಹಾರ್ದತೆಯಿಂದ ನಡೆದುಕೊಳ್ಳುತ್ತಾ, ನಮ್ಮ ದೇಶದ ಏಕತೆಯನ್ನು ಎತ್ತಿ ಹಿಡಿದಿದ್ದೇವೆ.

# ಗದ್ಯ ಪಾಠ-3. ಭಾಗ್ಯ ಶಿಲ್ಪಿಗಳು.

## ( 1.ನಾಲ್ವಡಿ ಕೃಷ್ಣರಾಜ ಒಡೆಯರ್, 2.ಸರ್.ಎಂ.ವಿಶ್ವೇಶ್ವರಯ್ಯ )

**ಡಿ. ಎಸ್. ಜಯಪ್ಪಗೌಡ**

**ಡಿ. ಎಸ್. ಜಯಪ್ಪಗೌಡ :- ಶ್ರೀ ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ ಅವರು ಕ್ರಿ. ಶ. 1947ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿಯಲ್ಲಿ ಜನಿಸಿದರು. ಇವರು ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು, ಕರ್ನಾಟಕ ಗ್ರಾಮೀಣ ಸಂಸ್ಥೆಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದ**

***ಅ) ಒಂದು ವಾಕ್ಯದಲ್ಲಿ ಉತ್ತರಿಸಿ.***

**1. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಕ್ತರಾದರು?**

ನಾಲ್ವಡಿ ಕೃಷ್ಣರಾಜ ಒಡೆಯರು 1895ರಲ್ಲಿ ಪಟ್ಟಾಭಿಷಕ್ತರಾದರು

**2. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾಗಿದ್ದರು?**

ನಾಲ್ವಡಿಯವರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ದರಾದರು

**3. ಏಷ್ಯಾ ಖಂಡದಲ್ಲೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು?**

ಶಿವನ ಸಮುದ್ರದ ಬಳಿ ಕಾವೇರಿ ನದಿಯ ಜಲವಿದ್ಯುತ್ ಯೋಜನೆಯೆ ಏಷ್ಯಖಂಡದಲ್ಲಿ ಪ್ರಾರಂಭಿಸಿದ ಮೊದಲ ಜಲ ವಿದ್ಯುತ್ ಯೋಜನೆಯಾಗಿದೆ.

**4.ಬ್ರಿಟಿಷ್ ಸರಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?**

ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯನವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.

**5. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**

ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದರು.

**6.ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತದೆ?**

ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ "ಎಂಜಿನಿಯರ್ಸ್ ದಿನಾಚರಣೆ'ಯನ್ನು ಮಾಡಲಾಗುತ್ತಿದೆ.

***ಆ) ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.***

**1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾಗಿದ್ದವು?**

ನಾಲ್ವಡಿಯವರ ಕಾಲದಲ್ಲಿ 1. ಗ್ರಾಮ ನಿರ್ಮಲೀಕರಣ, 2.ವೈದ್ಯ ಸಹಾಯ, 3.ವಿದ್ಯಾ ಪ್ರಚಾರ,4. ನೀರಿನ ಸೌಕರ್ಯ, 5. ಪ್ರಯಾಣ ಸೌಲಭ್ಯ ಮುಂತಾದವು ಸ್ವಯಂ ಆಡಳಿತ ಕ್ಷೇತ್ರಗಳಾಗಿದ್ದವು.

**2. ನಾಲ್ವಡಿ ಕೃಷ್ಣರಾಜರ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?**

1900ರಲ್ಲಿಯೇ ಶಿವನ ಸಮುದ್ರ ಜಲವಿದ್ಯುತ್ ಯೋಜನೆ, 1907ರಲ್ಲಿ ವಾಣಿವಿಲಾಸ ಸಾಗರ ಯೋಜನೆ, 1911ರಲ್ಲಿ ಕೃಷ್ಣರಾಜ ಸಾಗರ ಯೋಜನೆ ಕಾರ್ಯರೂಪಕ್ಕೆ ಬಂದವು.

3. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?

ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು ಎಂದು ವಿಶ್ವೇಶ್ವರಯ್ಯನವರು ಶಿಕ್ಷಣದ ಬಗ್ಗೆ ಹೇಳಿದ್ದಾರೆ.

**4. ನೆಹರೂ ಅವರು ಸರ್.ಎಂ.ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**

ನೆಹರೂ ಅವರು ಸರ್.ಎಂ.ವಿಶ್ವೇಶ್ವರಯ್ಯ ಅವರ ಬಗ್ಗೆ ಮಾತನಾಡುತ್ತಾ 'ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ಅಪಕೀರ್ತಿ ನಮ್ಮ ಮೇಲಿದೆ. ಆದರೆ ನೀವು ಈ ಮಾತಿಗೆ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಜೊತೆಗೆ ಹೆಚ್ಚು ಕೆಲಸ ಮಾಡಿದ್ದೀರಿ ಅದನ್ನು ನಾವು ತಮ್ಮಿಂದ ಕಲಿಯಬೇಕಿದೆ' ಎಂದು ಹೇಳಿದರು.

**5. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?**

ವಿಶ್ವೇಶ್ವರಯ್ಯ ಅವರು ತಮ್ಮ ಆಡಳಿತ ಅವಧಿಯಲ್ಲಿ ಹಣಕಾಸು ನೀತಿಯಲ್ಲಿ ಹಲವಾರು ಬದಲಾವಣೆ ತಂದರು. ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗಾಗಿ ಫೀಡರ್ ಬ್ಯಾಂಕ್ ಹಾಗೂ ಅಭಿವೃದ್ಧಿ ನಿಧಿಗಳನ್ನು ಸ್ಥಾಪಿಸಿದರು. ಸಾರ್ವಜನಿಕ ಜೀವವಿಮಾ ಯೋಜನೆಯನ್ನು ಜಾರಿಗೆ ತಂದರು. ರೈತರು ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರ ಬ್ಯಾಂಕುಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿ ಹಾಗೂ ಆದಾಯ ಹೆಚ್ಚಿಸಿದರು. ಆಯವ್ಯಯದಲ್ಲಿ ಹೊಸತನ ತಂದರು. ಹೀಗೆ ವಿಶ್ವೇಶ್ವರಯ್ಯ ಅವರು ಹಣಕಾಸು ನೀತಿಯಲ್ಲಿ ಮಾರ್ಪಾಡುಗಳನ್ನು ತಂದರು.

***ಇ) ಎಂಟು /ಹತ್ತು ವಾಕ್ಯಗಳಲ್ಲಿ ಉತ್ತರಿಸಿ.***

**1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಮಾದರಿ ರಾಜ್ಯ ಹೇಗಾಯಿತು?**

1902ರ ಆಗಸ್ಟ್ 8ನೇ ತಾರೀಖಿನಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿ ನಾಲ್ವಡಿಯವರ ಸುಪರ್ದಿಗೆ ಬಂದಿತು. ಆಗ ದಿವಾನರಾಗಿದ್ದ ಸರ್ ಕೆ ಶೇಷಾದ್ರಿ ಅಯ್ಯರ್‌ರವರ ಸಹಕಾರದೊಡನೆ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಕಂಕಣಬದ್ಧರಾದರು. ಇವರ ಕಾಲದಲ್ಲಿ ಇಡೀ ಭರತಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡಿತು ಆದ್ದರಿಂದ ಮೈಸೂರು ರಾಜ್ಯಕ್ಕೆ ಮಾದರಿ ಮೈಸೂರು ಎಂಬ ಕೀರ್ತಿ

ಪ್ರಾಪ್ತವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರು ಅರಸು ಮನೆತನದಿಂದ ಬಂದವರಾಗಿದ್ದರೂ ಸಹ ಜನತೆಯ ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯ ಪರವಾಗಿದ್ದರು.

**2. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.**

ವಿಶ್ವೇಶ್ವರಯ್ಯ ಅವರು ಮೈಸೂರಿನ ದಿವಾನರಾದ ನಂತರ ಕಛೇರಿ ಕೆಲಸಗಳಲ್ಲಿ ಸುಧಾರಣೆ ತಂದರು. ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ನ್ಯಾಯಾಂಗ ಮತ್ತು ಕಾರ್ಯಾಂಗಗಳಿಗೆ ಸ್ವತಂತ್ರ ಅಸ್ತಿತ್ವ ನೀಡಿದರು. ಸಮರ್ಥ ಕಾರ್ಯ ನಿರ್ವಹಣೆಗಾಗಿ ಸಮಿತಿಗಳನ್ನು ರಚಿಸಿದರು. ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು. ಭಾಷೆ, ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಿದರು. ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು. ಆರ್ಥಿಕ ಚಟುವಟಿಕೆಯಲ್ಲಿ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು.

**3. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.**

ವಿಶ್ವೇಶ್ವರಯ್ಯ ಅವರು, ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ ಎಂದು ನಂಬಿದರು. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು ಎಂದು ಸಾರಿದರು. ಮೈಸೂರಿನಲ್ಲಿ ವಿಶ್ವವಿದ್ಯಾನಿಲಯ ಸ್ಥಾಪಿಸಿದರು. ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದರು. ಬೆಂಗಳೂರಿನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸಿದರು. ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಿದರು. ಗೃಹ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿವೇತನ ಕೊಡುವ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು. ಹೀಗೆ ವಿಶ್ವೇಶ್ವರಯ್ಯ ಅವರು ಶಿಕ್ಷಣಕ್ಕಾಗಿ ಅಪಾರ ಕೊಡುಗೆ ನೀಡಿದ್ದಾರೆ.

***ಈ) ಸಂದರ್ಭಾನುಸಾರ ಸ್ವಾರಸ್ಯವನ್ನು ವಿವರಿಸಿ.***

**1. "ಸಾಮಾಜಿಕ ಕಾನೂನುಗಳ ಹರಿಕಾರ"**

ಆಯ್ಕೆ:- ಈ ವಾಕ್ಯವನ್ನು ಡಿ.ಜಯಪ್ಪಗೌಡ ರಚಿಸಿರುವ 'ದಿವಾನ್ ಸರ್ ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಗ್ರಂಥದಿಂದ ಆಯ್ದ 'ಭಾಗ್ಯಶಿಲಿಗಳು ಎಂಬ ಗದ್ಯ ಪಾಠದಿಂದ ಆರಿಸಲಾಗಿದೆ.

ಸಂದರ್ಭ;- ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಕೊಡುಗೆಗಳನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ. ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತದಲ್ಲಿ ವಿಕೇಂದ್ರೀಕರಣ ಮಾಡಿ ಮಾದರಿ ಮೈಸೂರು ಎನಿಸಿಕೊಂಡು ಸಾಮಾಜಿಕ ಕಾನೂನುಗಳ ಹರಿಕಾರರಾದರು. ಕಲೆ, ಸಾಹಿತ್ಯ ಸಂಗೀತ ಮುಂತಾದವುಗಳ ಅಭಿವೃದ್ಧಿಗೆ ಒತ್ತು ನೀಡಿದರು.

ಸ್ವಾರಸ್ಯ:- ಆಡಳಿತದಲ್ಲಿ ವಿಕೇಂದ್ರೀಕರಣವನ್ನು ತಂದು ಸಾಮಾಜಿಕ ಕಾನೂನನ್ನು ಜಾರಿಗೊಳಿಸಿರುವುದು ಒಪ್ಪುವಂತದ್ದಾಗಿದೆ.

**2. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."**

ಆಯ್ಕೆ:- ಈ ವಾಕ್ಯವನ್ನು ಡಿ.ಜಯಪ್ಪಗೌಡ ರಚಿಸಿರುವ 'ದಿವಾನ್ ಸರ್ ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಗ್ರಂಥದಿಂದ ಆಯ್ದ 'ಭಾಗ್ಯಶಿಲಿಗಳು ಎಂಬ ಗದ್ಯ ಪಾಠದಿಂದ ಆರಿಸಲಾಗಿದೆ.

ಸಂದರ್ಭ;- ವಿಶ್ವೇಶ್ವರಯ್ಯ ಅವರು ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲನ್ನು ಅಳವಡಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಹೀಗೆ ಹೇಳುತ್ತಾರೆ.

ಸ್ವಾರಸ್ಯ:- ವಿಶ್ವೇಶ್ವರಯ್ಯ ಅವರ ಬುದ್ಧಿಶಕ್ತಿ ಹಾಗೂ ಅನ್ವೇಷಣಾ ಸಾಮರ್ಥ್ಯ ಅಪರಿಮಿತವಾದುದು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**3. "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ".**

ಆಯ್ಕೆ:- ಈ ವಾಕ್ಯವನ್ನು ಡಿ.ಜಯಪ್ಪಗೌಡ ರಚಿಸಿರುವ 'ದಿವಾನ್ ಸರ್ ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಗ್ರಂಥದಿಂದ ಆಯ್ದ 'ಭಾಗ್ಯಶಿಲಿಗಳು ಗದ್ಯ ಪಾಠದಿಂದ ಆರಿಸಲಾಗಿದೆ.

ಸಂದರ್ಭ;- ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದರು. ಇದರಿಂದ ಸಂತಸಗೊಂಡ ಜನರು ಈ ರೀತಿ ಹಾಡಿ ಹೊಗಳುತ್ತಿದ್ದರು.

ಸ್ವಾರಸ್ಯ:- ವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದ ದಿವಾನರಾಗಿ ಮಾಡಿದ ಕಾರ್ಯಗಳು ಜನಮನವನ್ನು ಗೆದ್ದಿತು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**4. " ಮೊಟ್ಟ ಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು"**

ಆಯ್ಕೆ:- ಈ ವಾಕ್ಯವನ್ನು ಡಿ.ಜಯಪ್ಪಗೌಡ ರಚಿಸಿರುವ 'ದಿವಾನ್ ಸರ್ ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಗ್ರಂಥದಿಂದ ಆಯ್ದ 'ಭಾಗ್ಯಶಿಲಿಗಳು ಎಂಬ ಗದ್ಯ ಪಾಠದಿಂದ ಆರಿಸಲಾಗಿದೆ

ಸಂದರ್ಭ;- ನಾಲ್ವಡಿಯವರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದರು ಈ ಪ್ರಯುಕ್ತ ಮಹಿಳೆಯರಿಗೂ ಮತದಾನದ ಹಕ್ಕನ್ನು ನೀಡಿದರು, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ, ವಿಧವಾ ಮರು ವಿವಾಹ ಕಾಯ್ದೆ ಮುಂತಾದವುಗಳನ್ನು ಜಾರಿಗೆ ತಂದರು.

ಸ್ವಾರಸ್ಯ:- ಸ್ತ್ರೀಯರಿಗೆ ಸಮಾನವಾದ ಸ್ಥಾನಗಳಿಲ್ಲದ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟದ್ದು ಸ್ವಾರಸ್ಯಪೂರ್ಣವಾಗಿದೆ.

**ಉ) ಬಿಟ್ಟ ಸ್ಥಳವನ್ನು ಸರಿಯಾದ ಪದದಿಂದ ತುಂಬಿರಿ.**

೧. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಗೆ ರೀಜೆಂಟರಾಗಿ ಕಾರ್ಯನಿರ್ವಹಿಸಿದವರು____ (**ಅವರ ತಾಯಿ ಮಹಾರಾಣಿ ವಾಣಿವಿಲಾಸರವರು**)

೨. ೧೯೧೪ರಲ್ಲಿ ಶಾಲಾ ಪ್ರವೇಶಕ್ಕೆ _______ ನಿಷೇಧವಾಯಿತು. (ಜಾತಿ ವ್ಯವಸ್ಥೆಯ)

೩. ವಿಶ್ವೇಶ್ವರಯ್ಯ ಅವರು ಮುಂಬೈ ಪ್ರಾಂತ್ಯದಲ್ಲಿ _________ ಆಗಿ ಸೇವೆ ಪ್ರಾರಂಭಿಸಿದರು. (**ಸಹಾಯಕ ಎಂಜನಯರ್**)

೪. ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ ____________ ಅವರು ವಿಶ್ವೇಶ್ವರಯ್ಯ ಅವರನ್ನು ಮುಕ್ತಕಂಠದಿಂದ ಹಾಡಿ ಹೊಗಳಿದರು. (ಲಾಡ್ ಸಂಡ್ ಹರ್ಸನ್)

೫. ಭಾರತ ಸರಕಾರವು ವಿಶ್ವೇಶ್ವರಯ್ಯನವರಿಗೆ ____________ ಎಂಬ ಪ್ರಶಸ್ತಿ ನೀಡಿ ಗೌರವಿಸಿತು. (ಭಾರತ ರತ್ನ)

## ಭಾಷಾ ಚಟುವಟಿಕೆ

**ತತ್ಸಮ- ತದ್ಭವ ಪದ ಬರೆಯಿರಿ.**

ವಂಶ- ಬಂಚ, ಸ್ಥಾನ-ತಾನ(ತಾಣ). ಯಶ-ಜಸ, ಪಟ್ಟಣ- ಪತ್ತಣ, ಕಾರ್ಯ-ಕಜ್ಜ,

**ಅನ್ಯ ದೇಶ್ಯ ಪದಗಳು:-** ಡಿಪ್ಲೊಮೋ, ಅಜಮಾಯಿಸಿ, ದಿವಾನ, ಸೋಪು, ಕಾರ್ಖಾನೆ, ಕಾಗದ, ಕಛೇರಿ,

## ಗಾದೆ ಮಾತುಗಳ ವಿಸ್ತರಣೆ

### 1ಕೂಡಿ ಬಾಳಿದರೆ ಸ್ವರ್ಗ ಸುಖ

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ವೇದಗಳ ತಲೆದಿಂಬು. ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಈ ಗಾದೆಯು ಕಷ್ಟಪಡದೇ ಸುಖ ಸಿಗುವುದಿಲ್ಲ ಎಂಬುದನ್ನು ಧ್ವನಿಪೂರ್ಣವಾಗಿ ಹೇಳುತ್ತದೆ. ಕೈ ಕೆಸರಾಗುವುದು ದುಡಿಮೆಯನ್ನು ಸಂಕೇತಿಸಿದರೆ ಮೊಸರು ಎಂಬುದು ಅದರ ಪ್ರತಿಫಲವನ್ನು ಬಿಂಬಿಸುತ್ತದೆ. ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತು ಮೇಲಿನ ಗಾದೆಯನ್ನು ಪುಷ್ಟಿಕರೀಸುತ್ತದೆ.

### 2. ಮಾತೆ ಮುತ್ತು ಮಾತೇ ಮೃತ್ಯು

ಗಾದೆ ವೇದಕ್ಕೆ ಸಮಾನ , ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆಗಳು ವೇದದ ತಲೆದಿಂಬು ಇದ್ದಹಾಗೆ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲ ಅರ್ಥವು ಅಡಗಿರುತ್ತದೆ. ಅಂತಹ ಮಹತ್ವದ ಗಾದೆಗಳಲ್ಲಿ ಮಾತೇ ಮುತ್ತು: ಮಾತೆ ಮೃತ್ಯು' ಎಂಬ ಗಾದೆಯೂ ಒಂದಾಗಿದೆ.

ಈ ಗಾದೆಯಂತೆ ಮುತ್ತು ಆಕರ್ಷಕವಾದ, ತುಂಬಾ ಬೆಲೆಯುಳ್ಳ ಹಾಗು ಮನಸ್ಸಿಗೆ ಮುದವನ್ನುಮಟು ಮಾಡುವ ವಸ್ತುವಾಗಿದೆ.ಅಂತೆಯೇ ನಮ್ಮ ಮಾತುಕೂಡ ಆಕರ್ಷಕವಾಗಿರಬೇಕೆ ಎನ್ನುವ ಮಾತಿನ ಮಹತ್ವವನ್ನು ತಿಳಿಸುತ್ತದೆ. ನಮ್ಮ ಮಾತು ನಮ್ಮ ವ್ಯಕ್ತಿತ್ವದ ಕನ್ನಡಿಯಾಗಿದೆ. ಮಾತು ಬೆಳ್ಳಿ, ಮೌನ ಬಂಗಾರ, ಮಾತು ಆಡಿದರೆ ಹೋಯಿತು, ಮುತ್ತು ಹೊಡೆದರೆ ಹೋಯಿತು, "ಮಾತು ಬಲ್ಲವ ಮಾಣಿಕ್ಯ ತಂದ, ಮಾತರಿಯದವ ಜಗಳ ತಂದ, ಎಂಬ ಗಾದೆ ಮಾತುಗಳು ಕೂಡ ಮಾತಿನ ಮಹತ್ವವನ್ನು ತಿಳಿಸುತ್ತದೆ.

****************************



# ಗದ್ಯ ಪಾಠ– 4 ಎದೆಗೆ ಬಿದ್ದ ಅಕ್ಷರ

**–ದೇವನೂರ ಮಹಾದೇವ**

**ದೇವನೂರ ಮಹಾದೇವ** ಇವರು ಕ್ರಿ.ಶ.1948ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರಲ್ಲಿ ಜನಿಸಿದರು. ಇವರು **'ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯ ನೆಂಟ, ನೋಡು ಮತ್ತು ಕೂಡು, ಎದೆಗೆ ಬಿದ್ದ ಅಕ್ಷರ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇವರು **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ** ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

## ಅ) ಒಂದು ವಾಕ್ಯದಲ್ಲಿ ಉತ್ತರಿಸಿ.

**1.ಇಂದಲ್ಲ – ನಾಳೆ ಫಲಕೊಡುವ ಅಂಶಗಳು ಯಾವುವು?**

ಉ:– ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವುವು.

**2. ಮನೆ ಮಂಚಮ್ಮ ಯಾರು?**

ಒಂದು ಗ್ರಾಮದ ಮನೆ ದೇವತೆ ಮನೆ ಮಂಚಮ್ಮ

**3.ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?**

ಮನೆ ಮಂಚಮ್ಮನ ಕತೆ ಹೇಳಿದ ಕವಿ ಸಿದ್ದಲಿಂಗಯ್ಯ

**4.ಶಿವಾನುಭವ ಶಬ್ಧಕೋಶ ಪುಸ್ತಕ ಬರೆದವರು ಯಾರು?**

ಉ:– ಫ.ಗು.ಹಳಕಟ್ಟಿಯವರು ಶಿವಾನುಭವ ಶಬ್ದಕೋಶವನ್ನು ಬರೆದಿದ್ದಾರೆ.

**5.ವಚನಕಾರರಿಗೆ ಯಾವುದು ದೇವರಾಗಿತ್ತು?**

ಉ:–ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು

**6.ಅಶೋಕ ಪೈ ರವರ ವೃತ್ತಿ ಯಾವುದು?**

ಉ:–ಅಶೋಕ ಪೈ ಅವರು ಮನೋ ವೈದ್ಯರಾಗಿದ್ದರು?

**7.ದೇವನೂರರ ನನ್ನ ದೇವರು ಯಾರೆಂಬುದನ್ನು ಸ್ಪಷ್ಟೀಕರಿಸಿ.**

ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದೇ ನನ್ನ ದೇವರು

## ಮೂರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ.

**1. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?**

ಒಂದು ಕೋಣೆಯಲ್ಲಿ ಕೆಲವರು ಟೀವಿ ನೋಡುತ್ತಿರುವಾಗ ಅದರ ಅರಿವಿಲ್ಲದ ಕೆಲವರು ಪಕ್ಕದ ಕೋಣೆಯಲ್ಲಿ ಮಾತನಾಡುತ್ತಿದ್ದಾರೆ ಎಂದು ಭಾವಿಸೋಣ. ಟಿವಿಯಲ್ಲಿ ಯಾವುದಾದರೊಂದು ಕೊಲೆ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರ ದುಃಖದ ಭಾವನೆ, ಟಿವಿ ನೋಡುತ್ತಿಲ್ಲದ ಪಕ್ಕದ ಕೊಠಡಿಯಲ್ಲಿ ಮಾತನಾಡುತ್ತಿರುವ ಜನರ ಮನಸ್ಸಿಗೂ ತಲುಪಿ ಅವರೂ ಸಹ ದುಃಖಿತಪ್ತರಾಗುತ್ತಾರಂತೆ ಅದೇ ರೀತಿ ಸಂತೋಷದ ದೃಶ್ಯಗಳೂ ಸಹ ಪರಿಣಾಮವನ್ನು ಬೀರುತ್ತದಂತೆ ಇದು ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವಾಗಿದೆ.

**2. ವಚನ ಕಾರರ ಧೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ.** ಜ್ಞಾನ ಮಾತ್ರ ಅಲ್ಲ ಅದು ಕ್ರಿಯೆಯ ಅನುಭವದಿಂದ ಮೂಡುವುದು. ಅದು ಕೇಳಿ ತಿಳಿದದ್ದಲ್ಲ ಕ್ರಿಯೆಯಲ್ಲಿ ಮೂಡಿದ ತಿಳುವಳಿಕೆ. ಅದು ತರ್ಕ ಅಲ್ಲ, ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

## ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ

**1. ಕವಿ ಸಿದ್ಧಲಿಂಗಯ್ಯನವರು ಹೇಳಿದ ಕತೆಯನ್ನು ಬರೆಯಿರಿ.**

ದೇವನೂರ ಮಹಾದೇವ ಅವರಿಗೆ ಕವಿ ಸಿದ್ಧಲಿಂಗಯ್ಯ ಅವರು ಮನೆಮಂಚಮ್ಮ ಎಂಬ ಗ್ರಾಮದೇವತೆಯ ಕತೆಯನ್ನು ಹೇಳುತ್ತಾರೆ. ಆ ಕತೆ ಹೀಗಿದೆ – ಒಂದು ಸಲ ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ಗ್ರಾಮದೇವತೆ ಮಂಚಮ್ಮಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಹೀಗೆ ಗುಡಿ ಕಟ್ತಾ ಇರುವಾಗ ಗುಡಿಯ ಕಟ್ಟಡ ಚಾವಣಿ ಮಟ್ಟಕ್ಕೆ ಬಂದಾಗ ಅಲ್ಲಿದ್ದ ಒಬ್ಬನ ಮೈಮೇಲೆ ಆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು "ನಿಲ್ಸಿ ನನ್ ಮಕ್ಕಳಾ" ಎಂದು ಅಬ್ಬರ ಮಾಡುತ್ತಾಳೆ. ಆ ಅಬ್ಬರಕ್ಕೆ ಜನ ತಮ್ಮ ಕೆಲಸ ನಿಲ್ಲಿಸಿ ಕಕ್ಕಾಬಿಕ್ಕಿಯಾಗಿ ನೋಡುತ್ತಾರೆ. ಆಗ ಗ್ರಾಮದೇವತೆ ಮಂಚಮ್ಮ "ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ ?" ಎನ್ನುತ್ತಾಳೆ. ಅಲ್ಲಿನ ಜನರು'ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ' ಎಂದು ಹೇಳುತ್ತಾರೆ. ಪುನಃ ಆ ದೇವತೆ "ಓಹೋ, ನನಗೇ ಗುಡಿಮನೆ ಕಟ್ತಾ ಇದ್ದೀರೋ ? ಹಾಗಾದರೆ ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ ?" ಎಂದು ಕೇಳುತ್ತಾಳೆ. ಆಗ ಒಬ್ಬನು "ನನಗಿಲ್ಲ ತಾಯಿ" ಹೇಳುತ್ತಾನೆ. ಆಗ ಗ್ರಾಮದೇವತೆ ಮಂಚಮ್ಮ"ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ" ಎಂದು ಹೇಳುತ್ತಾಳೆ.ಅಂದಿನಿಂದ ಮಂಚಮ್ಮದೇವಿ ಮನೆಮಂಚಮ್ಮನಾಗುತ್ತಾಳೆ. ಚಾವಣಿ ಇಲ್ಲದ ಗುಡಿಯಲ್ಲಿ ತಾಯಿ ಮನೆಮಂಚಮ್ಮ ಇಂದು ಪೂಜಿತಳಾಗುತ್ತಿದ್ದಾಳೆ.

## ಈ) ಸಂದರ್ಭಾನುಸಾರ ಸ್ವಾರಸ್ಯವನ್ನು ವಿವರಿಸಿ.

**1. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೆ ಮನೆ ಬೇಡ".**

ಆಯ್ಕೆ:– ಈ ವಾಕ್ಯವನ್ನು 'ದೇವನೂರು ಮಹಾದೇವ' ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಪಾಠದಿಂದ ಆರಿಸಲಾಗಿದೆ

ಸಂದರ್ಭ :– ಗ್ರಾಮದೇವತೆ ಮಂಚಮ್ಮನಿಗೆ ಜನ ಗುಡಿ ಕಟ್ಟಲು ಬಂದಾಗ ದೇವಿ ಮಂಚಮ್ಮ ಒಬ್ಬನ ಮೈಮೇಲೆ ಆವಾಹಿಸಿ ಬಂದು "ನಿಮಗೆಲ್ಲ ಮನೆ ಇದೆಯೇ?" ಎಂದು ಪ್ರಶ್ನಿಸುತ್ತಾಳೆ ಆಗ ಅಲ್ಲಿದ್ದ ಒಬ್ಬ "ನನಗೆ ಮನೆ ಇಲ್ಲ ತಾಯಿ" ಎನ್ನುತ್ತಾನೆ. ಆಗ ದೇವತೆ ಈ ಮಾತನ್ನು ಹೇಳುತ್ತಾಳೆ.

ಸ್ವಾರಸ್ಯ :– ತನ್ನ ಭಕ್ತರಿಗೆ ಮನೆ ಇಲ್ಲದಿರುವಾಗ ನನಗೂ ಮನೆ ಬೇಡ ಎಂಬ ಮಂಚಮ್ಮದೇವಿಯ ಮಾತು ಕರುಣೆ ಮತ್ತು ಸಮಾನತೆಯ ದ್ಯೋತಕವಾಗಿರುವುದು ಈ ಮಾತಿನ ಸ್ವಾರಸ್ಯವಾಗಿದೆ.

**2. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ".**

ಆಯ್ಕೆ:– ಈ ವಾಕ್ಯವನ್ನು 'ದೇವನೂರು ಮಹಾದೇವ' ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಪಾಠದಿಂದ ಆರಿಸಲಾಗಿದೆ

ಸಂದರ್ಭ:– ದೇವನೂರು ಮಹಾದೇವರವರು ಡಾ॥ಅಶೋಕ ಪೈ ಅವರ ಒಂದು ಸಂಶೋಧನಾ ವರದಿಯನ್ನು ಉದಾಹರಣೆಯಾಗಿ ನೀಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :– ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನದ ಕಂಪನ ಉಳಿದ ಜೀವಿಗೂ ಆಗುತ್ತದೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**3. ಅವರಿಗೆ ಅವರ ಪ್ರಜ್ಞೆಯೇ ದೇವರಾಗಿತ್ತು".**

ಆಯ್ಕೆ:– ಈ ವಾಕ್ಯವನ್ನು 'ದೇವನೂರು ಮಹಾದೇವ' ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಪಾಠದಿಂದ ಆರಿಸಲಾಗಿದೆ

ಸಂದರ್ಭ:– ಈ ಜಗತ್ತು ಕೊಲೆ, ಸುಲಿಗೆ, ದ್ವೇಷ ಅಸೂಯೆಗಳಿಂದ ನರಳುತ್ತಿದೆ ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:–ಸಾಮಾಜಿಕ ಅಶಾಂತಿ ಇರುವ ಈ ಸಂದರ್ಭದಲ್ಲಿ ನಮ್ಮೊಳಗಿರುವ ಕಾರುಣ್ಯವನ್ನು ಎಚ್ಚರಗೊಳಿಸಬೇಕಿದೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**4. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ"**

ಆಯ್ಕೆ:– ಈ ವಾಕ್ಯವನ್ನು 'ದೇವನೂರು ಮಹಾದೇವ' ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಪಾಠದಿಂದ ಆರಿಸಲಾಗಿದೆ
ಸಂದರ್ಭ :– ವಚನಕಾರರು ಅವರ ಸುತ್ತಮುತ್ತ ಇದ್ದ ದೇವರನ್ನು ದೇವರೆಂದುಕೊಂಡಿರಲಿಲ್ಲ ಪ್ರತೀಯೊಬ್ಬ ವಚನಕಾರರಿಗೂ ಅವರದೇ ಆದ ಇಷ್ಟದೈವ ಇತ್ತು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ..
ಸ್ವಾರಸ್ಯ :– ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರು, ಆದ್ದರಿಂದ ನುಡಿದಂತೆ ನಡೆಯಬೇಕಾಯಿತು ಎನ್ನುವ ಸ್ವಾರಸ್ಯ ಅಡಕವಾಗಿದೆ.

## ಭಾಷಾ ಚಟುವಟಿಕೆ

**ವಿರುದ್ಧ ಪದಗಳನ್ನು ಬರೆಯಿರಿ.**

**ಒಳಿತು X ಕೆಡುಕು ಸಮಷ್ಟಿ X ವ್ಯಷ್ಟಿ ಪುಣ್ಯ X ಪಾಪ ಬೆಳಕು X ಕತ್ತಲು ಧರ್ಮ X ಅಧರ್ಮ**

**ಇ. ಕೊಟ್ಟಿರುವ ಗಾದೆಗಳ ಅರ್ಥವನ್ನು ವಿವರಿಸಿ ಬರೆಯಿರಿ.**

**1. ಕಟ್ಟುವುದು ಕಠಿಣ; ಕೆಡಹುವುದು ಸುಲಭ.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸಾರುತ್ತದೆ.
**'ಕಟ್ಟುವುದು ಕಠಿಣ, ಕೆಡಿಸುವುದು ಸುಲಭ'** ಎಂಬುದು ಒಂದು ಪ್ರಸಿದ್ದ ಗಾದೆ ಮಾತಾಗಿದೆ.
ಒಂದು ಕಟ್ಟಡವನ್ನು ಕಟ್ಟಬೇಕಾದರೆ ಹಲವರ ಶ್ರಮ, ತಿಂಗಳುಗಳು ಇಲ್ಲವೆ ವರ್ಷಗಳಾಗಬಹುದು. ಇದಕ್ಕೆ ಸಾಕಷ್ಟು ಹಣವೂ ಖರ್ಚಾಗುತ್ತದೆ. ಹೀಗೆ ಕಟ್ಟಿದ ಕಟ್ಟಡವನ್ನು ಕೆಲವೇ ಗಂಟೆಗಳಲ್ಲಿ ನೆಲಸಮಗೊಳಿಸಬಹುದು ಇಲ್ಲವೆ ನಾಶ ಮಾಡಬಹುದಾಗಿದೆ. ಇದಕ್ಕೆ ಹೇಳುವುದು 'ಕಟ್ಟುವುದು ಕಠಿಣ, ಕೆಡಿಸುವುದು ಸುಲಭ'. ಈ ಗಾದೆಯು **'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ'** ಎಂಬ ಗಾದೆಗೆ ಸಂವಾದಿಯಾಗಿದೆ.

**2. ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸಾರುತ್ತದೆ.
**'ಹೆತ್ತತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು'** ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ.

ತಾಯಿ ನಮ್ಮನ್ನು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. **'ತಾಯಿಗಿಂತ ಬಂಧುವಿಲ್ಲ'** ವೆಂಬ ಮಾತಿನಂತೆ ಹೆತ್ತತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದಿಲ್ಲ. ಅದೇ ರೀತಿ ಜನ್ಮಭೂಮಿಯ ಸಂಬಂಧವು ಸಹ ಬಿಡಿಸಲಾಗದಂತಹುದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತೆ ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಾದುದು. **'ಸುಖದಿ ತಾನಿದ್ದುದೇ ನಾಡು'** ಎಂಬ ಸರ್ವಜ್ಞನ ಮಾತೂ, ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

## ಕೆಳಗಿನ ಪ್ರಬಂಧಗಳನ್ನು ವಿಸ್ತರಿಸಿ ಬರೆಯಿರಿ.

## 1.ಗ್ರಾಮ ಸ್ವರಾಜ್ಯ

ಪೀಠಿಕೆ:– ಗ್ರಾಮ ಸ್ವರಾಜ್ಯ ಎಂದರೆ ಗ್ರಾಮಗಳೇ ಸ್ವಯಂ ಆಡಳಿತ ಕೇಂದ್ರಗಳಾಗಿ ಕಾರ್ಯನಿರ್ವಹಿಸಿ ತಮ್ಮ ಗ್ರಾಮದ ಅಭಿವೃದ್ಧಿಗೆ ಬೇಕಾದ ಕಾರ್ಯವನ್ನು ಸ್ವತಃ ಗ್ರಾಮಸ್ಥರೇ ನಿರ್ಧಾರ ಕೈಗೊಳ್ಳುವ ಒಂದು ಸ್ಥಳೀಯ ಆಡಳಿತ ಸಂಸ್ಥೆ. ಗ್ರಾಮಗಳ ಅಭಿವೃದ್ಧಿಯೇ ಭಾರತದ ಅಭಿವೃದ್ಧಿ' ಎಂಬುದು ಗಾಂಧೀಜಿಯವರ ನಂಬಿಕೆಯಾಗಿತ್ತು. ಹಾಗಾಗಿ ಗ್ರಾಮ ಸ್ವರಾಜ್ಯದ ಪರಿಕಲ್ಪನೆಗೆ ಹೆಚ್ಚು ಒತ್ತು ನೀಡಿದರು. ಹಾಗು ಅಧಿಕಾರ ವಿಕೇಂದ್ರೀಕರಣದ ಕಡೆಗು ಹೆಚ್ಚು ಗಮನನೀಡಿದರು.
ವಿಷಯ ನಿರೂಪಣೆ:– ಗ್ರಾಮ ಸ್ವರಾಜ್ಯದ ಕಲ್ಪನೆ ಋಗ್ವೇದದ ಕಾಲದಲ್ಲಿಯೆ ಕಂಡು ಬರುತ್ತದೆ. ರಾಮಾಯಣ ಮಹಾಭಾರತದ ಕಾಲದಲ್ಲಿಯು ಈ ಪರಿಕಲ್ಪನೆಯನ್ನು ಕಾಣಬಹುದಾಗಿದೆ. ಭಾರತವನ್ನು ಆಳಿದ ರಾಜ ಮಹಾರಾಜರುಗಳು

ಸ್ವಂ ಆಡಳಿಯಕ್ಕಾಗಿ ಗ್ರಾಮಸಭಾಗಳನ್ನು ರಚಿಸಿ ಸ್ಥಳೀಯ ಆಡಳಿತಕ್ಕೆ ಹೆಚ್ಚು ಒತ್ತು ನೀಡಿದರು ನಂತರ ಬ್ರಿಟೀಷರ ಕೇಂದ್ರೀಕೃತ ಆಡಳಿಕ್ಕಿಂತ ವಿಕೇಂದ್ರೀಕೃತ ಅಧಿಕಾರ ಇದ್ದರೆ ಅಭಿವೃದ್ದಿಯು ಆಗುತ್ತದೆಂದು ಮತ್ತು ಭಾರತವು ಹಳ್ಳಿಗಳ/ಗ್ರಾಮಗಳಿಂದ ಕೂಡಿದ ದೇಶ, ಗ್ರಾಮದ ಅಭಿವೃದ್ಧಿಯನ್ನು ಗ್ರಾಮದ ಮುಖಂಡರೇ/ ಗ್ರಾಮಸ್ಥರೆ ಮಾಡಿಕೊಂಡರೆ ಗ್ರಾಮವು ಸ್ವಾವಲಂಬಿಯಾಗುತ್ತದೆ. ಅಭಿವೃದ್ಧಿಹೊಂದುತ್ತದೆ. ಹೀಗೆ ಗ್ರಾಮಸ್ಥರು ತಮ್ಮ ಮುಖಂಡನನ್ನು ತಾವೆ ಆಯ್ಕೆ ಮಾಡಿಕೊಂಡು ನಮ್ಮ ಗ್ರಾಮ, ನಮ್ಮ ಮುಖಂಡರು, ನಮ್ಮ ಕೆಲಸ, ನಮ್ಮ ಸೇವೆ– ಹೀಗೆ ರೂಪುಗೊಂಡಿದ್ದೇ ಗ್ರಾಮ ಸ್ವರಾಜ್ಯ'

ಈಗ ಗ್ರಾಮ ಸ್ವರಾಜ್ಯದ ಅಗತ್ಯತೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಪ್ರತಿಯೊಂದು ಗ್ರಾಮವೂ ಗ್ರಾಮಪಂಚಾಯತಿ ಎಂಬ ಸ್ವಯಂ ಆಡಳಿತ ಸಂಸ್ಥೆಯನ್ನು ಹೊಂದಿವೆ. ಗ್ರಾಮದ ನೈರ್ಮಲ್ಯ, ಆರೋಗ್ಯ, ಶಿಕ್ಷಣ, ನೀರು ಸರಬರಾಜು, ವಿದ್ಯುತ್, ರಸ್ತೆಗಳು ಇವೇ ಮೊದಲಾದ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ನೀಡಿದಾಗ ಮಾತ್ರ ಗಾಂದೀಜಿಯವರ ಗ್ರಾಮ ಸ್ವರಾಜ್ಯದ ಕನಸು ನನಸಾಗುತ್ತದೆ.

ಮುಕ್ತಾಯ:– "ನಮ್ಮ ಗ್ರಾಮಗಳ ಅಭಿವೃದ್ಧಿಯು ನಮ್ಮ ಕೈಯಲ್ಲಿಯೇ ಇದೆ" ಎಂಬುದನ್ನು ನಾವು ಮನಗಾಣಬೇಕಾಗಿದೆ. ನಾವು ಪ್ರತಿಯೊಂದಕ್ಕೂ ಸರ್ಕಾರದ ಮುಂದೆ ಕೈಚಾಚದೆ ನಮ್ಮ ವ್ಯಾಪ್ತಿಯಲ್ಲಿಯೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಹುದಾಗಿದೆ. ಇಡೀ ಗ್ರಾಮವೇ ಒಂದು ಕುಟುಂಬವೆಂದು ಭಾವಿಸಿ ಪರಸ್ಪರ ಸಹಕಾರದಿಂದ ಗ್ರಾಮ ಸ್ವರಾಜ್ಯವನ್ನು ಸಾಕಾರಗೊಳಿಸಬೇಕಾಗಿದೆಯೆನ್ನುವುದು ನನ್ನ ಅಭಿಪ್ರಾಯವಾಗಿದೆ.

## 2.ತ್ಯಾಜ್ಯವಸ್ತು ನಿರ್ವಹಣೆ

ಪ್ರಸ್ತಾವನೆ :– ಕಸದ ಸಂಗ್ರಹಣೆ, ಸಂಸ್ಕರಣೆ, ಪುನರ್ಬಳಕೆ ಇಂದು ಮಾನವನ ಭೌತಿಕ ಪರಿಸರ ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಕೈಗಾರಿಕೀಕರಣ, ನಗರೀಕರಣ, ಸಂಸ್ಕೃತೀಕರಣ, ಜಾಗತೀಕರಣದ ಅಬ್ಬರದಲ್ಲಿ ದಿನದಿಂದ ದಿನಕ್ಕೆ, ಕ್ಷಣದಿಂದ ಕ್ಷಣಕ್ಕೆ ತ್ಯಾಜ್ಯವಸ್ತುಗಳ ನಿರ್ವಹಣೆ ಒಂದು ಸಮಸ್ಯೆಯಾಗುತ್ತಿದೆ.

ವಿಷಯ ನಿರೂಪಣೆ :– ಮಾನವನು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸಿ ಬಿಸಾಡುವ ನಿರುಪಯುಕ್ತ ವಸ್ತುಗಳೇ ತ್ಯಾಜ್ಯವಸ್ತುಗಳು. ಇವುಗಳಲ್ಲಿ ಮೂರು ವಿಧ.ಘನತ್ಯಾಜ್ಯವಸ್ತುಗಳು, ದ್ರವತ್ಯಾಜ್ಯವಸ್ತುಗಳು ಮತ್ತು ಅನಿಲತ್ಯಾಜ್ಯ ವಸ್ತುಗಳು.ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ ಪರಿಸರ ನಾಶವಾಗುತ್ತದೆ.ಮೊದಲ ಹಂತದಲ್ಲಿ ಮನೆ, ಕಚೇರಿ ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಲು, ವೈಜ್ಞಾನಿಕರೀತಿಯಲ್ಲಿ ವಿಂಗಡಿಸಲು ಸೂಕ್ತವಾದ ವ್ಯವಸ್ಥೆ ಮಾಡಿಕೊಳ್ಳಬೇಕು.ಮರುಬಳಕೆಗೆ ಯೋಗ್ಯವಾದ ತ್ಯಾಜ್ಯವಸ್ತುಗಳನ್ನು ಮರುಬಳಕೆಗೂ ಮರುಬಳಕೆ ಮಾಡಲಾಗದ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ದಹಿಸಿಬೇಕು ಅಥವಾ ಭೂಮಿಯಲ್ಲಿ ಹೂಳಬೇಕು.ಅಮೆರಿಕದಲ್ಲಿ ಪ್ರತಿವರ್ಷ ರಿಸೈಕಲಿಂಗ್ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ.ತ್ಯಾಜ್ಯವಸ್ತುಗಳಿಂದ ಸುಂದರ ಕಲಾಕೃತಿಗಳನ್ನು ತಯಾರಿಸುತ್ತಾರೆ.ನದಿಗಳನ್ನು ದತ್ತು ತೆಗೆದುಕೊಂಡು ತ್ಯಾಜ್ಯವಸ್ತುಗಳು ನದಿಗೆ ಸೇರದಂತೆ ನಿಗವಹಿಸುತ್ತಾರೆ.ವಿಯೆನ್ನಾದಲ್ಲಿ ದಹನಕ್ರಿಯಾ ಸ್ಥಾವರ ನಿರ್ಮಿಸಿರುತ್ತಾರೆ.

ಉಪಸಂಹಾರ :– ತ್ಯಾಜ್ಯವಸ್ತುಗಳ ನಿರ್ವಹಣೆ ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕಾಂಪೋಸ್ಟ ತಯಾರಿಕೆ, ರಿಸೈಕಲಿಂಗ್ ಮಾಡುವುದನ್ನು ಹವ್ಯಾಸ ಮಾಡಿಕೊಂಡರೆ ಸ್ವಚ್ಛ ಭಾರತ ಅಭಿಯಾನಕ್ಕೆ ಚೊಚ್ಚಲು ಕಾಣಿಕೆ ನೀಡಿದಂತಾಗುತ್ತದೆ.ಈ ಬಗ್ಗೆ ಜನರಿಗೆ ಅರಿವನ್ನು ಉಂಟುಮಾಡುವ ಕಾರ್ಯಕ್ರಮವನ್ನು ಏರ್ಪಡಿಸಬೇಕು.ಇದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

# ಪದ್ಯ ಭಾಗ

## ಪದ್ಯ ಪಾಠ ೧. ಸಂಕಲ್ಪಗೀತೆ – ಜಿ.ಎಸ್ ಶಿವರುದ್ರಪ್ಪ

**ಜಿ.ಎಸ್. ಶಿವರುದ್ರಪ್ಪ :– ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ಕ್ರಿ. ಶ. 1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಇವರು ಎದೆತುಂಬಿ ಹಾಡಿದೆನು, ಚೆಲುವು–ಒಲುವು, ಅನಾವರಣ ಸಾಮಗಾನ, ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.**

ಶ್ರೀಯುತರಿಗೆ ರಾಷ್ಟ್ರಕವಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿ ಗೌರವಿಸಲಾಗಿದೆ.

**ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ**

**ಸುತ್ತಲು ಕವಿಯುವ ಕತ್ತಲೆಯೊಳಗೆ**
**ಪ್ರೀತಿಯ ಹಣತೆಯ ಹಚ್ಚೋಣ**
**ಬಿರುಗಾಳಿಗೆ ಹೊಯ್ದಾಡುವ ಹಡಗನು**
**ಎಚ್ಚರದಲಿ ಮುನ್ನಡೆಸೋಣ**

ಜಾತೀಯತೆ, ಮತ, ಭಾಷೆ, ಬಣ್ಣ, ಅಜ್ಞಾನ, ಮೂಢನಂಬಿಕೆಗಳೆಂಬ ಕತ್ತಲೆಯು ನಮ್ಮ ಸುತ್ತಲೂ ಕವಿದಿರುತ್ತದೆ, ಆದುದರಿಂದ ಆ ಕತ್ತಲೆಯನ್ನು ಓಡಿಸಲು ಬೆಳಕಿ(ಅರಿವಿ)ನ ಅವಶ್ಯಕತೆಯಿದೆ. ಬೆಳಕನ್ನು ಬೀರಲು ಪ್ರೀತಿಯಿಂದ ಹಣತೆಯನ್ನು ಹಚ್ಚಬೇಕಾಗಿದೆ. ಅದೇ ರೀತಿ ಸಂಸಾರವೆಂಬ ಸಾಗರವು ಅಜ್ಞಾನದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೂ ಸಾಗುತ್ತಿದೆ. ಆ ಬಾಳ ನೌಕೆಯನ್ನು ಎಚ್ಚರಿಕೆಯಿಂದ ಗುರಿಯತ್ತ ನಡೆಸೋಣ ಎಂದು ಕವಿ **"ಬೆಳಕಿನ ತತ್ವ ಮತ್ತು ಪ್ರೀತಿಯ ತತ್ವವನ್ನು"** ಇಲ್ಲಿ ಪ್ರತಿಪಾದಿಸಿದ್ದಾರೆ.

**ಕಲುಷಿತವಾದೀ ನದೀ ಜಲಗಳಿಗೆ**
**ಮುಂಗಾರಿನ ಮಳೆಯಾಗೋಣ**
**ಬರಡಾಗಿರುವೀಕಾಡು ಮೇಡುಗಳ**
**ವಸಂತವಾಗುತ ಮುಟ್ಟೋಣ**

ಆಧುನಿಕ ಮಾನವನ ಹಸ್ತಕ್ಷೇಪದಿಂದ ಕಲುಷಿತವಾದ ನದಿಗಳ ಶುದ್ಧಿಕರಣ ಮಾಡಲು ಭೋರ್ಗರೆಯುವ ಮುಂಗಾರಿನ ಮಳೆಯೇ ಬೇಕು. ಅಂದರೆ ಅಲ್ಲಲ್ಲಿ ನಿಂತ ಕಲುಷಿತ ನೀರನ್ನುತೆಗೆದು ಶುದ್ಧೀಕರಿಸುತ್ತಾ ಕಲ್ಮಶಗಳಿಂದ ಕೂಡಿದ ಮನುಷ್ಯರ ಮನಸ್ಸುಗಳನ್ನು ಪ್ರೀತಿಯ ಮೂಲಕ ಹಸನುಗೊಳಿಸಬೇಕಾಗಿದೆ. ಹಾಗೆಯೇ ಆಧುನೀಕರಣ , ಜಾಗತೀಕರಣ, ಕೈಗಾರೀಕರಣ, ಯಾಂತ್ರೀಕರಣಗಳಿಂದಾಗಿ ಕಾಡುಗಳು ನಾಶವಾಗಿ ಪರಿಸರ ಬರಡಾದ ಮರುಭೂಮಿಯಂತಾಗಿದೆ. ಅಲ್ಲಿ ಗಿಡಮರಗಳನ್ನು ಬೆಳೆಸುತ್ತ, ಬೆಳೆಸುವ ಅವಶ್ಯಕತೆಯನ್ನು ಜನರಲ್ಲಿ ಜಾಗೃತಗೊಳಿಸುವ ಕಾರ್ಯವನ್ನು ಮಾಡೋಣ ಎನ್ನಬಹುದು. ಅಂದರೆ ನಾಗರೀಕತೆಯ ಭರಾಟೆಯಲ್ಲಿ ಮೌಲ್ಯಗಳು ಕುಸಿಯುತ್ತಿವೆ, ಅಂತಹ ಹೃದಯದಲ್ಲಿ ಮೌಲ್ಯಗಳೆಂಬಸಸಿಗಳನ್ನು ನೆಟ್ಟು, ಪ್ರೀತಿಯ ನೀರನ್ನು ಎರೆಯುತ್ತ ಬದುಕನ್ನು ವಸಂತವಾಗಿಸೋಣ ಎಂದು **ಬದುಕು ಹಸನುಗೊಳಿಸುವ ಮೌಲ್ಯ**ವನ್ನು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ.

**ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ**
**ಹೊಸ ಭರವಸೆಗಳ ಕಟ್ಟೋಣ**
**ಮನುಜರ ನಡುವಣ ಅಡ್ಡಗೋಡೆಗಳ**
**ಕೆಡವುತ ಸೇತುವೆಯಾಗೋಣ.**

ಬಡತನ, ಅಜ್ಞಾನ, ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದ ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕಲು ಆಸರೆ ನೀಡಿ ಮೇಲೆ ತರಬೇಕು. ಅವರ ಮನಸ್ಸಿನಲ್ಲಿ ಬದುಕುವ ಹೊಸ ಭರವಸೆಗಳನ್ನು ಕೊಡಬೇಕು. ಹಾಗೆಯೇ ಮನುಷ್ಯರ ನಡುವೆ ಜಾತಿ, ಧರ್ಮ, ಭಾಷೆ, ವರ್ಣಗಳಿಂದ ಆವೃತವಾದ ಅಡ್ಡಗೋಡೆಗಳನ್ನು ಕೆಡವಿ, ಪ್ರೀತಿ-ಸ್ನೇಹವೆಂಬ ಮಾನವೀಯತೆಯ ಸೇತುವೆಯನ್ನು ನಿರ್ಮಿಸೋಣವೆಂದು ಕವಿ ಜಿ.ಎಸ್.ಶಿವರುದ್ರಪ್ಪನವರು ಸಮಾನತೆಯ ಮೌಲ್ಯವನ್ನು ಹೇಳಿದ್ದಾರೆ. ಇದು **ಕುವೆಂಪುರವರ ವಿಶ್ವಮಾನವತಾ ತ**ತ್ವವನ್ನು ಧ್ವನಿಸುತ್ತದೆ.

**ಮತಗಳೆಲ್ಲವೂ ಪಥಗಳು ಎನ್ನುವ**
**ಹೊಸ ಎಚ್ಚರದೊಳು ಬದುಕೋಣ**
**ಭಯ ಸಂಶಯದೊಳು ಕಂದಿದ ಕಣ್ಣೊಳು**
**ನಾಳಿನ ಕನಸನು ಬಿತ್ತೋಣ.**

ಭಾರತದಲ್ಲಿ ವಿವಿಧ ಮತಪಂಥಗಳಿದ್ದು ಬೇರೆ ಬೇರೆ ರೀತಿಯ ಆಚರಣೆ, ಸಂಪ್ರದಾಯಗಳು ಇವೆ. ಆದರೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವ ದೇಶ ಭಾರತ. ಮತಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿಯಬೇಕು. ಅಸಮಾನತೆ, ಶೋಷಣೆ ಇತ್ಯಾದಿಗಳಿಂದ ಭಯ-ಭೀತಿಗೊಂಡು, ನಾಳಿನ ಬದುಕಿನ ಬಗ್ಗೆ ಸಂಶಯಗೊಂಡು ನಿರಾಸೆ ಹೊಂದಿದ ಮನಸ್ಸುಗಳಿಗೆ, ಮುಂದಿನ ಬದುಕಿಗೆ ಉತ್ತಮ ಕನಸನ್ನು

ಅವರಲ್ಲಿ ಬಿತ್ತಿ, ಧೈರ್ಯ ನೀಡಬೇಕೆಂದು ಸಮಾನತೆಯ ತತ್ವ ಮತ್ತು ಬದುಕಿನ ಬಗ್ಗೆ ಭರವಸೆಯ ಅರಿವು ಮೂಡಿಸಬೇಕೆಂದು ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ.

## ಅಭ್ಯಾಸ

**ಅ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು?
   ಬಿರುಗಾಳಿಗೆ ಓಲಾಡುತ್ತಿರುವ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು.
2. ನದೀಜಲಗಳು ಏನಾಗಿವೆ?
   ನದೀಜಲಗಳು ಮಲಿನವಾಗಿವೆ
3. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?
   ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.
4. ಕಾಡುಮೇಡುಗಳ ಸ್ಥಿತಿ ಹೇಗಿದೆ?
   ಕಾಡು ಮೇಡುಗಳು ಬರಡಾಗಿವೆ.
5. ಯಾವ ಎಚ್ಚರದೊಳು ಬದುಕಬೇಕು?
   ನಾವು ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕು.

**ಆ) ಎರಡು /ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕು?

ನಮ್ಮ ಬದುಕಿನ ಸುತ್ತಲು ಕವಿದಿರುವ ಕತ್ತಲೆಚುನ್ನು ಕಳೆಚುಲು ಪ್ರೀತಿ ಎಂಬ ಹಣತೆಯನ್ನು ಹಚ್ಚಬೇಕು. ಸಂಸಾರದ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಜ್ಞಾನ ದೀವಿಗೆಯ ಮೂಲಕ ಎಚ್ಚರಿಕೆಯಿಚಿದ ಮುನ್ನಡೆಸಬೇಕಿದೆ.

2. ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?

ವಸಚಿತನು ಬರಡಾಗಿರುವ ಕಾಡುಗಳು ಹಚ್ಚಹಸುರಿನಿಂದ ಕಂಗೊಳಿಸುವಚಿತೆ ಮುಟ್ಟಬೇಕಿದೆ. ಅಂತೆಯೇ ಬರಡಾದ ಕಾಡುಗಳಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ನೀಡಬೇಕಿದೆ.

3. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?

ಜಾತಿ, ಮತ, ಭಾಷೆಗಳ ಭೇದಗಳು ಮನುಷ್ಯರ ನಡುವೆ ಅಡ್ಡಗೋಡೆಗಳಾಗಿವೆ. ಈ ಗೋಡೆಯನ್ನು ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಕೆಡವಬೇಕಿದೆ. ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಜನರ ನಡುವೆ ಸೇತುವೆಯಾಗಬೇಕಿದೆ.

4. ನಾಳಿನ ಕನಸನ್ನು ಭಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

ಎಲ್ಲ ಮತಗಳೂ ಸಹ ಮಾರ್ಗಗಳು ಎಂದು ತಿಳಿಯಬೇಕು. ಮತಗಳೆಲ್ಲವೂ ಗುರಿಗಳಲ್ಲ ಎಂಬ ಎಚ್ಚರವಿರಬೇಕು. ಭಯ, ಸಂಶಯ ನಿವಾರಿಸಿಕೊಂಡು ಬದುಕಬೇಕು. ಆಗಮಾತ್ರ ನಾಳಿನ ಕನಸನ್ನು ಬಿತ್ತಬಹುದು.

**ಇ) ಎಂಟು /ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ?

ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಚುಲು ಪ್ರೀತಿಯ ದೀಪ ಹಚ್ಚುವ,
ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುವ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ,
ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದಿ ಜಲಗಳಿಗೆ ಮುಂಗಾರಿನ ಮಳೆಯಾಗುವ
ಬರಡಾಗಿರುವ ಕಾಡುಮೇಡುಗಳನ್ನು ಹಸುರಾಗಿಸುವ, ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವ, ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಗೋಡೆಯನ್ನು ಕೆಡವಿ ಅಮಾನತೆಯನ್ನು ಮೂಡಿಸುವ ಸೇತುವೆಯಾಗುವ, ಭಯ ಸಂಶಯಗಲು ತುಂಬಿರುವ ಕಣ್ಣುಗಳಲ್ಲಿ ಭರವಸೆಯ ಕನಸನ್ನು ಬಿತ್ತುವ,ಎನ್ನುವುದೇ ಕವಿಯ ಆಶಚುವಾಗಿದೆ.

2. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

ಅನೇಕ ಸವಾಲುಗಳು ನಮ್ಮನ್ನು ಕಾಡುತ್ತಿವೆ. ಅವುಗಳನ್ನು ಎದುರಿಸಲು ನಮ್ಮ ಜೀವನಕ್ಕೆ ಒಂದು ಗುರಿ ಇರಬೇಕು. ಅದರ ಅನುಷ್ಠಾನಕ್ಕೆ ಸರಿಯಾದ ಮಾರ್ಗ ಹಾಗೂ ದೃಢ ಸಂಕಲ್ಪವೂ ಇರಬೇಕು. ನಮ್ಮ ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವ ಮೂಲಕ ದ್ವೇಷರಹಿತ

ಸಮಾಜವನ್ನು ನಿರ್ಮಾಣ ಮಾಡಬೇಕು. ಎಚ್ಚರಿಕೆಯಿಂದ ಜೀವನ ನಡೆಸುವ ಸಂಕಲ್ಪ ಕೈಗೊಳ್ಳುವ ಮೂಲಕ ಸವಾಲು ಗಳನ್ನು ಧೈರ್ಯದಿಂದ ಎದುರಿಸಿ ಬಾಳಬೇಕು. ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವ ಮೂಲಕ ನದೀಜಲ ಹಾಗೂ ಕಾಡುಗಳ ಸಂರಕ್ಷಣೆ ಮಾಡಬೇಕು. ಜನರ ನಡುವಿನ ಅಸಮಾನತೆಯ ಗೋಡೆಗಳನ್ನು ಕೆಡವುವ ದೃಢ ಸಂಕಲ್ಪ ಮಾಡುವ ಮೂಲಕ ಸಮಾನತೆಯ ಮನೋಬಾವ ಮೂಡಿಸುವ ಸೇತುವೆಯಾಗಬೇಕು. ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕು. ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳು ವುದರಿಂದ ಭವಿಷ್ಯದ ಹೊಂಗನಸನ್ನು ಕಾಣಬಹುದು ಎಂಬುದನ್ನು ಕವಿ ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾನ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಈ) ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ.**

**1. "ಪ್ರೀತಿಯ ಹಣತೆಯನ್ನು ಹಚ್ಚೋಣ".**

ಆಯ್ಕೆ ;– ಈ ವಾಕ್ಯವನ್ನು ಕವಿ ಜಿ.ಎಸ್.ಶಿವರುದ್ರಪ್ಪನವರು ರಚಿಸಿರುವ 'ಎದೆತುಂಬಿ ಹಾಡುವೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ:– 'ಜೀವನದಲ್ಲಿ ಉತ್ತಮ ಮನೋಭಾವನೆಯ ಧೃಢ ಸಂಕಲ್ಪವನ್ನು ಹೊಂದಬೇಕು'. ಎಂದು ಹೇಳುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:– ನಾವು ಪ್ರೀತಿಯ ದೀಪವನ್ನು ಹಚ್ಚುವ ಮೂಲಕ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**2. "ಮುಂಗಾರಿನ ಮಳೆಯಾಗೋಣ".**

ಆಯ್ಕೆ:– ಈ ವಾಕ್ಯವನ್ನು ಕವಿ ಜಿ.ಎಸ್.ಶಿವರುದ್ರಪ್ಪನವರು ರಚಿಸಿರುವ 'ಎದೆತುಂಬಿ ಹಾಡುವೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ:– 'ಜೀವನದಲ್ಲಿ ಉತ್ತಮ ಮನೋಭಾವನೆಯ ಧೃಢ ಸಂಕಲ್ಪವನ್ನು ಹೊಂದಬೇಕು'. ಎಂದು ಹೇಳುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:– ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಕಾರ್ಯದಲ್ಲಿ ತೊಡಗಿದರೆ ನದೀಜಲ ಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬಹುದು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**3. "ಹೊಸ ಭರವಸೆಗಳನ್ನು ಕಟ್ಟೋಣ".**

ಆಯ್ಕೆ:– ಈ ವಾಕ್ಯವನ್ನು ಕವಿ ಜಿ.ಎಸ್.ಶಿವರುದ್ರಪ್ಪನವರು ರಚಿಸಿರುವ 'ಎದೆತುಂಬಿ ಹಾಡುವೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ:– 'ಜೀವನದಲ್ಲಿ ಉತ್ತಮ ಮನೋಭಾವನೆಯ ಧೃಢ ಸಂಕಲ್ಪವನ್ನು ಹೊಂದಬೇಕು'. ಎಂದು ಹೇಳುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:–ನಾವು ಜನರಲ್ಲಿ ಹೊಸ ಭರವಸೆಗಳನ್ನು ಮೂಡಿಸುವ ಮೂಲಕ ಸಮಾಜದಲ್ಲಿನ ಅನೈತಿಕತೆಯನ್ನು ತಡೆಯ ಬಹುದು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**4. "ಹೊಸ ಎಚ್ಚರದೊಳು ಬದುಕೋಣ."**

ಆಯ್ಕೆ:– ಈ ವಾಕ್ಯವನ್ನು ಕವಿ ಜಿ.ಎಸ್.ಶಿವರುದ್ರಪ್ಪನವರು ರಚಿಸಿರುವ 'ಎದೆತುಂಬಿ ಹಾಡುವೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ:– 'ಜೀವನದಲ್ಲಿ ಉತ್ತಮ ಮನೋಭಾವನೆಯ ಧೃಢ ಸಂಕಲ್ಪವನ್ನು ಹೊಂದಬೇಕು'. ಎಂದು ಹೇಳುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:–ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕಿದರೆ ದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಬಹುದು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ

***ಉ) ಬಿಟ್ಟ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.***

೧. 'ಸಂಕಲ್ಪ ಗೀತೆ' ಪದ್ಯವನ್ನು _______ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

೨. ಕತ್ತಲೆಯೊಳಗೆ ಪ್ರೀತಿಯ ______ ಹಚ್ಚೋಣ.

೩. ಜಿ.ಎಸ್.ಶಿವರುದ್ರಪ್ಪನವರು ___ ಯಲ್ಲಿ ಸಮಾವೇಶಗೊಂಡ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಉತ್ತರಗಳು: 1. ಎದೆತುಂಬಿ ಹಾಡಿದೆನು 2.ಹಣತೆ 3.ದಾವಣಗೆರೆ**

**ಭಾಷಾ ಚಟುವಟಿಕೆ**

**ಕೊಟ್ಟಿರುವ ಪದಗಳ ದಾತುಗಳನ್ನು ಬರೆಯಿರಿ.**

ನಿಲ್ಲಿಸಿ =ನಿಲ್ಲು, ನಡೆಸು=ನಡೆ ಹಚ್ಚುವುದು=ಹಚ್ಚು ಮುಟ್ಟೋಣ=ಮುಟ್ಟು ಕಟ್ಟುವುದು=ಕಟ್ಟು ಆಗೋಣ=ಆಗು

**ಕೊಟ್ಟಿರುವ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆಯಿರಿ.**

ಪ್ರೀತಿಯ=ಪ್ರೀತಿ+ಅ= ಷಷ್ಠಿ ಬಿರುಗಾಳಿಗೆ=ಬಿರುಗಾಳಿ+ಇಗೆ=ಚತುರ್ಥಿ ಜಲಕ್ಕೆ=ಜಲ+ಕ್ಕೆ=ಚತುರ್ಥಿ

ಬಿದ್ದುದನ್ನು=ಬಿದ್ದುದು +ಅನ್ನು=ದ್ವಿತೀಯಾ ಭರವಸೆಗಳ=ಭರವಸೆಗಳ+ಅ=ಷಷ್ಠಿ

**ಕೊಟ್ಟಿರುವ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ.**

ಸಂಶಯದೊಳ್=ಒಳ್=ಸಪ್ತಮಿ, ಜಲದಿಂ=ಇಮ್= ತೃತೀಯ

ಮರದತ್ತಣಿಂ=ಅತ್ತಣಿಂ=ಪಂಚಮಿ ರಾಯಂಗೆ=ಗೆ=ಚತುರ್ಥಿ

**ಕೊಟ್ಟಿರುವ ಪದಗಳಲ್ಲಿನ ಕ್ರಿಯಾರ್ಥಕ ರೂಪಗಳನ್ನು (ವಿಧ್ಯರ್ಥಕ, ಸಮಭವನಾರ್ಥಕ, ನಿಷೇಧಾರ್ಥಕ)ಬರೆಯಿರಿ.**

ಹಾಡು, ನೋಡು, ಕಟ್ಟು, ಕೇಳು, ಓಡು, ಓದು, ಬರೆ.

ವಿಧ್ಯರ್ಥಕ :– ಹಾಡಲಿ, ನೋಡಲಿ, ಕಟ್ಟಲಿ, ಕೇಳಲಿ, ಓಡಲಿ, ಓದಲಿ, ಬರೆಯಲಿ.

ನಿಷೇಧಾರ್ಥಕ :– ಹಾಡನು, ಕಟ್ಟನು, ನೋಡನು, ಕೇಳನು, ಓಡನು, ಓದನು, ಬರೆಯನು.

ಸಂಭಾವನಾರ್ಥಕ :– ಹಾಡಿಯಾನು, ನೋಡಿಯಾನು, ಕಟ್ಟಿಯಾನು, ಕೇಳಿಯಾನು, ಓಡಿಯಾನು, ಓದಿಯಾನು, ಬರೆದಾನು

**************************************

# ಪದ್ಯಪಾಠ 2. ಹಕ್ಕಿ ಹಾರುತಿದೆ ನೋಡಿದಿರಾ? –ದ.ರಾ.ಬೇಂದ್ರೆ

ಕವಿ ಕೃತಿ ಪರಿಚಯ :– ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು. 1896ರಲ್ಲಿ ಧಾರವಾಡದಲ್ಲಿ ಜನಿಸಿದರು. ದ.ರಾ.ಬೇಂದ್ರೆಯವರ ಕೃತಿಗಳೆಂದರೆ ಗರಿ, ಕೃಷ್ಣಕುಮಾರಿ, ಉಯ್ಯಾಲೆ, ನಾದಗೀತೆ ನಗೆಯ ಹೊಗೆ, ಅರಳು ಮರಳು, ನಾಕುತಂತಿ ಮುಂತಾದವು. ಇವರಿಗೆ ಸಂದ ಪ್ರಶಸ್ತಿಗಳೆಂದರೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

**ಮೌಲ್ಯವನ್ನಾಧರಿಸಿ ಪದ್ಯದ ಸಾರಾಂಶ**

ಇರುಳಿರುಳಳಿದು ದಿನ ದಿನ ಬೆಳಗೆ
ಸುತ್ತಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ

ವರ ಕವಿ ಬೇಂದ್ರೆಯವರು ಕಾಲಪಕ್ಷಿಯು ಚಲನಶೀಲವಾದುದು,ವಿಶ್ವವ್ಯಾಪಕವಾದುದು, ಬಹುವೇಗವಾದುದು, ಹಾಗು ಪ್ರಗತಿಶೀಲವಾದುದು ಎಂದು ವರ್ಣಿಸುತ್ತಾರೆ.

ಹಗಲು ರಾತ್ರಿಯ ಪುನರಾವರ್ತನೆ, ಕಾಲಮಾನದ ಪುನರಾವರ್ತನೆಯಿಂದ ಕಾಲವು ಚಲನಶೀಲವಾಗಿದೆ. ಅದು ಮೇಲೆ, ಕೆಳಗೆ ಸುತ್ತಮುತ್ತ ಎತ್ತೆತ್ತಲೂ ತನ್ನ ಕಬಂಧ ಬಾಹುವನ್ನು ಹರಡಿಕೊಂಡು ವಿಶ್ವವ್ಯಾಪಕವಾಗಿದೆ. ಕಾಲ ಕಣ್ಣು ತೆರೆದು ರೆಪ್ಪೆ ಮುಚ್ಚುವುದರೊಳಗೆ ಗಾವುದ ಗಾವುದ ಗಾವುದ ರೀತಿಯಲ್ಲಿ ವೇಗವಾಗಿ ಹಾರಿಹೋಗುತ್ತಿದೆ. ಎಂದು ಕಾಲದ ಚಲನಾಶೀಲ, ವಿಸ್ತಾರ , ವೇಗ ಗುಣಗಳನ್ನು ತಿಳಿಸುತ್ತಾ

ಕಾಲದ ಮಹತ್ವವನ್ನು ಅರಿತು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಕವಿಯು ಈ ಪದ್ಯದಲ್ಲಿ ಕಂಡು ಬರುವ ಮೌಲ್ಯವಾಗಿದೆ.

ಕರಿನರೆ ಬಣ್ಣದ ಪುಚ್ಚಗಳುಂಟು
ಬಿಳಿಹೊಳೆ ಬಣ್ಣದ ಗರಿ ಗರಿಯುಂಟು
ಕೆನ್ನನ ಹೊನ್ನನ ಬಣ್ಣಬಣ್ಣಗಳ
ರೆಕ್ಕೆಗಳೆರಡು ಪಕ್ಕದಲ್ಲುಂಟು
ಹಕ್ಕಿಹಾರುತಿದೆ ನೋಡಿದಿರಾ !

ಬೇಂದ್ರೆಯವರು ಈ ಚರಣದಲ್ಲಿ ಕಾಲಪಕ್ಷಿಯ ಭೌತಿಕರೂಪವನ್ನು ಅಂದರೆಭೂತ, ವರ್ತಮಾನ ಹಾಗು ಭವಿಷ್ಯತ್ ಕಾಲದ ಚಲನೆಯನ್ನು ಕುರಿತು ವರ್ಣಿಸುತ್ತಾರೆ

ಹಕ್ಕಿಯ ಹಿಂದೆಯಿರುವ ಪುಚ್ಚ ಅಗೋಚರವಾಗಿದ್ದು ಅದು ಕಳೆದುಹೋದ ಭೂತಕಾಲ ಕರಿನರೆ ಬಣ್ಣಕ್ಕೆ ಹೋಲಿಸಿದ್ದಾರೆ. ನೇರವಾಗಿ ಗೋಚರಿಸುವ ಬಿಳಿಹೊಳೆ ಬಣ್ಣದ ಗರಿಗಳು ವರ್ತಮಾನದ ಗುರುತುಗಳು. ಹಾಗೆಯೇ ಕೆಂಪಾಗಿ – ಹೊನ್ನಿನ ಬಣ್ಣಗಳ ರಕ್ಕೆಗಳು ಭವಿಷ್ಯತ್ ಕಾಲದ ಗುರುತುಗಳು. ಹೀಗೆ ಕಾಲವೆಂಬ ಹಕ್ಕಿ ಭೂತ, ವರ್ತಮಾನ, ಭವಿಷ್ಯತ್ ಕಾಲಗಳೆಂಬ ಗುರುತುಗಳನ್ನು ಮೂಡಿಸುತ್ತಾ ಹಾರಿ ಹೋಗುತ್ತಿದೆ ಎಂದು ಕವಿಯು ಅರ್ಥೈಸುತ್ತಾರೆ.

ಚಲನಶೀಲವಾದ ಕಾಲದ ಮಹತ್ವವನ್ನು ಅರಿತು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವ ಆಶಯವು ಈ ಪದ್ಯದಲ್ಲಿ ಕಂಡುಬಂದಿದೆ.

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ – ಗಿಂಡಲಗಳ ಗಡಮುಕ್ಕಿ
ತೇಲಿಸಿ ಮುಳುಗಿಸಿ ಖಂಡ ಖಂಡಗಳ
ಸಾರ್ವಭೌಮರ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ !

ಕವಿಗಳು ಈ ಪದ್ಯಈ ಚರಣದಲ್ಲಿ ಕಾಲಚಕ್ರದಲ್ಲಿ ನಡೆದಿರುವ ಭೂಮಂಡಲದ ರಾಜಕೀಯ ಹಾಗು ಪ್ರಾಕರತಿಕ ಬದಲಾವಣೆಯನ್ನು ವರ್ಣಿಸಿದ್ದಾರೆ.

ಕಾಲ ಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣ ಸಣ್ಣ ರಾಜಮನೆತನಗಳನ್ನು ಹಾಗು ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ ಬೆಳೆಸಿ ಅವುಗಳ ಪಲಿತವನ್ನು ಕೊಯ್ಲು ಮಾಡಿದೆ. ಅದೇ ರೀತಿಯಲ್ಲಿ ಅನೇಕ ರಾಜ್ಯ, ಸಾಮ್ರಾಜ್ಯ ಕೋಟೆ ಕೊತ್ತಲಗಳನ್ನು ನಾಶಗೊಳಿಸಿದೆ. ವಿಶ್ವದ ಎಲ್ಲಾ ಭಾಗಗಳನ್ನು ಒಂದು ಸಲ ವೈಭವದಿಂದ ಮೆರೆಯುವಂತೆಮಾಡಿದ್ದು ಮತ್ತೊಂದು ಸಲ ಮಳುಗುವಂತೆ ಮಾಡಿದೆ. ಸಾರ್ವಭೌಮರೆಂದು ಮೆರೆದವರ ನೆತ್ತಿಯ ಮೇಲೆ ಕುಕ್ಕಿ ಕೆಳಗೆ ಬೀಳಿಸಿ ಹೊಸಕಿ ಹಾಕಿ ಹಕ್ಕಿ ಹಾರಿಹೋಗಿದೆ ಎಂದು ಕವಿಗಳು ವರ್ಣಿಸಿದ್ದಾರೆ.

ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

ಪದ್ಯದ ಈ ಚರಣದಲ್ಲಿ ಕವಿಯ ದಾರ್ಶನಿಕ ಮುನ್ನೋಟ ಅಭಿವ್ಯಕ್ತವಾಗಿದೆ.
ಕಾಲದ ಓಟದಲ್ಲಿ ಶುಕ್ರಗ್ರಹವು ಮನುಷ್ಯನಿಗೆ ಕೇವಲ ಹಳ್ಳಿಗಳಾಗಬಹುದು. ಚಂದ್ರಲೋಕವು ಬರಿಯ ಊರು ಆಗಬಹುದು, ಮಂಗಳಲೋಕವು ಭೂಮಿಗೆ ಅಂಗಳವಾಗಬಹುದು ಹಾಗು ಇವು ಮಾನವನಿಗೆ ಆಡಲು, ಹಾರಾಡಲು ವೇದಿಕೆ ಆಗಬಹುದು ಎಂದು ಕಾಲದ ಭೌತಿಕ ಲಕ್ಷಣವನ್ನು ದಾರ್ಶನಿಕವಾಗಿ ಮತ್ತು ವೈಜ್ಞಾನಿಕವಾಗಿ ಮುನ್ನೋಟದ ನುಡಿಯನ್ನು ನುಡಿದ್ದಿದ್ದಾರೆ.

ಮುಟ್ಟಿದೆ ದಿಙ್ಮಂಡಲಗಳ ಅಂಚ
ಆಚೆಗೆ ಚಾಚಿದೆ ತನ್ನಯ ಚುಂಚ
ಬ್ರಹ್ಮಾಂಡಗಳನು ಒಡೆಯಲು ಎಂದೋ
ಬಲ್ಲರು ಯಾರಾ ಹಾಕಿದ ಹೊಂಚ!
ಹಕ್ಕಿ ಹಾರುತಿದೆ ನೋಡಿದಿರಾ?

ಬೇಂದ್ರೆಯವರು ಈ ಪದ್ಯದ ಚರಣದಲ್ಲಿ ಕಾಲ ಪಕ್ಷಿಯ ಹಾರಾಟ ಮಾನವನ ಕಲ್ಪನೆಗೆ ಮೀರಿದ್ದು ಎನ್ನುವುದನ್ನು ವ್ಯಕ್ತಪಡಿಸುತ್ತಾರೆ.

ವಿಶ್ವಗಳು ಅನೇಕ ಇರಬಹುದು, ದಿಕ್ಕುಗಳು ಅನಂತವಾಗಿರಬಹುದು, ಆದರೆ ಕಾಲಪಕ್ಷಿಯು ಎಲ್ಲಾ ಮಂಡಲಗಳ ಅಂಚನ್ನು ಮುಟ್ಟಿದೆ. ಜಗತ್ತಿನ ಮೂಲವನ್ನು ಹುಡುಕಲು, ರಹಸ್ಯವನ್ನು ಬೇಧಿಸಲು ಎಂಬಂತೆ ಕಾಲ ಪಕ್ಷಿಯು ಹೊಂಚು ಹಾಕಿದೆ.ಕಾಲಪಕ್ಷಿಯ ಮನೋಗತ ನಮಗೆ ಅರ್ಥವಾಗಬಹುದೆ? ಬಲ್ಲವರಾರು? ಪ್ರಪಂಚದ ವಿಸ್ಮಯವನ್ನು ಭೇಧಿಸಲು ಕಾಲವೆಂಬ ಹಕ್ಕಿಹೊಂಚು ಹಾಕುತ್ತಿದೆಯಾ? ಎನ್ನುವಂತೆ (ಬ್ರಹ್ಮಸೃಷ್ಟಿಯನ್ನೇ ಒಡೆಯಲೆಂದು ಈ ಕಾಲಪಕ್ಷಿ ಹೊಂಚುಹಾಕುತ್ತಿದೆಯಾ? ಇರಬಹುದು, ಬಲ್ಲವರಾರು? ಎಂದು ಬೇಂದ್ರೆಯವರು ಕಾಲ ಪಕ್ಷಿಯ ಮಹಿಮೆಯನ್ನು ವರ್ಣಿಸಿದ್ದಾರೆ.

**ಅಭ್ಯಾಸ**

**ಅ) ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?

ಕಣ್ಣ ರೆಪ್ಪೆ ಮಿಟುಕಿಸುವಷ್ಟರಲ್ಲಿ ಹಕ್ಕಿ ಹಾರುತ್ತಿದೆ.

**2. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?**
ಹಕ್ಕಿಯ ಗರಿಯಲ್ಲಿ ಕರಿ, ಬಿಳಿ, ಕೆಂಪು, ಹೊನ್ನ ಬಣ್ಣಗಳಿವೆ

**3. ಹಕ್ಕಿಯ ಕಣ್ಣುಗಳು ಯಾವುವು?**
ಸೂರ್ಯ –ಚಂದ್ರರೇ ಹಕ್ಕಿಯ ಕಣ್ಣುಗಳು

**4. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?**
ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

**5. ಹಕ್ಕಿಯು ಯಾರನ್ನು ಹರಸಿದೆ?**
ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದೆ.

**6. ಹಕ್ಕಿಯು ಯಾವುದರ ಸಂಕೇತವಾಗಿದೆ?**
**ಹಕ್ಕಿಯು ಕಾಲಗತಿಯ ಸಂಕೇತವಾಗಿದೆ.**

***ಆ) ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.***

**1. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?**
ಆಕಾಶದ ನೀಲ ಮೇಘ ಮಂಡಲದ ಸಮಾನವಾದ ಬಣ್ಣ ಕಾಣುತ್ತಿದೆ. ಮುಗಿಲಿಗೆ ರೆಕ್ಕೆಗಳು ಬಂದಿವೆ. ನಕ್ಷತ್ರ ಮಾಲೆ ಇದೆ. ಸೂರ್ಯ ಚಂದ್ರರೇ ಕಣ್ಣುಗಳು ಎಂದು ಕವಿ ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

**2. ಹೊಸಗಾಲದ ಹಸು ಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**
ಕಾಲ ಪಕ್ಷಿಯು ಯುಗಯುಗಗಳ ಘಟನೆಗಳನ್ನು ಹಿಂದಕ್ಕೆ ತಳ್ಳುತ್ತಾ ಹೊಸ ಮನ್ವಂತರದ ಪ್ರಗತಿಗೆ ಕಾರಣವಾಗಿದೆ. ಹಕ್ಕಿಯು ತನ್ನ ರೆಕ್ಕೆಯನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯವನ್ನು ನೀಡಿ ಹೊಸಗಾಲದ ಹಸು ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸಿದೆ.

***ಇ) ಎಂಟು /ಹತ್ತು ವಾಕ್ಯಗಳಲ್ಲಿ ಉತ್ತರಿಸಿ.***

**1. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?**

**ದ.ರಾ.ಬೇಂದ್ರೆಯವರು** **'ಹಕ್ಕಿ ಹಾರುತಿದೆ ನೋಡಿದಿರಾ'** ಕವನದಲ್ಲಿ ಚಲನಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಿದ್ದಾರೆ. ಕಾಲ ಪಕ್ಷಿಯು, ಕಣ್ಣು ಮಿಟುಕಿಸುವಷ್ಟರಲ್ಲಿ ಗಾವುದ ಗಾವುದ ದೂರ ಮುಂದೆ ಸಾಗಿರುತ್ತದೆ. ಕವಿಯು ಕಾಲ ಪಕ್ಷಿಯ ಬಣ್ಣಗಳೊಂದಿಗೆ ಕಾಲದ ಮೂರು ಅವಸ್ಥೆಗಳನ್ನು ವರ್ಣಿಸಿದ್ದಾರೆ. ಆಕಾಶವನ್ನು ಪಕ್ಷಿಗೆ ಹೋಲಿಸುತ್ತಾ ಮುಗಿಲುಗಳು ರೆಕ್ಕೆಗಳು. ಸೂರ್ಯ ಚಂದ್ರರೇ ಕಣ್ಣುಗಳು. ಕಾಲ ಪಕ್ಷಿಯು ತನ್ನ ಪಯಣದಲ್ಲಿ ಅನೇಕ ರಾಜಮನೆತನ, ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಸಿ ಅವುಗಳ ಫಲಿತವನ್ನು ಕೊಯ್ಲು ಮಾಡಿದೆ. ಅದೇರೀತಿ ಅನೇಕ ರಾಜ್ಯ, ಸಾಮ್ರಾಜ್ಯ, ಕೋಟೆ ಕೊತ್ತಲನ್ನು ನಾಶಮಾಡಿದೆ. ಕಾಲ ಪಕ್ಷಿಯು ತನ್ನ ಪಯಣದಲ್ಲಿ ಭೂಮಂಡಲದ ಮೇಲಿರುವ ಖಂಡಗಳನ್ನು ತೇಲಿಸಿ, ಮುಳುಗಿಸಿ ಪ್ರಾಕೃತಿಕ ಬದಲಾವಣೆ ತಂದಿದೆ. ಮೆರೆಯುತ್ತಿದ್ದ ಸಾರ್ವಭೌಮರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ. ಕಾಲ ಹಕ್ಕಿಯು ಯುಗ ಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ ಹೊಸ ಮನ್ವಂತರದ ಪರಿವರ್ತನೆಗೆ ಕಾರಣವಾಗಿದೆ. ಕಾಲ ಪಕ್ಷಿಯು ತನ್ನ ರೆಕ್ಕೆಯನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ ಮುಂದಿನ ಜನಾಂಗದ ಮಕ್ಕಳನ್ನು ಹರಸಿ ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತದೆ.ಎಂದು ಕವಿ ವರ್ಣಿಸಿದ್ದಾರೆ.

***ಈ) ಸಂದರ್ಭದೊಂದಿಗೆ ಸ್ವಾರಸ್ಯ ಬರೆಯಿರಿ.***

**1. "ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ."**

ಆಯ್ಕೆ:– ಈ ವಾಕ್ಯವನ್ನು ದ.ರಾ.ಬೇಂದ್ರೆ ವಿರಚಿತ ಗರಿ ಕವನ ಸಂಕಲನದಿಂದ ಆಯ್ದ ಹಕ್ಕಿ ಹಾರುತಿದೆ ನೋಡಿದಿರಾ ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ:– ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಈ ಮಾತನ್ನು ಹೇಳಿದ್ದಾರೆ. ಕಾಲ ಪಕ್ಷಿಯು ತನ್ನ ಪಯಣದಲ್ಲಿ ಅನೇಕ ರಾಜ್ಯ, ಸಾಮ್ರಾಜ್ಯಗಳನ್ನು ಹುಟ್ಟಿಸಿ ಬೆಳಿಸಿ ಅವುಗಳ ಫಲಿತವನ್ನು ಕೊಯ್ಲುಮಾಡಿದೆ ಎಂದು ಹೇಳುವಾಗ ಈ ಮಾತು ಬಂದಿದೆ.

ಸ್ವಾರಸ್ಯ :- ಕಾಲ ಪಕ್ಷಿಯು ಅನೇಕ ಸಾಮ್ರಾಜ್ಯಗಳ ಏಳು ಬೀಳುಗಳಿಗೆ ಸಾಕ್ಷಿಯಾಗಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯವಾಗಿ ವರ್ಣಿಸಲಾಗಿದೆ.

**2. "ಸಾರ್ವಭೌಮರ ನೆತ್ತಿಯ ಕುಕ್ಕಿ"**

ಆಯ್ಕೆ:- ಈ ವಾಕ್ಯವನ್ನು ದ.ರಾ.ಬೇಂದ್ರೆ ವಿರಚಿತ ಗರಿ ಕವನ ಸಂಕಲನದಿಂದ ಆಯ್ದ ಹಕ್ಕಿ ಹಾರುತಿದೆ ನೋಡಿದಿರಾ ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ:- ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಈ ಮಾತನ್ನು ಹೇಳಿದ್ದಾರೆ. ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂದು ಹೇಳುವಾಗ ಈ ಮಾತು ಬಂದಿದೆ.

ಸ್ವಾರಸ್ಯ :- ಕಾಲದ ಗತಿಯಲ್ಲಿ ಅಹಂಕಾರದಿಂದ ಮೆರೆದವರೂ ನಿರ್ನಾಮವಾಗಿದ್ದಾರೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**3. "ಮನ್ವಂತರಗಳ ಭಾಗ್ಯವ ತೆರೆಸಿ"**

ಆಯ್ಕೆ:- ಈ ವಾಕ್ಯವನ್ನು ದ.ರಾ.ಬೇಂದ್ರೆ ವಿರಚಿತ ಗರಿ ಕವನ ಸಂಕಲನದಿಂದ ಹಕ್ಕಿ ಹಾರುತಿದೆ ನೋಡಿದಿರಾ ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ:- ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಈ ಮಾತನ್ನು ಹೇಳಿದ್ದಾರೆ. ಕಾಲ ಪಕ್ಷಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತಾ ಹೊಸ ಮನ್ವಂತರದ ಪ್ರಗತಿಗೆ ಕಾರಣವಾಗಿದೆ ಎಂದು ಹೇಳುವಾಗ ಈ ಮಾತು ಬಂದಿದೆ.

ಸ್ವಾರಸ್ಯ :- ಕಾಲ ಪಕ್ಷಿಯು ಹೊಸ ಪರಿವರ್ತನೆಗೆ ಕಾರಣವಾಗಿದೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**4. "ಹೊಸಗಾಲದ ಹಸುಮಕ್ಕಳ ಹರಸಿ"**

ಆಯ್ಕೆ:- ಈ ವಾಕ್ಯವನ್ನು ದ.ರಾ.ಬೇಂದ್ರೆ ವಿರಚಿತ ಗರಿ ಕವನ ಸಂಕಲನದಿಂದ ಹಕ್ಕಿ ಹಾರುತಿದೆ ನೋಡಿದಿರಾ ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ:- ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಈ ಮಾತನ್ನು ಹೇಳಿದ್ದಾರೆ. ಕಾಲ ಪಕ್ಷಿಯು ತನ್ನ ರೆಕ್ಕೆಗಳನ್ನುಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ ಮುಂದಿನ ಜನಾಂಗದ ಮಕ್ಕಳನ್ನು ಹರಸಿದೆ ಎನ್ನುವಾಗ ಈ ಮಾತು ಬಂದಿದೆ.

ಸ್ವಾರಸ್ಯ:-ಕಾಲಪಕ್ಷಿಯು ಮುಂದಿನ ಜನಾಂಗವನ್ನು ಹರಸುತ್ತಿದೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**ಉ) ಹೊಂದಿಸಿ ಬರೆಯಿರಿ.**

| | | ಉತ್ತರ |
|---|---|---|
| ೧. ಹಕ್ಕಿ | ಜ್ಞಾನಪೀಠ ಪ್ರಶಸ್ತಿ | ಪಕ್ಷಿ |
| ೨. ನಾಕುತಂತಿ | ಪಕ್ಷಿ | ಜ್ಞಾನಪೀಟ |
| ೩. ನೀಲಮೇಘಮಂಡಲ | ಖಂಡ-ಖಂಡಗಳ | ಸಮಬಣ್ಣ |
| ೪. ರಾಜ್ಯದ ಸಾಮ್ರಾಜ್ಯದ | ತೆನೆ ಒಕ್ಕಿ | ತೆನೆ ಒಕ್ಕಿ |
| ೫. ತೇಲಿಸಿ ಮುಳುಗಿಸಿ | ಸಮ ಬಣ್ಣ | ಖಂಡಖಂಡಗಳ |
| ೬. ಮಂಗಳ ಭಾಗ್ಯವ | ತೆರೆಸಿ | ಅಂಗಕೇರಿ |
| | ಅಂಗಳಕೇರಿ | |

## ಭಾಷಾ ಚಟುವಟಿಕೆ

**<u>ಸಮಾನಾರ್ಥಕ ಪದ ಬರೆಯಿರಿ</u>**

**ಸೂರ್ಯ- ರವಿ ಮೇಘ- ಮೋಡ ಗಡ-ಕೋಟೆ ಹರಸು-ಆಶೀರ್ವದಿಸು ಒಕ್ಕಿ- ತೆನೆಯಿಂದ ಕಾಲನ್ನು ಬೇರ್ಪಡಿಸುವುದು, ಕೆನ್ನ- ಕೆಂಬಣ್ಣ**

**ತತ್ಸಮ - ತದ್ಭವ ಪದ ಬರೆಯಿರಿ**

_ಬಣ್ಣ >ವರ್ಣ ಬ್ರಹ್ಮ>ಬೊಮ್ಮ ಚಂದ್ರ>ಚಂದಿರ ಯುಗ>ಜುಗ ಅಂಗಳ>ಅಂಕಣ

**ಸಂಧಿ ವಿಂಗಡಿಸಿ ಹೆಸರಿಸಿ**

**ಇರುಳಳಿದು=ಇರುಳು+ ಅಳಿದು= ಲೋಪ** **ತೆರೆದಿಕ್ಕುವ=ತೆರೆದು + ಇಕ್ಕುವ=ಲೋಪ**

**ಹೊಸಗಾಲ=ಹೊಸ+ಕಾಲ= ಆದೇಶ** **ದಿಗ್ಮಂಡಲ= ದಿಕ್+ ಮಂಡಲ=ಜಶ್ತ್ವ**

**ತಿಂಗಳಿನೂರು=ತಿಂಗಳಿನ+ ಊರು=ಲೋಪ**

**ಈ ಅವ್ಯಯ ಪದಗಳು ಯಾವ ಯಾವ ಅವ್ಯಯ ಪದಕ್ಕೆ ಸೇರಿವೆ ಗುರುತಿಸಿ.**

ಅದುವೇ–ಅವಧಾರಣೆ, ಆದ್ದರಿಂದ–ಸಂಬಂಧಾರ್ಥಕ/ಸಮುಚ್ಚಯ, ಅಯ್ಯೋ–ಭಾವಸೂಚಕ, ಬೇಗನೆ–ಸಾಮಾನ್ಯ, ಧಗಧಗ–ಅನುಕರಣೆ, ಸಾಕು–ಕ್ರಿಯಾರ್ಥಕ, ಓಹೋ–ಭಾವಸೂಚಕ, ಹೌದು–ಕ್ರಿಯಾರ್ಥಕ, ನೀನೇ–ಅವಧಾರಣೆ, ರೊಯ್ಯನೆ–ಸಾಮಾನ್ಯ, ಮೆಲ್ಲಗೆ–ಸಾಮಾನ್ಯ, ಅಲ್ಲದೆ–ಸಂಬಂಧಾರ್ಥಕ.

***********

# ಪದ್ಯ ಪಾಠ ೩. ಕೌರವೇಂದ್ರನ ಕೊಂದೆ ನೀನು –ಕುಮಾರವ್ಯಾಸ

**ಕುಮಾರವ್ಯಾಸ** ಎಂದೇ ಪ್ರಸಿದ್ಧನಾಗಿರುವ **ಗದುಗಿನ ನಾರಾಣಪ್ಪನು** ಕ್ರಿ.ಶ.1430ರಲ್ಲಿ ಗದಗ ಪ್ರಾಂತದ **ಕೋಳಿವಾಡದ**ಲ್ಲಿ ಜನಿಸಿದನು. ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ **'ಕರ್ಣಾಟ ಭಾರತ ಕಥಾ ಮಂಜರಿ'** ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಈತ **'ಐರಾವತ'** ಎಂಬ ಕೃತಿಯನ್ನೂ ರಚಿಸಿದ್ದಾನೆಂದು ತಿಳಿದು ಬಂದಿದೆ. ಇವರು **''ರೂಪಕ ಸಾಮ್ರಾಜ್ಯ ಚಕ್ರವರ್ತಿ''** ಎಂಬ ಬಿರುದಿಗೆ ಪಾತ್ರನಾಗಿದ್ದಾರೆ.

**ಪದ್ಯದ ಸಾರಾಂಶ – ಮೌಲ್ಯವನ್ನಾಧರಿಸಿ.**

**ಇನತನೂಜನ ಕೂಡೆ ಮೈದುನ**
**ತನದ ಸರಸವನೆಸಗಿ ರಥದೊಳು**
**ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ**
**ಎನಗೆ ನಿಮ್ಮಡಿಗಳಲಿ ಸಮಸೇ**
**ವನೆಯೆ ದೇವ ಮುರಾರಿಯಂಜುವೆ**
**ನೆನಲು ತೊಡೆಸೋಂಕಿನಲಿ ಸಾರಿದು ಶೌರಿಯಿಂತೆಂದ ॥ 1 ॥**

ಶ್ರೀಕೃಷ್ಣನು ಕರ್ಣನ ಹತ್ತಿರ ಹೋಗಿ ಆತನ ಜೊತೆಗೆ **ಮೈದುನತನದ ಸರಸ**ದಿಂದ ಆತನ ಕೈಹಿಡಿದು ಬರಸೆಳೆದು ರಥದಲ್ಲಿ ಕುಳ್ಳಿರಿಸಿದನು. ಇದರಿಂದ ವಿಚಲಿತನಾದ ಕರ್ಣನು ದೇವ ಮುರಾರಿ **'ನನಗೆ ನಿಮ್ಮ ಪಾದದ ಬಳಿ ಸರಿಸಮಾನ ಗೌರವವೇ, ನನಗೆ ಭಯವಾಗುತ್ತಿದೆ '** ಎನ್ನಲು ಕೃಷ್ಣನು ಅವನನ್ನು ಇನ್ನೂ ಹತ್ತಿರ ಸೆಳೆದು ತೊಡೆ ತಾಕುವಂತೆ ಕುಳಿತನು. ಇಲ್ಲಿ ಧರ್ಮ ಪಕ್ಷಪಾತಿಯಾದ ಕೃಷ್ಣನು ಕರ್ಣನ ಜನ್ಮ ರಹಸ್ಯವನ್ನು ತಿಳಿಸಲು, ಪಾಂಡವರ ಹಿತ ಕಾಪಾಡುವಲ್ಲಿ ಭೇದ ತಂತ್ರದ ಸಿದ್ಧತೆಯನ್ನು ಧ್ವನಿಸುತ್ತದೆ.

**ಭೇದವಿಲ್ಲೆಲೆ ಕರ್ಣ ನಿಮ್ಮೊಳು**
**ಯಾದವರು ಕೌರವರೊಳಗೆ ಸಂ**
**ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ**
**ಮೇದಿನೀಪತಿ ನೀನು ಚಿತ್ತದೊ**
**ಳಾದುದರಿವಿಲ್ಲೆನುತ ದಾನವ**
**ಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭಯವ ॥ 2 ॥**

**ಈ ಚರಣವನ್ನು 'ಕುಮಾರವ್ಯಾಸ' ಎಂದು ಪ್ರಸಿದ್ದನಾದ ಗದುಗಿನ ನಾರಾನಪ್ಪನು ರಚಿಸಿರುವ 'ಕರ್ಣಾಟಭಾರತ ಕಥಾಮಂಜರಿ' ಎಂಬ ಮಹಾ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.**

**"ಕರ್ಣ ನಿಮ್ಮಲ್ಲಿ ಯಾದವರು ಕೌರವರಲ್ಲಿ ಭೇದವಿಲ್ಲ, ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ. ರಾಜ ನೀನು, ಮನದಲ್ಲಿ ನಡೆದುದುರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲ ಭಯವನ್ನು (ದ್ವಂದ್ವವನ್ನು) ಬಿತ್ತಿದನು.**

**ವೈಯುಕ್ತಿಕ ಸ್ವಾರ್ಥಕ್ಕಾಗಿ ಪ್ರಲೋಭನೆಗೆ ಒಳಗಾಗಬಾರದು, ದ್ವಂದ್ವಕ್ಕೆ ಎಡೆಗೊಡಬಾರದು ಎಂಬ ಮೌಲ್ಯಯುತ ಸಂದೇಶವು ಈ ಪದ್ಯದಲ್ಲಿ ಅಡಗಿದೆ.**

ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು ॥ 3 ॥

ಈ ಚರಣವನ್ನು 'ಕುಮಾರವ್ಯಾಸ' ಎಂದು ಪ್ರಸಿದ್ದನಾದ ಗದುಗಿನ ನಾರಾನಪ್ಪನು ರಚಿಸಿರುವ 'ಕರ್ಣಾಟಭಾರತ ಕಥಾಮಂಜರಿ' ಎಂಬ ಮಹಾ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ಕೃಷ್ಣನು ಕರ್ಣನನ್ನು ಕುರಿತು "ಕುಂತಿಯು ಪಡೆದ ಐದು ಮಂತ್ರಗಳಲ್ಲ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಕಲಿಭೀಮ, ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದನು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲಸಹದೇವರು ಇಬ್ಬರು ಹುಟ್ಟಿದರು" ಎಂದನು.

ನಿರ್ಧಿಷ್ಟ ಗುರಿ ಸಾಧನೆಗೆ ವಿವಿದ ಅಡ್ಡಿ ಆತಂಕಗಳು ಎದುರಾದರೂ ಅದನ್ನು ದಾಟಿ ಮುಂದೆ ಸಾಗಬೇಕೆನ್ನುವ ಮೌಲ್ಯಯುತ ಸಂದೇಶವು ಈ ಪದ್ಯದಲ್ಲಿ ಅಡಗಿದೆ.

ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ
ಜನಪ ಕೌರವ ಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರವೆರಡು ಸಂತತಿ
ಯೆನಿಸಲೊಲ್ಲದೆ ನೀನು ದುರಿಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ ॥ 4 ॥

ಈ ಚರಣವನ್ನು 'ಕುಮಾರವ್ಯಾಸ' ಎಂದು ಪ್ರಸಿದ್ದನಾದ ಗದುಗಿನ ನಾರಾನಪ್ಪನು ರಚಿಸಿರುವ 'ಕರ್ಣಾಟಭಾರತ ಕಥಾಮಂಜರಿ' ಎಂಬ ಮಹಾ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ಕೃಷ್ಣನು ಕರ್ಣನನ್ನು ಕುರಿತು "ನಿನಗೆ ಹಸ್ತಿನಾಪುರದ ರಾಜ್ಯದ ಹಿರಿಮೆಯನ್ನು ಮಾಡುವೆನು. ಪಾಂಡವ ಕೌರವ ರಾಜರು ಗದ್ದುಗೆಯ ಓಲೈಸುವರು. ನಿನಗೆ ಎರಡು ಸಂತತಿ ಮರುಮಾತನಾಡದೆ ಸೇವೆಯನ್ನು ಮಾಡುವುವು. ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೆ ಹೇಳು" ಎಂದನು.

ನಿರ್ಧಿಷ್ಟ ಗುರಿ ಸಾಧನೆಗೆ ವಿವಿದ ಅಡ್ಡಿ ಆತಂಕಗಳು ಎದುರಾದರೂ ಅದನ್ನು ದಾಟಿ ಮುಂದೆ ಸಾಗಬೇಕೆನ್ನುವ ಮೌಲ್ಯಯುತ ಸಂದೇಶವು ಈ ಪದ್ಯದಲ್ಲಿ ಅಡಗಿದೆ.

ಎಡದ ಮೈಯಲಿ ಕೌರವೇಂದ್ರರ
ಗಡಣ ಬಲದಲಿ ಪಾಂಡು ತನಯರ
ಗಡಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು
ನಡುವೆ ನೀನೋಲಗದೊಳೊಪ್ಪುವ
ಕಡು ವಿಲಾಸವ ಬಿಸುಟು ಕುರುಪತಿ
ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ ॥ 5 ॥

ಈ ಚರಣವನ್ನು 'ಕುಮಾರವ್ಯಾಸ' ಎಂದು ಪ್ರಸಿದ್ದನಾದ ಗದುಗಿನ ನಾರಾನಪ್ಪನು ರಚಿಸಿರುವ 'ಕರ್ಣಾಟಭಾರತ ಕಥಾಮಂಜರಿ' ಎಂಬ ಮಹಾ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ

ಕೃಷ್ಣನು ಕರ್ಣನನ್ನು ಕುರಿತು"ಎಡದ ಪಕ್ಕದಲ್ಲ ಕೌರವೇಂದ್ರ ಸಮೂಹ, ಬಲದಲ್ಲಿ ಪಾಂಡು ಮಕ್ಕಳ ಸಮೂಹ, ಎದುರಿನಲ್ಲಿ ಮಾದ್ರ ಮಾಗಧ ಯಾದವಾದಿಗಳು ನಡುವೆ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆದು, ದುರ್ಯೋಧನ ನುಡಿಸಲು 'ಒಡೆಯ ಅನುಗ್ರಹವಾಗಲಿ' ಎಂಬುದು ಕಷ್ಟ ನಿನಗೆ" ಎಂದನು.

ನಿರ್ಧಿಷ್ಟ ಗುರಿ ಸಾಧನೆಗೆ ವಿವಿಧ ಅಡ್ಡಿ ಆತಂಕಗಳು ಎದುರಾದರೂ ಅದನ್ನು ದಾಟಿ ಮುಂದೆ ಸಾಗಬೇಕೆನ್ನುವ ಮೌಲ್ಯಯುತ ಸಂದೇಶವು ಈ ಪದ್ಯದಲ್ಲಿ ಅಡಗಿದೆ

ಕೊರಳ ಸೆರೆ ಹಿಗ್ಗಿದವುದೃಗುಜಲ

ಉರವಣಿಸಿ ಕಡು ನೊಂದನಕಟಾ
ಕುರುಪತಿಗೆಕೇಡಾದುದೆಂದನುತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಶ್ರೀಕೃಷ್ಣನು ಕರ್ಣನಿಗೆ ಆತನ ಜನ್ಮ ವೃತ್ತಾಂತವನ್ನು ತಿಳಿಸಿ, ರಾಜನನ್ನಾಗಿ ಮಾಡುವ ಹಲವು ಆಸೆ–ಆಮಿಷಗಳನ್ನು ಒಡ್ಡಿದನು. ಆ ಮಾತುಗಳನ್ನು ಕೇಳಿ ಕರ್ಣನಿಗೆ ಅತ್ಯಂತ ದು:ಖವಾಯಿತು. ಅವನ ಕೊರಳ ರಕ್ತನಾಳಗಳು ಉಬ್ಬಿಧ್ವನಿ ಗದ್ಗದಿತವಾಯಿತು. ಕಣ್ಣೀರಧಾರೆ ರಭಸದಿಂದ ಹರಿಯಲು, ಅಧಿಕವಾಗಿ ಕರ್ಣನು ದುಃಖಿಗೊಂಡು ಮನದೊಳಗೆ ಅಯ್ಯೋ! ದುರ್ಯೋಧನನಿಗೆ ಕೇಡಾಯಿತು. ಕೃಷ್ಣನ ಶತೃತ್ವವು ವೈರಿಗಳಲ್ಲಿ ಹೋಗೆ ದೋರದೆ, ಉರಿಯದೆ, ಸುಡದೆ ಬಿಡುವುದಿಲ್ಲ. ನನ್ನ ವಂಶದ ರಹಸ್ಯವನ್ನು ತಿಳಿಸಿ ಕುರುಪತಿಯನ್ನು ಕೊಂದನು ಇನ್ನು ಏನು ಮಾತಾಡಿ ಏನು ಪ್ರಯೋಜನ ಎಂದು ತನ್ನ ಮನದಲ್ಲಿ ಚಿಂತಿಸಿದನು. **ಸ್ವಾಮಿನಿಷ್ಟೆಗೆ ಬದ್ಧನಾಗಿ ಅಸಹಾಯಕ ಸ್ಥಿಯಲ್ಲಿ ನೋವು, ಸಂಕಟ ಅನುಭವಿಸುವ ಕರ್ಣನ ವ್ಯಕ್ತಿತ್ವದ ಹಿರಿಮೆ** ಪ್ರಸ್ತುತ ಪದ್ಯಭಾಗದಲ್ಲಿ ಬಿತ್ತರವಾಗಿದೆ.

ಮರುಳುಮಾಧವಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನಕೊಂದೆ ನೀನೆಂದ

ಕರ್ಣನು ಕೃಷ್ಣನಿಗೆ ಮರುಳ ಮಾಧವ ನಾನು ರಾಜ್ಯದ ಸಿರಿ ಸಂಪತ್ತಿಗೆ ಸೋಲುವವನಲ್ಲ. ನನಗೆ ಪಾಂಡವರು–ಕೌರವರನ್ನು ಬೆಸೆಯುವಲ್ಲಿ ಮನಸ್ಸಿಲ್ಲ. ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ತಲೆಗಳನ್ನು ಕತ್ತರಿಸಿ ಒಪ್ಪಿಸಬೇಕೆಂಬ ಆವೇಶದಲ್ಲಿದ್ದೆ. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ ಎಂದನು. ಶ್ರೀಕೃಷ್ಣನು ಹೇಳಿದ ಜನ್ಮ ವೃತ್ತಾಂತ ಮತ್ತು ಆಸೆ ಆಮಿಷಗಳಿಂದ ಕರ್ಣನು ವಿಚಲಿತನಾದರೂ, ತನ್ನ **ಒಡೆಯನಿಗೆ ತೋರುವ ಸ್ವಾಮಿನಿಷ್ಠೆ ಮತ್ತು ಪ್ರಾಮಾಣಿಕತೆ** ಜಗಮೆಚ್ಚುವಂತಿದೆ.

ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ
ಹಾನಿಯಿಲ್ಲೆನ್ನಾಣೆ ನುಡಿ ನುಡಿ
ಮೌನವೇತಕೆ ಮರುಳುತನ ಬೇ
ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ ॥ 7 ॥

**ಈ ಚರಣವನ್ನು 'ಕುಮಾರವ್ಯಾಸ' ಎಂದು ಪ್ರಸಿದ್ದನಾದ ಗದುಗಿನ ನಾರಾನಪ್ಪನು ರಚಿಸಿರುವ 'ಕರ್ಣಾಟಭಾರತ ಕಥಾಮಂಜರಿ' ಎಂಬ ಮಹಾ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ**

**ಕೃಷ್ಣನು ಕರ್ಣನನ್ನು ಕುರಿತು "ಏನು ಹೇಳು ಕರ್ಣ ಮನೋವೇದನೆ ಯಾವುದು? ಮನಸ್ಸಿಗೆ ಕುಂತಿಯ ಮಕ್ಕಳಿಂದ ಕೆಲಸ ಮಾಡಿಸಿಕೊಳ್ಳುವುದು ಇಷ್ಟವಿಲ್ಲವೇ ನಿನಗೆ? ನಷ್ಟವಿಲ್ಲ ಎನ್ನಾಣೆ ಹೇಳು ಮಾತನಾಡು ಮೌನವು ಏತಕೆ? ಭ್ರಮೆಗೊಳಗಾಗುವುದು ಬೇಡ. ನಾನು ನಿನಗೆಕೆಟ್ಟದ್ದನ್ನು ಬಯಸುವವನಲ್ಲ ಕೇಳು" ಎಂದನು.**

**ಇಲ್ಲಿ ಸ್ವಾಮಿ ನಿಷ್ಠೆ ಮತ್ತು ಸ್ನೇಹ ಎಂಬ ಮೌಲ್ಯಗಳು ಕಂಡು ಬರುತ್ತದೆ.**

ವೀರ ಕೌರವರಾಯನೇ ದಾ
ತಾರನಾತನ ಹಗೆಯೆ ಹಗೆ ಕೈ
ವಾರವೇ ಕೈವಾರವಾದಂತಹೆನು ಕುರುನೃಪತಿ
ಶೌರಿ ಕೇಳೈ ನಾಳೆ ಸಮರದ
ಸಾರದಲಿ ತೋರುವೆನು ನಿಜಭುಜ
ಶೌರಿಯದ ಸಂಪನ್ನತನವನು ಪಾಂಡುತನಯರಲಿ ॥ 9 ॥

**ಈ ಚರಣವನ್ನು 'ಕುಮಾರವ್ಯಾಸ' ಎಂದು ಪ್ರಸಿದ್ದನಾದ ಗದುಗಿನ ನಾರಾನಪ್ಪನು ರಚಿಸಿರುವ 'ಕರ್ಣಾಟಭಾರತ ಕಥಾಮಂಜರಿ' ಎಂಬ ಮಹಾ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ**

**ಕರ್ಣನು ಕೃಷ್ಣನನ್ನು ಕುರಿತು "ವೀರ ದುರ್ಯೋಧನನೇನನ್ನ ಒಡೆಯನು. ಆತನಹಗೆಯೆಹಗೆ, ಅಭಿಮಾನವೇ ಅಭಿಮಾನವು, ದುರ್ಯೋಧನ ಆದಂತೆ ಆಗುವೆನು. ಕೃಷ್ಣ ಕೇಳು, ನಾಳೆಸಮರದವಿಷಯದಲ್ಲಿಪಾಂಡವರಲ್ಲಿನಿಜ ಪರಾಕ್ರಮದ ಶ್ರೇಷ್ಠತನವನ್ನು ತೋರುವೆನು" ಎಂದನು.**

**ಅನ್ನದ ಋಣ ತೀರಿಸಬೇಕಾದವನು ಹಾಗು ಪರಾಕ್ರಮಿಯಾದವನು ಯಾವತ್ತೂ ವಿವಿಧ ಅಮಿಷಗಳಿಗೆ ಒಳಗಾಗುವುದಿಲ್ಲಎನ್ನುವ ಮೌಲ್ಯಯುತ ಸಂದೇಶವು ಈ ಪದ್ಯದಲ್ಲಿ ಅಡಗಿದೆ**

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸಿ**

**1.ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?**

ಕೃಷ್ಣನು ಕರ್ಣನ ಜೊತೆ ಮೈದುನತನದ ಸರಸ ಮಾಡಿ ಕೈಹಿಡಿದೆಳೆದು ರಥದಲ್ಲಿ ಕೂರಿಸಿದನು.

**2.ಕುಮಾರವ್ಯಾಸನ ಆರಾಧ್ಯ ದೈವ ಯಾವುದು?**

**ಕುಮಾರವ್ಯಾಸನ ಆರಾಧ್ಯ ದೈವ ಗದುಗಿನ ನಾರಾಯಣ.**

**3 ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?**

ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವರು.

**4 ಕುಮಾರವ್ಯಾಸನಿಗೆ ಇರುವ ಬಿರುದು ಯಾವುದು?**

ಕುಮಾರವ್ಯಾಸನಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದು ಇದೆ.

5 ನಾರಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಏಕೆ ಬಂತು?

ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ಕರ್ನಾಟಕ ಭಾರತ ಕಥಾಮಂಜರಿ ಎಂಬ ಕೃತಿಯನ್ನು ರಚಿಸಿದ್ದರಿಂದ ನಾರಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಬಂದಿದೆ.

***ಆ) ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.***

1. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು?

ಕರ್ಣ, ನಿನಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ ನೀನು ನಿಜವಾಗಿಯೂ ಭೂಮಿಯ ಒಡೆಯ. ಆದರೆ ನಿನಗೆ ಅದರ ಅರಿವಿಲ್ಲ. ಎಂದು ಹೇಳುತ್ತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು.

2. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?

ಕುಂತಿಯು ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನನ್ನು ಪಡೆದಳು. ಮಾದ್ರಿಯು ಅಶ್ವಿನಿ ದೇವತೆಗಳ ಅನುಗ್ರಹ ದಿಂದ ನಕುಲ ಸಹದೇವರನ್ನು ಪಡೆದಳು.

**3. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?**

ಕೃಷ್ಣನು ಆಮಿಷ ಒಡ್ಡಿದಾಗ ಕರ್ಣನ ಕೊರಳಸೆರೆ ಹಿಗ್ಗಿತು. ಕಂಬನಿಯು ಉಕ್ಕಿಬಂದು ದುಃಖಿತನಾದನು. ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾಗುವುದು" ಎಂದನು. "ಹರಿಯ ಹಗೆತನವು ಹೊಗೆ ತೋರದೆ ಸುಡುವುದಲ್ಲದೆ ಸುಮ್ಮನೆ ಹೋಗುವುದೇ. ಕೃಷ್ಣನು ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು.

**4. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?**

ಕರ್ಣನಿಗೆ ತಾನು ಪಾಂಡವರಲ್ಲಿ ಹಿರಿಯ ಎಂಬ ಸತ್ಯ ತಿಳಿದಿರಲಿಲ್ಲ. ತನ್ನನ್ನು ಪೋಷಿಸಿದ ಕೌರವೇಂದ್ರನಿಗೆ ಅವನ ಶತ್ರುಗಳಾದ ಪಾಂಡವರ ಶಿರವನರಿದು ಒಪ್ಪಿಸುವ ತವಕದಲ್ಲಿ ಅವನಿದ್ದನು. ಆದರೆ ತನ್ನ ಜನ್ಮ ರಹಸ್ಯ ತಿಳಿದ ಕರ್ಣನಿಗೆ ಪಾಂಡವರನ್ನು ಕೊಲ್ಲಲು ಮನಸ್ಸಾಗಲಿಲ್ಲ. ಹಾಗಾಗಿ ಜನ್ಮ ರಹಸ್ಯ ತಿಳಿಸಿದ ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂಬ ನಿಲುವಿಗೆ ಬಂದನು.

5. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?

ನಾಳಿನ ಕುರುಕ್ಷೇತ್ರ ಯುದ್ಧದಲ್ಲಿ ತನ್ನ ಭುಜಬಲ ಪರಾಕ್ರಮ ತೋರಿಸುವುದು. ಚತುರಂಗಬಲ ಸಹಿತನಾಗಿ ವೈರಿಗಳನ್ನು ನಾಶಪಡಿಸುವುದು. ಕೌರವನ ಋಣ ತೀರಿಸಲು ಜೀವವನ್ನು ಮುಡುಪಾಗಿಟ್ಟು ಹೋರಾಡುವುದು. ಇದಲ್ಲದೆ ಪಾಂಡವರಿಗೆ ಅಪಾಯ ಮಾಡದಿರಲು ತೀರ್ಮಾನಿಸಿದ ಕರ್ಣನು, ಕೃಷ್ಣನೆದುರು ಸೂರ್ಯನ ಮೇಲೆ ಪ್ರಮಾಣ ಮಾಡಿದನು.

***ಇ) ಎಂಟು /ಹತ್ತು ವಾಕ್ಯಗಳಲ್ಲಿ ಉತ್ತರಿಸಿ.***

**1. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?**

ಕರ್ಣ, ನಿನಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನು ಪಾಂಡವರಲ್ಲಿ ಹಿರಿಯ. ನಿನ್ನಾಣೆ ನೀನು ನಿಜವಾಗಿ ಭೂಮಿಯ ಒಡೆಯ. ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು. ಎರಡು ವಂಶಗಳೂ ನಿನ್ನ ಸೇವೆ ಮಾಡುವರು. ಇಂತಹ ವೈಭವ ಜೀವನವನ್ನು ಅನುಭವಿಸುವ ಬದಲು ಕೌರವನ ಬಾಯೆಂಜಲಿಗೆ ಕೈಯೊಡ್ಡುವುದು ಉಚಿತವಲ್ಲ. ಎಡಬದಿಯಲ್ಲಿ ಕೌರವರ ಸಮೂಹ, ಬಲಬದಿಯಲ್ಲಿ ಪಾಂಡವರ ಸಮೂಹ, ಎದುರಿಗೆ ಮಾದ್ರ, ಮಾಗಧ, ಯಾದವರು. ಇವರೆಲ್ಲರ ನಡುವೆ ನೀನು ಶೋಭಿಸು ವುದನ್ನು ಬಿಟ್ಟು ಕೌರವನ ಮುಂದೆ "ಒಡೆಯ ಅನುಗ್ರಹವಾಗಲಿ" ಎಂದು ಹೇಳುತ್ತಾ ಕೈಚಾಚುವುದು ನಿನಗೆ ಕಷ್ಟವಾಗುವುದಿಲ್ಲವೆ? ಎಂದು ಆಮಿಷ ಒಡ್ಡಿದನು

**2.ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.**

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಕಂಠ ಬಿಗಿಯಿತು. ಕಣ್ಣಿರು ಹರಿಯಿತು. ದುಃಖಗೊಂಡು ಮನದಲ್ಲೇ ಚಿಂತಿಸುತ್ತಾ 'ಅಯ್ಯೋ ದುರ್ಯೋಧನನಿಗೆ ಕೇಡಾಯಿತು" ಎನ್ನುತ್ತಾನೆ. ನನ್ನನ್ನು ಕಾಪಾಡಿದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದೊಪ್ಪಿಸುವ ಆವೇಶದಲ್ಲಿದ್ದೆ. ಆದರೆ ಕೃಷ್ಣನು ನನ್ನ ಜನ್ಮ ರಹಸ್ಯ ತಿಳಿಸಿ ದುರ್ಯೋಧನನನ್ನು ಕೊಂದನು ಎಂದು ಚಿಂತಿಸುತ್ತಾನೆ. ಪಾಂಡವರಿಗೆ ಗೆಲುವು ಕೌರವರಿಗೆ ಸೋಲು ಎಂಬ ತೀರ್ಮಾನಕ್ಕೆ ಬರುತ್ತಾನೆ. ಇದು ಕರ್ಣನ ಮನಸ್ಥಿತಿ ಶೋಚನೀಯವಾಗಿತ್ತು. ಎಂಬುದನ್ನು ಸೂಚಿಸುತ್ತದೆ.

**3.ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?**

ಕರ್ಣನು ತನ್ನ ಜನ್ಮ ರಹಸ್ಯ ತಿಳಿದ ಮೇಲೆ ತೆಗೆದುಕೊಳ್ಳುವ ತೀರ್ಮಾನಗಳು ನನಗೆ ಸರಿ ಎನಿಸುತ್ತದೆ. ಏಕೆಂದರೆ ಸೋದರರನ್ನು ಕೊಲ್ಲುವ ಬದಲು ತಾನೇ ಸಾಯಲು ನಿರ್ಧರಿಸುತ್ತಾನೆ. ಈ ನಿರ್ಧಾರ ಕರ್ಣನ ತ್ಯಾಗ ಬಲಿದಾನವನ್ನು ಸೂಚಿಸುತ್ತದೆ. ಅದೇ ರೀತಿ ಉಂಡ ಮನೆಗೆ ಕೇಡು ಬಯಸದಿರಲು ತೀರ್ಮಾನಿಸುತ್ತಾನೆ. ಕೌರವನ ಅನ್ನದ ಋಣ ತೀರಿಸಲು ತನ್ನ ಜೀವನವನ್ನೇ ರಣರಂಗಕ್ಕೆ ಅರ್ಪಿಸಲು ನಿರ್ಧರಿಸುತ್ತಾನೆ. ಸ್ವಾಮಿ ಭಕ್ತಿಗೆ ಈ ನಿರ್ಧಾರ ಕಿರೀಟಪ್ರಾಯವಾಗಿದೆ. ಹಾಗಾಗಿ ಕರ್ಣನ ನಿರ್ಧಾರ ಸರಿ ಎನ್ನುವುದು ನನ್ನ ನಿಲುವು

***ಈ) ಸಂದರ್ಭಾನುಸಾರ ಸ್ವಾರಸ್ಯವನ್ನು ತಿಳಿಸಿ.***

**1. "ರವಿಸುತನ ಕಿವಿಯಲ್ಲಿ ಭಿತ್ತಿದನುಭಯವಾ".**

ಆಯ್ಕೆ :– ಈ ವಾಕ್ಯವನ್ನು 'ಕುಮಾರವ್ಯಾಸ' ರಚಿಸಿರುವ 'ಕರ್ನಾಟ ಭಾರತ ಕಥಾಮಂಜರಿ' ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :– ಕೃಷ್ಣನು, ಕರ್ಣನಿಗೆ ಆತನ ಜನ್ಮ ರಹಸ್ಯವನ್ನು ತಿಳಿಸಿದ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ಕೃಷ್ಣನು ಕರ್ಣನಿಗೆ ಆತನ ಜನ್ಮ ರಹಸ್ಯವನ್ನು ತಿಳಿಸುವ ಮೂಲಕ ಆತನಲ್ಲಿ ಭಯವನ್ನು ಬಿತ್ತಿದನು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**2. "ಬಾಯ್ದಂಬುಲಕ್ಕೆ ಕೈಯಾನುವರೆ"**

ಆಯ್ಕೆ :– ಈ ವಾಕ್ಯವನ್ನು 'ಕುಮಾರವ್ಯಾಸ' ರಚಿಸಿರುವ 'ಕರ್ನಾಟ ಭಾರತ ಕಥಾಮಂಜರಿ' ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ

ಸಂದರ್ಭ :– ಕೃಷ್ಣನು, ಕರ್ಣನ ಜೊತೆ ಸರಸದಲ್ಲಿ ಮಾತನಾಡುತ್ತಾ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ಕರ್ಣ, ನೀನು ಹಸ್ತಿನಾಪುರದ ರಾಜನಾಗ ಬಹುದು. ಅದನ್ನು ಬಿಟ್ಟು ದುರ್ಯೋಧನನ ಸೇವಕ ನಾಗಿರುವುದು ಸರಿಯೇ ಎಂಬ ಕೃಷ್ಣನ ಈ ಮಾತು ಸ್ವಾರಸ್ಯಪೂರ್ಣವಾಗಿದೆ.

**3. "ಜೀಯಾ ಹಸಾದವೆಂಬುದು ಕಷ್ಟ"**

ಆಯ್ಕೆ :– ಈ ವಾಕ್ಯವನ್ನು 'ಕುಮಾರವ್ಯಾಸ' ರಚಿಸಿರುವ 'ಕರ್ನಾಟ ಭಾರತ ಕಥಾಮಂಜರಿ' ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ

ಸಂದರ್ಭ :– ಕೃಷ್ಣನು, ಕರ್ಣನ ಜೊತೆ ಸರಸದಲ್ಲಿ ಮಾತನಾಡುತ್ತಾ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :-ಕರ್ಣ, ನೀನು ಹಸ್ತಿನಾಪುರದ ರಾಜನಾಗಬಹುದು. ಅದನ್ನು ಬಿಟ್ಟು ದುರ್ಯೋಧನನು ಕೂಗಲು ಒಡೆಯ, ಪ್ರಸಾದ ಎನ್ನಲು ಕಷ್ಟವಾಗುವುದಿಲ್ಲವೇ? ಎಂದು ಹೇಳುವ ಮೂಲಕ ಕರ್ಣನ ಮನಸ್ಸನ್ನು ಒಡೆಯಲು ಪ್ರಯತ್ನಿಸಿದನು ಎಂಬುದೇ ಇಲ್ಲಿನ ಸ್ವಾರಸ್ಯವಾಗಿದೆ.

**4. "ನಿನ್ನಪದೆಸೆಯಬಯಸುವನಲ್ಲ" .**

ಆಯ್ಕೆ :- ಈ ವಾಕ್ಯವನ್ನು 'ಕುಮಾರವ್ಯಾಸ' ರಚಿಸಿರುವ 'ಕರ್ನಾಟ ಭಾರತ ಕಥಾಮಂಜರಿ' ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ

ಸಂದರ್ಭ :- ಕೃಷ್ಣನು, ಕರ್ಣನ ಜೊತೆ ಸರಸದಲ್ಲಿ ಮಾತನಾಡುತ್ತಾ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- ಕರ್ಣನು ತನ್ನ ಜನ್ಮ ರಹಸ್ಯವನ್ನು ತಿಳಿದು ಚಿಂತಿತನಾಗಿ ಮೌನಿಯಾಗುತ್ತಾನೆ. ಆಗ ಕೃಷ್ಣನು ಈ ಮಾತನ್ನು ಹೇಳುವ ಮೂಲಕ ಕರ್ಣನ್ನು ಸಮಾಧಾನ ಪಡಿಸಿದ್ದು ಈ ಮಾತಿನ ಸ್ವಾರಸ್ಯವಾಗಿದೆ.

**5. "ಮಾರಿಗೌತಣವಾಯ್ತು ನಾಳಿನ ಭಾರತವು".**

ಆಯ್ಕೆ :- ಈ ವಾಕ್ಯವನ್ನು 'ಕುಮಾರವ್ಯಾಸ' ರಚಿಸಿರುವ 'ಕರ್ನಾಟ ಭಾರತ ಕಥಾಮಂಜರಿ' ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ

ಸಂದರ್ಭ :- ಕೃಷ್ಣನು, ಕರ್ಣನ ಜೊತೆ ಸರಸದಲ್ಲಿ ಮಾತನಾಡುತ್ತಾ ಆತನ ಜನ್ಮ ರಹಸ್ಯವನ್ನು ತಿಳಿಸುತ್ತಾನೆ. ತನ್ನ ಜನ್ಮ ರಹಸ್ಯ ತಿಳಿದ ಕರ್ಣನು ಕೃಷ್ಣನಿಗೆ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- **ಮುಂದೆ ನಡೆಯುವ ಮಹಾಭಾರತ ಯುದ್ಧದ ತೀರ್ವತೆಯನ್ನು ತಿಳಿಸುವ ಕರ್ಣನ ಈ ಮಾತುಸ್ವಾರಸ್ಯಪೂರ್ಣವಾಗಿದೆ.**

***ಉ) ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ.***

೧. 'ರಾಜೀವಸಖ' ಎಂದರೆ ಎಂದು ಅರ್ಥ. – **<u>ಸೂರ್ಯ</u>**

೨. ಗದುಗಿನ ಭಾರತವು ಷಟ್ಪದಿಯಲ್ಲಿ ರಚಿತವಾಗಿದೆ. – **<u>ಭಾಮಿನಿ</u>**

೩. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದರು. **<u>–ನಕುಲ –ಸಹದೇವ</u>**

೪. ಕರ್ಣನು ಅನುಗ್ರಹದಿಂದ ಜನಿಸಿದನು. – **<u>ಸೂರ್ಯ</u>**

೫. ಗದುಗಿನ ಸಮೀಪದ ಕುಮಾರವ್ಯಾಸನು ಹುಟ್ಟಿದಸ್ಥಳ.– **<u>ಕೋಳಿವಾಡ</u>**

## ***ಭಾಷಾ ಚಟುವಟಿಕೆ***

***<u>ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ.</u>***

"ಮಾರಿಗೌತಣವಾಯ್ತು ನಾಳಿನ ಭಾರತವು"

ಅಲಂಕಾರ :- ರೂಪಕಾಲಂಕಾರ

ಲಕ್ಷಣ :- ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ '<u>ರೂಪಕಾಲಂಕಾರ</u>'.

ಉಪಮೇಯ :- ನಾಳಿನ ಭಾರತ ಯುದ್ಧ

ಉಪಮಾನ :- ಮಾರಿಯ ಔತಣ

ಸಮನ್ವಯ :- ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

***<u>ವಿಗ್ರಹಿಸಿ ಸಮಾಸದ ಹೆಸರನ್ನು ಹೇಳಿ</u>***

**1.ಇನತನೂಜ–ಇನನ+ತನೂಜನು +ಯಾವನು ಅವನೇ(ಕರ್ಣ) =ಬಹುವ್ರೀಹಿ**

**2.ದನುಜರಿಪು–ದನುಜರಿಗೆ +ರಿಪು ಆವನೋ ಅವನೆ (ಕೃಷ್ಣ) =ಬಹುವ್ರೀಹಿ**

**3.ಮುರಾರಿ– ಮುರನ+ಅರಿ ಯಾವನೂ9ಕೃಷ್ಣ) ಬಹುವ್ರೀ**

**4.ಮೇದಿನಿಪತಿ– ಮೇದಿನಿಗೆ+ ಪತಿ ಯಾವನೋ(ಕೃಷ್ಣ) =ಬಹುವ್ರೀಹಿ**

**5.ಕೈಯಾನು–ಕೈಯನ್ನು + ಆನು=ಕ್ರಿಯಾ ಸಮಾಸ**

**6.ಮಾದ್ರಮಾಗಧಯಾದವರು—ಮಾದ್ರರು+ ಮಾಗಧವರು+ಯಾದವರು= ದ್ವಂದ್ವ**

7.ಹೊಗೆದೋರು– ಹೊಗೆಯನ್ನು + ತೋರು=ಕ್ರಿಯಾ

8.ರಾಜೀವಸಖ– ರಾಜೀವನು + ಸಖನು ಯಾವನೋ ಅವನೆ(ಸೂರ್ಯ) ಬಹುವ್ರೀಹಿ

<u>ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸಿನ ಹೆಸರನ್ನು ಹೇಳಿ.</u>

ಏನು ಹೇಳೈ ಕರ್ಣ ಚಿತ್ತ
ಗ್ಲಾನಿಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

| 3 | 4 | 3 | 4 |
|---|---|---|---|
| —U | —— | — U | —— |
| ಏನು | ಹೇಳೈ | ಕರ್ಣ | ಚಿತ್ತ |

| 3 | 4 | 3 | 4 |
|---|---|---|---|
| —U | — U U | U U U | —— |
| ಗ್ಲಾನಿ | ಯಾವುದು | ಮನಕೆ | ಕುಂತೀ |

| 3 | 4 | 3 | 4 | 3 | 4 | ಗುರು |
|---|---|---|---|---|---|---|
| —U | U UU U | — U | — UU | —U | — U U | — |
| ಸೂನು | ಗಳಬೆಸೆ | ಕೈಸಿ | ಕೊಂಬುದು | ಸೇರ | ದೇನಿನ | ಗೆ |

ಈ ಮೇಲಿನ ಪದ್ಯವು ಮಾತ್ರಾ ಗಣದ 'ಭಾಮಿನಿ ಷಟ್ಪದಿ'ಯಲ್ಲಿ ರಚಿತವಾಗಿದೆ.

4. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗುರುತಿಸಿ ಮೂರನೇ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದ ಬರೆಯಿರಿ.

1. ತನುಜ : ಮಗ :: ಸಖ : .....................
2. ಯುದ್ಧ : ಜುದ್ದ :: ಪ್ರಸಾದ : .........................
3. ಭೇದವಿಲ್ಲ : ಆಗಮ ಸಂಧಿ :: ನಿಮ್ಮಡಿಗಳಲಿ : ..............................
4. ಕಂದ : ನಾಲ್ಕು ಸಾಲು :: ಷಟ್ಪದಿ : ...................................

ಉತ್ತರಗಳು: 1. ಗೆಳಯ, 2. ಹಸಾದ, 3. ಲೋಪಸಂಧಿ, 4. ಆರು ಸಾಲು

.
*************************

# ಪದ್ಯ – ೪. ಛಲಮನೆ ಮೆರೆವೆಂ. –ರನ್ನ

ಮಹಾಕವಿ ರನ್ನ ಕ್ರಿ.ಶ.949 ರಲ್ಲಿ ಬಾಗಲಕೋಟೆಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದ ರನ್ನನು 'ಸಾಹಸ ಭೀಮ ವಿಜಯಂ(ಗದಾಯುದ್ಧ), ಅಜಿತ ತೀರ್ಥಂಕರ ಪುರಾಣ, ಪರಶುರಾಮ ಚರಿತಂ, ಚಕ್ರೇಶ್ವರ ಚರಿತ' ಎಂಬ ಕಾವ್ಯಗಳನ್ನು ಬರೆದಿದ್ದಾನೆ. 'ರನ್ನಕಂದ' ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಕನ್ನಡದ ರತ್ನತ್ರಯರಲ್ಲಿ ಒಬ್ಬನಾದ ರನ್ನನಿಗೆ ತೈಲಪನು " ಕವಿಚಕ್ರವರ್ತಿ" ಎಂಬ ಬಿರುದನ್ನು ನೀಡಿ ಗೌರವಿಸಿದ್ದಾನೆ.

**ಪದ್ಯದ ಭಾವಾರ್ಥ (ಮೌಲ್ಯವನ್ನಾಧರಿಸಿ)** ಸಾರಾಂಶ:– ಭೀಷ್ಮನು ದುರ್ಯೋಧನನನ್ನುಕುರಿತು,ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಹಿಂದಿನಂತೆ ನಡೆಯುವ ಹಾಗೆ ಮಾಡುವೆನು.ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು. ಎಂದುಭೀಷ್ಮರು ಹೇಳಿದಾಗ ದುರ್ಯೋಧನನು ಮುಗುಳು ನಗೆ ನಕ್ಕು–

ಕಂ॥ ನಿಮಗೆ ಪೊಡೆಮಟ್ಟು ಪೋಪೀ।
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ॥
ಸಮಕೊಳಿಸಲೆಂದು ಬಂದೆನೆ
ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ॥ ॥1॥

ದುರ್ಯೋಧನನು ಮುಗುಳು ನಗೆಬೀರಿ, ಭೀಷ್ಮರನ್ನುಕುರಿತು" ಅಜ್ಜ, ನಿಮಗೆವಂದಿಸಿ, ಆಶೀರ್ವಾದವನ್ನು ಪಡೆದುಹೋಗುವ ನಿರ್ಧಾರದಿಂದ ಬಂದೆನು. ಶತ್ರುಗಳೊಡನೆಸಂಧಿಯ ಒಪ್ಪಂದವನ್ನು ಮಾಡಿಕೊಳ್ಳಲೆಂದು ಬಂದಿರುವೆನೇ? ಯುದ್ಧದಲ್ಲಿ ನಾನು ಮಾಡಬೇಕಾದ ಕಾರ್ಯ ಯಾವುದು ಹೇಳಿ" ಎಂದನು.

**ವೀರನಾದವನಿಗೆ ಸಾಮ್ರಾಜ್ಯದ ಮೋಹಕ್ಕಿಂತ ಛಲವೇ ಮುಖ್ಯ ಎಂಬ ಮೌಲ್ಯಯುತ ಸಂದೇಶವು ಇಲ್ಲಿ ಅಭಿವ್ಯಕ್ತಗೊಂಡಿದೆ.**

ಕಂ॥ ನೆಲಕಿಟಿವೆನೆಂದು ಬಗೆದಿರೆ।
ಚಲಕಿಟಿವೆಂ ಪಾಂಡುಸುತರೊಳೀನೆಲನಿದು ಪಾ॥
ಟಿನ್ನೆಲನೆನಗೆ ದಿನಪಸುತನಂ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟಿಪೆನೇ॥ ॥2॥

ದುರ್ಯೋಧನನು ಭೀಷ್ಮರನ್ನು ಕುರಿತು"ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧಮಾಡುವೆನು ಎಂದು ತಿಳಿದಿರುವರೇ; ಚಲಕ್ಕಾಗಿ ಯುದ್ಧಮಾಡುವೆನು. ನನ್ನಪಾಲಿಗೆ ಇದು ಪಾಳುಭೂಮಿ. ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಹೊಸಬಾಳು ಬಾಳುವೆನೇ?" ಎಂದು ಹೇಳಿದನು.

**ವೀರನಾದವನಿಗೆ ಸಾಮ್ರಾಜ್ಯದ ಮೋಹಕ್ಕಿಂತ ಛಲವೇ ಮುಖ್ಯ ಎಂಬ ಮೌಲ್ಯಯುತ ಸಂದೇಶವು ಇಲ್ಲಿ ಅಭಿವ್ಯಕ್ತಗೊಂಡಿದೆ.**

ಉ॥ ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು।
ಳ್ಳನ್ನೆಗಮೊಲ್ಲೆನೆನ್ನೊಡಲೊಳೆನ್ನಸುವುಳ್ಳಿನಮಜ್ಜ ಸಂಧಿಯಂ॥
ಮುನ್ನಮವಂದಿರಿರ್ಬರುಮನಿಕ್ಕುವೆನಿಕ್ಕಿ ಬಟಿಕ್ಕೆ ಸಂಧಿಗೆ।
ಯ್ವೊನ್ನೆಗಟಿಂತಕಾತ್ಮಜನೊಳೆನ್ನಟಿಲಾಟಿದೊಡಾಗದೆಂಬೆನೇ॥ ॥3॥

ದುರ್ಯೋಧನನು ಭೀಷ್ಮರನ್ನು ಕುರಿತು"ಅಜ್ಜ, ನನ್ನ ಪ್ರೀತಿಯ ಬಂಟನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಕೊಂದ ಅರ್ಜುನ ಭೀಮರು ಇರುವತನಕ ಹಾಗೂ ನನ್ನ ದೇಹದಲ್ಲಿ ಪ್ರಾಣ ಇರುವತನಕ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಅವರಿಬ್ಬರನ್ನು ಕೊಲ್ಲುವೆನು; ಕೊಂದ ಬಳಿಕ ಸಂಧಿ ಮಾಡಿಕೊಳ್ಳುವೆನು. ನನ್ನ ದುಃಖವು ತಣ್ಣಗಾದಾಗ ಪ್ರಸಿದ್ಧನಾದ ಧರ್ಮರಾಯನೊಡನೆ ಸಂಧಿಯನ್ನು ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ?" ಎಂದು ಹೇಳಿದನು.

**ವೀರನಾದವನಿಗೆ ಸಾಮ್ರಾಜ್ಯದ ಮೋಹಕ್ಕಿಂತ ಛಲವೇ ಮುಖ್ಯ ಎಂಬ ಮೌಲ್ಯಯುತ ಸಂದೇಶವು ಇಲ್ಲಿ ಅಭಿವ್ಯಕ್ತಗೊಂಡಿದೆ.**

ಕಂ॥ ಪುಟ್ಟಿದ ನೂರ್ವರುಮೆನ್ನೊಡ।
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ॥
ಪುಟ್ಟಿ ಪೊದಟ್ಟುದು ಸತ್ತರ್
ಪುಟ್ಟರೆ ಪಾಂಡವರೊಳಿಟಿದು ಛಲಮನೆ ಮೆಟಿವೆಂ ॥ ॥4॥

ದುರ್ಯೋಧನನು ಭೀಷ್ಮರನ್ನು ಕುರಿತು"ನನ್ನ ನೂರುಜನ ತಮ್ಮಂದಿರು ಶತ್ರುಗಳನ್ನು ಎದುರಿಸಿ ಯುದ್ಧಮಾಡಿ ಸತ್ತ ರು. ಆಗ ನನಗೆ ಕೋಪವು ಹುಟ್ಟಿ ಹೊರಹೊಮ್ಮಿತು. ಸತ್ತವರು ಮತ್ತೆ ಮತ್ತೆ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಯುದ್ಧಮಾಡಿ, ಛಲವನ್ನೇ ಮೆರೆಯುವೆನು" ಎಂದುಹೇಳಿದನು.

**ವೀರನಾದವನಿಗೆ ಸಾಮ್ರಾಜ್ಯದ ಮೋಹಕ್ಕಿಂತ ಛಲವೇ ಮುಖ್ಯ ಎಂಬ ಮೌಲ್ಯಯುತ ಸಂದೇಶವು ಇಲ್ಲಿ ಅಭಿವ್ಯಕ್ತಗೊಂಡಿದೆ.**

ಕಂ॥ ಕಾದದಿರೆನಜ್ಜ ಪಾಂಡವ।
ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ॥
ಣಾದೆನದಟಿಂದೆ ಪಾಂಡವ
ರ್ಗಾದುದು ಮೇಣಾಯ್ತು ಕೌರವಂಗವನಿತಳಂ॥ ॥5॥

ದುರ್ಯೋಧನನು ಭೀಷ್ಮರನ್ನು ಕುರಿತು"ಅಜ್ಜ, ನಾನು ಪಾಂಡವರೊಡನೆ ಯುದ್ಧಮಾಡದೆ ಇರುವುದಿಲ್ಲ. ಇಂದಿನ ಯುದ್ಧದಲ್ಲಿ ಒಂದೋ ಪಾಂಡವರು ಭೂಮಿಗೆ ಒಡೆಯರಾಗುವರು ಅಥವಾನಾನುಭೂಮಿಗೆ ಒಡೆಯನಾಗುವೆನು. ಆದ್ದರಿಂದನಾನು ಯುದ್ಧವನ್ನು ಮಾಡುವೆನು" ಎಂದು ಹೇಳಿದನು.

**ವೀರನಾದವನಿಗೆ ಸಾಮ್ರಾಜ್ಯದ ಮೋಹಕ್ಕಿಂತ ಛಲವೇ ಮುಖ್ಯ ಎಂಬ ಮೌಲ್ಯಯುತ ಸಂದೇಶವು ಇಲ್ಲಿ ಅಭಿವ್ಯಕ್ತಗೊಂಡಿದೆ**

## ಅಭ್ಯಾಸ

***ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.***

**1. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೆ ಎಂದು ದುರ್ಯೋಧನನು ಯಾರಿಗೆ ಹೇಳುವನು?**

ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೆ ಎಂದು ದುರ್ಯೋಧನನು ಭೀಷ್ಮಾ ಚಾರ್ಯರಿಗೆ ಹೇಳುವನು.

**2. ದಿನಪಸುತ ಎಂದರೆ ಯಾರು?**

ದಿನಪಸುತ ಎಂದರೆ ಕರ್ಣ.

**3. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ?**

ಅರ್ಜುನ ಮತ್ತು ಭೀಮ ಇಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ. ಹೇಳುತ್ತಾನೆ.

**4. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ಯಾರು?**

ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ದುರ್ಯೋಧನ.

**5. ಅಂತಕಾತ್ಮಜ ಎಂದರೆ ಯಾರು?**

ಅಂತಕಾತ್ಮಜ ಎಂದರೆ ಧರ್ಮರಾಯ.

***ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಲಲ್ಲಿ ಉತ್ತರಿಸಿ.***

**1. ತಾನಿ ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?**

ದುರ್ಯೋಧನನು ಭೀಷ್ಮಾಚಾರ್ಯರಿಗೆ "ನಾನು ಭೂಮಿಗಾಗಿ ಹೋರಾಡುತ್ತಿಲ್ಲ ಆದರೆ ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ನನ್ನ ಒಡಹುಟ್ಟಿದ ನೂರುಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು, ಸತ್ತವರೇನು ಮತ್ತೆ ಹುಟ್ಟುವುದಿಲ್ಲವೆ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ' ಎಂದು ಹೇಳುತ್ತಾನೆ.

**2. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?**

ಭೀಷ್ಮಾಚಾರ್ಯರು ಪಾಂಡವರೊಡನೆ ಸಂಧಿ ಮಾಡಿಕೊ ಎಂದು ಸಲಹೆ ಮಾಡಿದಾಗ ದುರ್ಯೋಧನನು ಅದಕ್ಕೆ ಒಪ್ಪುವುದಿಲ್ಲ ಅವನು :ನಾನು ಭೂಮಿಗಾಗಿ ಹೋರಾಡುತ್ತಿಲ್ಲ, ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ಪ್ರಿಯ ಗೆಳೆಯನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಸಹಬಾಳ್ವೆ ಮಾಡುವುದಿಲ್ಲ' ಎನ್ನುತ್ತಾನೆ.

**3. ಪಾರ್ಥ-ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**

ನನ್ನ ಪ್ರೀತಿಯ ಗೆಳೆಯ ಕರ್ಣನನ್ನು, ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಕೊಂದ ಅರ್ಜುನ- ಭೀಮರು ಬದುಕಿರುವವರೆಗೆ, ನನ್ನ ದೇಹದಲ್ಲಿ ಪ್ರಾಣ ಇರುವ ವರೆಗೆ ನಾನು ಸಂಧಿ ಮಾಡಿಕೊಳ್ಳಲು ಒಪ್ಪುವುದಿಲ್ಲ. ಆ ಇಬ್ಬರನ್ನೂ ಕೊಲ್ಲುವೆನು. ಅವರನ್ನು ಕೊಂದ ಬಳಿಕ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳುತ್ತೇನೆ" ಎಂಬುದು ಪಾರ್ಥ-ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವಾಗಿದೆ.

***ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು  ವಾಕ್ಯಗಲಲ್ಲಿ ಉತ್ತರಿಸಿ.***

**1. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ**

ಮಹಾಭಾರತ ಯುದ್ಧದಲ್ಲಿ ತನ್ನೆಲ್ಲಾ ಸಹೋದರರನ್ನು ಆಪ್ತಮಿತ್ರನಾದ ಕರ್ಣನ್ನೂ ಕಳೆದುಕೊಂಡ ದುರ್ಯೋದನನು ತನ್ನ ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶ್ಯೆಯಲ್ಲಿ ಮಲಗಿದ್ದ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ನಿಲ್ಲಿಸಿ ಪಾಂಡವರೊಡನೆ ಸಂಧಿ ಮಾಡಿಕೊಳ್ಳುವುದು ಸೂಕ್ತವೆಂದು ದುರ್ಯೋದನನಿಗೆ ಸಲಹೆ ನೀಡುತ್ತಾರೆ.

ಭೀಷ್ಮರು ದುರ್ಯೋದನನಿಗೆ  "ನೀನು ಒಪ್ಪುವುದಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಹಿಂದಿನಂತೆ ನಡೆಯುವ ಹಾಗೆ ಮಾಡುವೆನು" ಎಂದು ಹೇಳುತ್ತಾರೆ. ಅವರಿಗೆ ದುರ್ಯೋಧನ ಛಲಗಾರನೆಂದು ತಿಳಿದಿದ್ದರೂ ಹಿರಿಯರಾಗಿ

ಅವನನ್ನು ಸಂಧಿಗಾಗಿ ಒಪ್ಪಿಸುವ ಒಂದು ಪ್ರಯತ್ನ ಇಲ್ಲಿ ಕಂಡುಬರುತ್ತದೆ. ಹಾಗೆಯೇ "ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು" ಎಂಬ ಬೀಷ್ಮರ ಮಾತಲ್ಲಿ ಪಾಂಡವರ ಮೇಲಿದ್ದ ನಂಬಿಕೆ–ವಿಶ್ವಾಸವೂ ವ್ಯಕ್ತವಾಗಿದೆ.

"ಅಜ್ಜಾ ನಾನು ನಿಮಗೆ ನಮಸ್ಕರಿಸಿ ಹೋಗಲೆಂದು ಬಂದನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದಿಲ್ಲ. ನಾನು ಭೂಮಿಗಾಗಿ ಹೋರಾಡುವೆನೆಂದು ಭಾವಿಸಿದಿರಾ? ಆದರೆ ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ" ಎಂದು ಹೇಳುವಲ್ಲಿ ಆತನ ದಿಟ್ಟ ನಿರ್ಧಾರ ಸ್ಪಷ್ಟವಾಗಿ ಗೋಚರಿಸುತ್ತದೆ.

ಅಲ್ಲದೆ "ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಬಾಳಲಾದೀತೆ? ನನ್ನ ಪ್ರೀತಿಯ ಗೆಳೆಯನನ್ನು, ಪ್ರೀತಿಯ ತಮ್ಮನನ್ನು ಕೊಂದ ಅರ್ಜುನ–ಭೀಮರು ಬದುಕಿರುವವರೆಗೆ, ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ನಾನು ಸಂಧಿಯನ್ನು ಒಪ್ಪುವುದಿಲ್ಲ, ಈ ಇಬ್ಬರನ್ನು ಕೊಂದು ನಂತರ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುತ್ತೇನೆ. ಎಂದು ಹೇಳುವಲ್ಲಿ ಆತನಿಗೆ ಕರ್ಣ ಮತ್ತು ತಮ್ಮನಲ್ಲಿದ್ದ ಪ್ರೀತಿಯ ತೀವ್ರತೆ ತಿಳಿಯುತ್ತದೆ. ಪ್ರಾಣಹೋದರೂ ಅಭಿಮಾನ ಬಿಡುವುದಿಲ್ಲ ಎಂಬ ಮಾತು ಸ್ವಾರಸ್ಯಪೂರ್ಣವಾಗಿದೆ.

**2. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವುವರಿಸಿ.**

ಭೀಷ್ಮಾಚಾರ್ಯರು ತಮ್ಮ ಬಳಿಗೆ ಬಂದ ದುರ್ಯೋಧನನಿಗೆ ಪಾಂಡವರೊಡನೆ ಸಂಧಿಮಾಡಿಕೊಳ್ಳುವ ಸಲಹೆ ನೀಡುತ್ತಾರೆ. ಆದರೆ ಅಭಿಮಾನಧನನಾದ ದುರ್ಯೋಧನನು ಅದಕ್ಕೆ ಒಪ್ಪುವುದಿಲ್ಲ ಆಗ ಅವನಾಡುವ ಮಾತುಗಳಲ್ಲಿ ಆತನ ಛಲದ ಗುಣ ವ್ಯಕ್ತವಾಗಿರುವುದನ್ನು ಕಾಣಬಹುದು.

ದುರ್ಯೋಧನನು "ಅಜ್ಜಾ ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದ ಮಾಡಿಕೊಳ್ಳುವುದಕ್ಕಲ್ಲ, ನನ್ನನ್ನು ಭೂಮಿಗಾಗಿ ಹೋರಾಡುವನೆಂದು ಭಾವಿಸಿದಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು ಈ ಭೂಮಿ ನನಗೆ ಪಾಳು ಭೂಮಿ, ಕರ್ಣನನ್ನು ಕೊಲ್ಲಿಸಿದ ಭೂಮಿಯೊಡನೆ ನಾನು ಮತ್ತೆ ಸಹಬಾಳ್ವೆ ಮಾಡುತ್ತೇನೆಯೆ?

ಅಲ್ಲದೆ "ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಬಾಳಲಾದೀತೆ? ನನ್ನ ಪ್ರೀತಿಯ ಗೆಳೆಯನನ್ನು, ಪ್ರೀತಿಯ ತಮ್ಮನನ್ನು ಕೊಂದ ಅರ್ಜುನ–ಭೀಮರು ಬದುಕಿರುವ ವರೆಗೆ, ನನ್ನ ದೇಹದಲ್ಲಿ ಪ್ರಾಣ ಇರುವ ವರೆಗೆ ನಾನು ಸಂಧಿಯನ್ನು ಒಪ್ಪುವುದಿಲ್ಲ ಈ ಇಬ್ಬರನ್ನು ಕೊಂದು ನಂತರ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುತ್ತೇನೆ. ಎಂದು ಹೇಳುವಲ್ಲಿ ಆತನಿಗೆ ಕರ್ಣ ಮತ್ತು ತಮ್ಮನಲ್ಲಿದ್ದ ಪ್ರಿತಿಯ ತೀವ್ರತೆ ತಿಳಿತುತ್ತದೆ. ಪ್ರಾಣ ಹೋದರೂ ಅಭಿಮಾನ ಬಿಡುವುದಿಲ್ಲ ಎಂಬ ಮಾತು ಸ್ವಾರಸ್ಯಪೂರ್ಣವಾಗಿದೆ

***ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.***

**1. "ನೆಲಕಿರಿವೆನೆಂದು ಬಗೆದಿರೆ ಚಲಕಿರಿವೆಂ"**

**ಆಯ್ಕೆ:– ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮವಿಜಯ' ಎಂಬ ಕೃತಿಯಿಂದ ಆರಿಸಲಾದ 'ಛಲಮನೆ ಮೆರೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.**

**ಸಂದರ್ಭ:– ಭೀಷ್ಮಾಚಾರ್ಯರು ಪಾಂಡವರನ್ನು ಒಪ್ಪಿಸುತ್ತೇನೆ, ಸಂಧಿ ಮಾಡಿಕೊ ಎಂದು ಹೇಳಿದಾಗ ದುರ್ಯೋಧನನು "ಅಜ್ಜಾ ನಾನು ಈ ಭೂಮಿಗಾಗಿ ಯುದ್ಧ ಮಾಡುವೆನೆಂದು ಭಾವಿಸಿದಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಬಿದ್ದ ನೆಲಕ್ಕೆ ಸಮ' ಎನ್ನುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.**

**ಆಯ್ಕೆ:– ದುರ್ಯೋಧನನ ಈ ಮಾತಿನಲ್ಲಿ ನಶ್ವರವಾದ ಅರಸುತನಕ್ಕಿಂತ ಛಲದಿಂದ ಬಾಳುವುದೇ ನಿಜವಾದ ಕ್ಷತ್ರಿಯನ ಗುಣ, ಸಂಧಿ ಮಾಡಿಕೊಳ್ಳುವುದು ಹೇಡಿತನದ ಲಕ್ಷಣ ಎಂಬ ಧ್ವನಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.**

**2. "ಸಮರದೊಳೆನಗಜ್ಜ ಪೇಳಿಮಾವುದು ಕಜ್ಜಂ"**

**ಆಯ್ಕೆ:– ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮವಿಜಯ' ಎಂಬ ಕೃತಿಯಿಂದ ಆರಿಸಲಾದ 'ಛಲಮನೆ ಮೆರೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.**

**ಸಂದರ್ಭ:– ಭೀಷ್ಮಾಚಾರ್ಯರು ಪಾಂಡವರನ್ನು ಒಪ್ಪಿಸುತ್ತೇನೆ, ಸಂಧಿ ಮಾಡಿಕೊ, ಈಗಲೂ ಅವರು ನನ್ನ ಮಾತನ್ನು ಮೀರದೆ ಪಾಲಿಸುತ್ತಾರೆ, ನೀನು ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು ಎಂದು ಹೇಳಿದಾಗ ದುರ್ಯೋಧನನು ಮುಗುಳು ನಗೆ ನಕ್ಕು 'ಅಜ್ಜಾ ನಿಮಗೆ ನಮಸ್ಕರಿಸಿ ಹೋಗಲೆಂದು ಬಂದನೆ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದನೆ?' ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.**

**ಸ್ವಾರಸ್ಯ:– ಇಲ್ಲಿ ದುರ್ಯೋಧನನಿಗೆ ಇಷ್ಟವಾಗದ ಮಾತೆಂದರೆ "ಸಂಧಿ", ಸಂಧಿ ಮಾಡಿಕೊಳ್ಳುವ ಮಾತೊಂದನ್ನು ಬಿಟ್ಟು ಯುದ್ಧದಲ್ಲಿ ನಾನೇನು ಮಾಡಬಹುದೆಂಬುದನ್ನು ಹೇಳಿ' ಎಂಬುದು ಇಲ್ಲಿನ ಮಾತಿನ ಸ್ವಾರಸ್ಯವಾಗಿದೆ.**

**3. ಪಾಂಡವರೊಳಿರೆದು ಛಲಮನೆ ಮೆರೆವೆಂ**

ಆಯ್ಕೆ:– ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮವಿಜಯ' ಎಂಬ ಕೃತಿಯಿಂದ ಆರಿಸಲಾದ 'ಛಲಮನೆ ಮೆರೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ನನ್ನ ಒಡಹುಟ್ಟಿದ ನೂರುಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು ಆದ್ದರಿಂದ ನನ್ನಲ್ಲಿ ಕೋಪಹುಟ್ಟಿ ಬೆಳೆಯಿತು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೆ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ. ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:–: ದುರ್ಯೋದನನು ತನಗೆ ಕೋಪ ಹೆಚ್ಚಾಗಿರುವುದಕ್ಕೆ ಕಾರಣ ನೀಡಿರುವುದಲ್ಲದೆ ತನ್ನ ಸಹೋದರರು ಸತ್ತಿಲ್ಲ ಅವರು ಮತ್ತೆ ಹುಟ್ಟುವರೆಂಬ ನಂಬಿಕೆ ಹೊಂದಿರುವುದು ಹಾಗು ಛಲಕ್ಕಾಗಿ ಹೋರಾಡುವುದು ಇಲ್ಲಿನ ಸ್ವಾರಸ್ಯವಾಗಿದೆ.

**4. "ಮೇಣಾಯ್ತು ಕೌರವಂಗವನಿತಳಂ"**

ಆಯ್ಕೆ:– ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮವಿಜಯ' ಎಂಬ ಕೃತಿಯಿಂದ ಆರಿಸಲಾದ 'ಛಲಮನೆ ಮೆರೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಸಂಧಿಗೆ ಒಪ್ಪದ ದುರ್ಯೋಧನನು" ಅಜ್ಜಾ ನಾನು ಹೋರಾಡದೆ ಬಿಡುವುದಿಲ್ಲ, ಇಂದಿನ ಯುದ್ದದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ನಾನು ಉಳಿಯಬೇಕು ಆದ್ದರಿಂದ ಈ ಭೂಮಿ ಪಾಂಡವರದ್ದಾಗಬೇಕು ಇಲ್ಲಾ ಕೌರವನದಾಗಬೇಕು ಎಂದು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರಿಗೆ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:– ತನ್ನ ಕೊನೆಯ ಉಸಿರಿರುವ ವರೆಗೂ ಪಾಂಡವರೊಡನೆ ಹೋರಾಡುತ್ತೇನೆ ಎಂಬ ದುರ್ಯೋದನನ ದಿಟ್ಟ ನಿರ್ಧಾರ ಪಾಂಡವರ ಮೇಲಿನ ಕೋಪದ ತೀವ್ರತೆ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

## ಭಾಷಾ ಚಟುವಟಿಕೆ

**ಕೆಳಗಿನ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸಿನ ಹೆಸರು ಹೇಳಿ.**

**1) ಪುಟ್ಟಿದ ನುರ್ವರುಮೆನ್ನೊಡೆ**
**ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ**

| 4 | 4 | 4 |
|---|---|---|
| — ᴗ ᴗ | — ᴗ ᴗ | — ᴗ ᴗ |
| ಪುಟ್ಟಿದ | ನೂರ್ವರು | ಮೆನ್ನೊಡೆ |

| 4 | 4 | 4 | 4 | 4 |
|---|---|---|---|---|
| — ᴗ ᴗ | — ᴗ ᴗ | ᴗ — ᴗ | — ᴗ ᴗ | — — |
| ವುಟ್ಟಿದ | ನೂರ್ವರು | ಮಿದಿರ್ಚಿ | ಸತ್ತೊಡೆ | ಕೋಪಂ |

**2) ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು**

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| — ᴗ ᴗ | — ᴗ — | ᴗ ᴗ ᴗ | — ᴗ ᴗ | — ᴗ ᴗ | — ᴗ — | ᴗ — |
| ಎನ್ನಣು | ಗಾಳನೆ | ನ್ನಣುಗ | ದಮ್ಮನ | ನಿಕ್ಕಿದ | ಪಾರ್ಥಭೀ | ಮರು |

**ಈ ಮೇಲಿನ ಪದ್ಯವು ಅಕ್ಷರ ಗಣದ 'ಉತ್ಪಲಾಮಾಲಾ ವೃತ್ತ'ದಲ್ಲಿ ರಚಿತವಾಗಿದೆ**

**<u>ತತ್ಸಮ – ತದ್ಭವಗಳನ್ನು ಬರೆಯಿರಿ</u>**

ಕಜ್ಜ–ಕಾರ್ಯ, ಅಜ್ಜ–ಆರ್ಯ

***ವಿಗ್ರಹಿಸಿ ಸಮಾಸದ ಹೆಸರನ್ನು ಬರೆಯಿರಿ***

ಪಾರ್ಥಭೀಮರು= ಪಾರ್ಥನು+ಭೀಮನು– ದ್ವಂದ್ವ ಸಮಾಸ

ಅಂತಕಾತ್ಮಜ=ಅಂತಕನ +ಆತ್ಮಜನು ಆವನೋ ಅವನು –ಧರ್ಮರಾಜ– ಬಹುವ್ರೀಹಿ ಸಮಾಸ

ದಿನಪಸುತ=ದಿನಪನ+ ಸುತನು ಆವನೋ ಅವನು –ಕರ್ಣ–ಬಹುವ್ರೀಹೀ ಸಮ

********************

# ಪಠ್ಯಪೂರಕ ಅಧ್ಯಯನ

## ೧. ವಸಂತ ಮುಖ ತೋರಲಿಲ್ಲ

***ಅಭ್ಯಾಸ***

**1. ಪುಟ್ಟ ಪೋರಿ ಏನು ಮಾಡುತ್ತಾಳೆ?**

ಪುಟ್ಟಪೋರಿ ಮುಸುರೆ ತಿಕ್ಕುತ್ತಿದ್ದಾಳೆ.

**2. ಅಮ್ಮ ಎಲ್ಲಿ ಮಲಗಿದ್ದಾಳೆ?**

ಅಮ್ಮ ಗುಡಿಸಿಲಲ್ಲಿ ಮಲಗಿದ್ದಾಳೆ

**3. ಯಾರಿಗೆ ವಸಂತ ಮುಖ ತೋರಲಿಲ್ಲ?**

ಕಮ್ಮಾರ, ನೇಕಾರ, ಕುಂಬಾರ, ಕೇರಿಯ ಮಾರ, ಮತ್ತು ಪುಟ್ಟಿಗೆ ವಸಂತ ಮುಖ ತೋರಲಿಲ್ಲ.

**4. ಪುಟ್ಟಿಯ ಪ್ರಶ್ನೆಗಳೇನು?**

ಗುಡಿಸಿಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಯ ಕಂಡು ಅವನು ಮರುಗಿದನೆ? ಇವು ಪುಟ್ಟಿಯ ಪ್ರಶ್ನೆಗಳು.

**5. ಈ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

**ಉತ್ತರ :** ಹಸಿರು ತುಂಬಿ ನಿಂತ ಮಾವಿನ ಮರಗಳು, ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳು, ಮನತುಂಬಿ ಹಾಡುವ ಕೋಗಿಲೆಗಳು ಕಡಲುಕ್ಕಿ ಹರಿಯುವಂತಹ ಸಂಭ್ರಮ ಈ ಕವನದಲ್ಲಿ ವ್ಯಕ್ತವಾಗಿದೆ.

**ಹೆಚ್ಚುವರಿ ಪ್ರಶ್ನೆಗಳು:**

5. **ಗುಡಿಸಲೊಳಗೆ ಬರಲು ಹೆದರಿದವರು ಯಾರು?**

**ಉತ್ತರ:** ಕತ್ತಲೆಗವ್ವೆನ್ನುವ ಗುಡಿಸಲೊಳಗೆ ವಸಂತ ಬರಲು ಹೆದರಿದನು.

6. **ಬಾಲರವಿ ಎಲ್ಲಿ ಸೊರಗಿದ್ದಾನೆ?**

**ಉತ್ತರ:** ಬಾಲರವಿ ತೂತು ಬಿದ್ದ ಅಮ್ಮನ ಸೀರೆಯಲ್ಲಿ ಸೊರಗಿದ್ದಾನೆ.

7. **ಇಳೆಗೆ ಯಾವ ಸಂಭ್ರಮ ಬಂದಿದೆ?**

**ಉತ್ತ ರ :** ಇಳೆಗ ೆ ಕ ಡಲುಕ್ಕಿ ಹರಿಯುವ ಸಂಭ ್ರಮ ಬಂದಿದೆ.

8. **ಪುಟ್ಟಿ ಏಕೆ ಮೂಕ ವಿಸ್ಮಿತಳಾಗಿದ್ದಾಳೆ ?**

**ಉತ್ತರ :** ಹೊಳೆವ ರಂಗೋಲಿಯಲಿ ಥಳಥಳಿಸುವ ಬಾಲರವಿಯ ಕಂಡು ಮೂಕ ವಿಸ್ಮಿತಳಾಗಿದ್ದಾಳೆ.

**9. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪುಟ್ಟಿಯ ಪ್ರಶ್ನೆಗಳೇನು ?**

**ಉತ್ತರ:** ವಸಂತ ಮುಖ ತೋರಲಿಲ್ಲ ಪದ್ಯದಲ್ಲಿ ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ ? ಎಂಬುವು ಪುಟ್ಟಿಯ ಪ್ರಶ್ನೆಗಳಾಗಿವೆ.

# ೭. ಭಗತ್ ಸಿಂಗ್

**ಅಭ್ಯಾಸ**

**1. ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆ ಯಾವಾಗ ನಡೆಯಿತು?**

**ಉತ್ತರ:–** ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆ 1919ರ ಏಪ್ರಿಲ್ 13 ರಂದು ನಡೆಯಿತು.

**2. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರೇನು?**

**ಉತ್ತರ:–** ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರು ಜನರಲ್ ಡಯರ್

## ಹೆಚ್ಚುವರಿ ಪ್ರಶ್ನೆಗಳು

**3. ಭಗತ್‌ಸಿಂಗ್‌ನ ತಂದೆ ತಾಯಿಯ ಹೆಸರೇನು?**

**ಉತ್ತರ:–** ಭಗತ್‌ಸಿಂಗ್‌ನ ತಂದೆ ಕಿಶನ್ ಸಿಂಗ್, ತಾಯಿ ವಿದ್ಯಾವತಿ.

**4. ಭಗತ್‌ಸಿಂಗ್ ಯಾವುದನ್ನು ಪಾರಿತೋಷಕವೆಂದು ತಿಳಿದಿದ್ದನು?**

**ಉತ್ತರ:–** ಭಗತ್‌ಸಿಂಗ್ ರಕ್ತಸಿಕ್ತವಾಗಿದ್ದ ಮಣ್ಣನ್ನು ಪಾರಿತೋಷಕವೆಂದು ತಿಳಿದಿದ್ದನು.

**5. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಹತ್ಯಾಕಾಂಡದ ಮಣ್ಣಿನ ಕುರಿತು ತಂಗಿಗೆ ಹೇಳಿದ್ದೇನು?**

**ಉತ್ತರ:–** ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಹತ್ಯಾಕಾಂಡದ ಮಣ್ಣಿನ ಕುರಿತು ತಂಗಿಗೆ ' ಇದು ಬಹಳ ಪೂಜ್ಯನೀಯವಾದ ಮಣ್ಣು, ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ ' ಎಂದು ಮಣ್ಣನ್ನು ತೋರಿಸುತ್ತಾ ಹೇಳಿದನು.

**6. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು?**

**ಉತ್ತರ:–** ಜಲಿಯನ್ ವಾಲಾಬಾಗ್‌ನ ಮಾರಣ ಹೋಮ ಭಗತ್‌ಸಿಂಗ್‌ನ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿತ್ತು. 1921ರಲ್ಲಿ ಒಂದು ನಿರ್ಧಾರಕ್ಕೆ ಬಂದ ಭಗತ್‌ಸಿಂಗ್, ಒಂದಲ್ಲ ಒಂದು ದಿನ ಈ ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನಾದರೂ ಮಾಡಿಯೇ ತೀರುತ್ತೇನೆಂದು ನಿರ್ಧರಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ.

**7. ರಕ್ತಸಿಕ್ತವಾಗಿದ್ದ ಮಣ್ಣನ್ನು ಭಗತ್‌ಸಿಂಗ್ ಹೇಗೆ ಜೋಪಾನ ಮಾಡಿದನು?**

**ಉತ್ತರ:** ಪವಿತ್ರವಾದ ರಕ್ತಸಿಕ್ತವಾಗಿದ್ದ ಮಣ್ಣಿನಿಂದ ತುಂಬಿದ ಡಬ್ಬಿಯನ್ನು ಮನೆಯ ಸ್ವಚ್ಛವಾದ ಜಾಗದಲ್ಲಿ ಇರಿಸಿದ. ಹೂಗಳನ್ನು ಅದರ ಮೇಲಿಟ್ಟು ಭಕ್ತಿಯಿಂದ ನಮಸ್ಕರಿಸಿದ. ಅಂದಿನಿಂದ ಅನೇಕ ವರ್ಷಗಳವರೆಗೆ ಆ ಮಣ್ಣನ್ನು ಪೂಜಿಸುವುದು ಅವನ ದಿನನಿತ್ಯವಾದ ಆಚರಣೆಯಾಯಿತು.

**8. ಜಲಿಯನ್ ವಾಲಾಬಾಗ್‌ನಲ್ಲಿ ಬಾಲಕ ಭಗತ್‌ಸಿಂಗ್ ಏನು ಮಾಡಿದ?**

**ಉತ್ತರ:** ಪೋಲಿಸರ ಕಣ್ತಪ್ಪಿಸಿ ಜಲಿಯನ್ ವಾಲಾಬಾಗ್ ಬಂದ ಬಾಲಕ ಭಗತ್‌ಸಿಂಗ್ ಭಕ್ತಿಯಿಂದ ತಲೆಬಾಗಿ, ರಕ್ತದಿಂದ ತೊಯ್ದ ಒಂದು ಚಿಟಿಕೆ ಮಣ್ಣನ್ನು ತೆಗೆದು ಹಣೆಗೆ ತಿಲಕವನ್ನಿಟ್ಟುಕೊಂಡು, ಕಣ್ಮುಚ್ಚಿ ಭಕ್ತಿಯಿಂದ ಕೈ ಮುಗಿದು ಹುತಾತ್ಮರಿಗೆ ಗೌರವ ಸಲ್ಲಿಸಿ, ಪೂಜ್ಯನೀಯ ಆ ಮಣ್ಣನ್ನು ಊಟದ ಡಬ್ಬಿಯಲ್ಲಿ ಮನೆಗೆ ತಂದನು.

**9. ಭಗತ್‌ಸಿಂಗ್ ಹೇಗೆ ಅಮರನಾದನು?**

**ಉತ್ತರ:** ಭಗತ್‌ಸಿಂಗ್ ಕ್ರಾಂತಿಕಾರಿಗಳ ಸಹಕಾರದಿಂದ ಮಾತೃಭೂಮಿಯನ್ನು ಗುಲಾಮಗಿರಿಯ ಸಂಕೋಲೆಯಿಂದ ಬಿಡಿಸಲು ನಿರ್ಧರಿಸಿದನು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಇಂಕ್ವಿಲಾಬ್ ಜಿಂದಾಬಾದ್ ಘೋಷಣೆಯೊಂದಿಗೆ ಹೋರಾಟಕ್ಕೇ ಒಂದು ಗುರಿಯನ್ನು ತೋರಿಸಿಕೊಟ್ಟು, ಮರಣದಂಡನೆ ಶಿಕ್ಷೆಗೆ ಗುರಿಯಾಗಿ ತನ್ನ ಜೀವನವನ್ನೇ ಅರ್ಪಿಸಿ ಅಮರನಾದನು.

# ೩. ಉದಾತ್ತ ಚಿಂತನೆಗಳು

**ಅಭ್ಯಾಸ**

**೧. ಕ್ರಿ ಯಾ ಸ್ವಾತಂತ್ರ್ಯ ಎಂದರೇನು?**

**ಉತ್ತರ:–** ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ಔಪಚಾರಿಕವಾಗಿದ್ದರೆ ಸಾಲದು, ಅದು ಜಾರಿಯಲ್ಲಿರಬೇಕು ಹಾಗೂ ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ

ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು. ಎಲ್ಲಿ ತನ್ನ ಕೆಲಸದ ಫಲವಾಗಿ ತನ್ನ ಕೆಲಸ, ಮನೆ, ಆಹಾರಗಳನ್ನು ಕಳೆದುಕೊಂಡು ಬಿಡುವ ಭೀತಿ ವ್ಯಕ್ತಿಗೆ ಇರುವುದಿಲ್ಲವೋ ಅದೇ ನಿಜವಾದ ಕ್ರಿಯಾ ಸ್ವಾತಂತ್ರ್ಯ.

**2. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?**

**ಉತ್ತರ:–** ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ತ್ವದಿಂದ ಅನುಗಮನ ಮಾಡಿದ ತತ್ತ್ವವೇ ಸರಿ. ಏಕೆಂದರೆ ರಾಜಕೀಯವಾದ ಸಮಸ್ತ ಅಧಿಕಾರವೂ ಜನತೆಯಿಂದ ಬರುತ್ತದೆ. ತಮ್ಮ ಸಾರ್ವಜನಿಕವಾದ ಹಾಗೂ ಖಾಸಗಿಯಾದ ಜೀವನವನ್ನು ನಿರ್ದೇಶಿಸುವ, ನಿಯಂತ್ರಿಸುವ ಸಾಮರ್ಥ್ಯವನ್ನು ಅವರು ತಾವೇ ಹೊಂದಿರುತ್ತಾರೆಯೇ ಹೊರತು ಬೇರೆ ಯಾರೂ ಅಲ್ಲ ಎಂದು ಇದರ ಅರ್ಥವಾಗುತ್ತದೆ.

**3. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**

**ಉತ್ತರ:–** ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತ ಗಾಂಧೀಜಿ ತನ್ನ ಬರಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದರು. ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರು ಹೇಳಿದ್ದಾರೆ.

**4. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?**

**ಉತ್ತರ:–** ರಸ್ಕಿನ್‌ನ "ಅನ್‌ಟು ದಿಸ್ ಲಾಸ್ಟ್" ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದುದೇ ತಡ, ಅದನ್ನು ಕೆಳಗಿಳಿಸಲು ಗಾಂಧೀಜಿಯವರಿಗೆ ಸಾಧ್ಯವಾಗಲಿಲ್ಲ. ಅದು ಅವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿದರು. ಅವರ ಬಾಳಿನಲ್ಲಿ ತಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿತು.

**5. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**

**ಉತ್ತರ:–** ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿ. ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಅದರೊಂದಿಗೆ ಅವರಿಗೆ ಮತ್ತೊಂದು ಆವಶ್ಯಕತೆಯಾದ ಸಂಸ್ಕೃತಿ ನೀಡಬೇಕಾಗುತ್ತದೆ. ಜನರಿಗೆ ಶಿಕ್ಷಣ ಮತ್ತು ಸಂಸ್ಕೃತಿ ಎರಡನ್ನೂ ನೀಡಿದಾಗ ಜನರ ಹಾಗೂ ದೇಶದ ಪ್ರಗತಿ ಸ್ಥಿರವಾಗುವುದು.

**6. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?**

**ಉತ್ತರ:–** ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ನಿಮ್ಮ ದೇಶದ ಮತ್ತು ಇಡೀ ಜಗತ್ತಿನ ಕಲ್ಯಾಣ ನಿಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಿ, ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ. ಅನಂತರ ನೀವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ನೀವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಿರಿ ಎಂಬ ತೃಪ್ತಿ ಇರುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ.

# ಭಾಗ –೨



## ಗದ್ಯ ಪಾಠ–5 ಯುದ್ಧ ಸಾರಾ ಅಬೂಬಕ್ಕರ್

**ಲೇಖಕಿಯರ ಪರಿಚಯ:– ಸಾ ರಾ ಅಬೂಬಕ್ಕರ್** ಅವರು 30 ಜೂನ್ 1936ರಂದು **ಕಾಸರಗೋಡಿನಲ್ಲಿ** ಜನಿಸಿದರು. ಇವರು **ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ, ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ **ನೃಪತುಂಗ** ಪ್ರಶಸ್ತಿ ಲಭಿಸಿವೆ.

## ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

**1.ರಾಹಿಲನು ಯಾರು?**

ಉ:–ರಾಹಿಲ ಸೈನ್ಯದಲ್ಲಿ ಒಬ್ಬ ಡಾಕ್ಟರ್.

**2.ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?**

ರಾಹಿಲನು ತುರ್ತು ಪರಿಸ್ಥಿತಿಗೆ ಬೇಕಾದ ಔಷದ ಮತ್ತು ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

**3. ಗಡಿ ಪ್ರದೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಯಾತಕ್ಕಾಗಿ ಪಾಲಿಸಲಾಗುತ್ತದೆ?**

ಉ:–ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು ;ಬ್ಲಾಕ್ ಔಟ್' ನಿಯಮವನ್ನು ಪಾಲಿಸಲಾಗುತ್ತದೆ.

**4. ರಾಹಿಲನು ಮುದುಕಿಯ ಎದುರುಗೆ ನುಡಿದ ಗಂಭೀರವಾದ ಮಾತುಗಳೇನು?**

ಉ:–ರಾಹಿಲನು "ನಾನು ಯುದ್ಧಮಾಡುವ ಮೂರ್ಖರ ಕಡೆಯವನಲ್ಲ. ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು" ಎಂದು ಗಂಭೀರವಾಗಿ ನುಡಿದನು.

**5.ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?**

ಉ:–"ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯಮಾಡುವುದೇ ಯುದ್ಧದ ಪರಿ" ಎಂಬುದು ಯುದ್ಧದ ಬಗೆಗೆ ಗೊಣಗಿಕೊಂಡು ಮುದುಕಿಯು ಬಾಗಿಲು ತೆರೆದಳು.

## ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

**1. ಡಾಕ್ಟರ್‌ಗೆ ವಿಮಾನದ ಪೈಲೆಟ್ ಏನು ಹೇಳಿದನು?**

ಉ:–"ಡಾಕ್ಟರ್ ರೇಡಿಯೋ ಸಮನಾಗಿ ಕೆಲಸ ಮಾಡುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾದ್ಯವಾಗುತ್ತಿಲ್ಲ, ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ?" ಎಂದು ವಿಮಾನದ ಪೈಲೆಟ್ ನುಡಿದನು.

**2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?**

ಉ:–ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ 'ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಕದವನ್ನುತಟ್ಟಿದರೆ ಪರಿಣಾಮವೇನಾಗಬಹುದು? ಆ ಮನೆಯಿಂದ ಒಂದೇ ಒಂದುಬೆಳಕಿನ ಕಿರಣವೂ ಹೊರಗಡೆ ಹಾಯುತ್ತಿಲ್ಲ, ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮವನ್ನು ಪಾಲಿಸಲಾಗುತ್ತಿದೆ. ಇಂತಹ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ'? ಎಂಬ ಪ್ರಶ್ನೆಗಳು ಮೂಡಿದವು.

**3. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?**

ಉ:–ಮುದುಕಿಯು ರಾಹಿಲನ ಬಳಿ "ನೋಡಪ್ಪಾ ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು,ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ, ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು,ಜಮೀನು ಆಸ್ತಿ ನಮಗೆ ಸಾಕಷ್ಟಿತ್ತು, ಈಗಲೂ ಇದೆಯೆನ್ನು, ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲಾ? ಯುದ್ಧವಂತೆ ಯುದ್ಧ!" ಮುದುಕಿ ತಿರಸ್ಕಾರದಿಂದ ನುಡಿದಳು.

**4. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?**

ಉ:–ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿಯು "ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲಾ? ಈ ಯುದ್ಧವಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಮಾಡಿ ಬದುಕಿಸಿಕೊಳ್ಳುತ್ತಿದ್ದೆನಲ್ಲಾ ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿಕೊಡುತ್ತೀಯಾ?" ಎಂದು ನಿರಾಶೆಯಿಂದ ಹೇಳಿದಳು.

## ಇ) ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ

**1).ಮುದುಕಿಯು ತನ್ನ ಮಗ ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?**

ಉ:- ರಾಹಿಲ ಮತ್ತು ಮುದುಕಿಯಲ್ಲಿ ಪರಸ್ಪರ ವಿಶ್ವಾಸ ಬೆಳೆದು ರಾಹಿಲ ಮತ್ತು ಮುದುಕಿ ಪರಸ್ಪರ ಮಾತನಾಡುತ್ತಿದ್ದಾಗ ರಾಹಿಲನು ನಿಮ್ಮ ಮಗನೆಲ್ಲಿದ್ದಾನೆ? ಎಂದು ವಿಚಾರಿಸುತ್ತಾನೆ. ಆಗ ಮುದುಕಿಯು ಯುದ್ದಕ್ಕೆ ಹೋಗಿದ್ದಾನೆ, ನನ್ನ ಮಗ ಇನ್ನೂ ಚಿಕ್ಕವನಿದ್ದಾಗ ಯುದ್ದಕ್ಕೆ ಹೋದ ಅವನ ತಂದೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿ ಮುಚ್ಚಿದ ಕೆಂಡ, ಎದೆಯ ಗಾಯ ಇಂದಿಗೂ ಇದೆ, ನೋಡು ಎಲ್ಲ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲಹಿದೆ. ಮದುವೆಯನ್ನೂ ಮಾಡಿದೆ, ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಈ ಹಾಳು ಯುದ್ಧ. ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ ಎಂದು ರಾಹಿಲನಿಗೆ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ವಿವರಿಸಿದಳು.

**2). ರಾಹಿಲನು ಮುದುಕಿಯ ಕುಟುಂಬಕ್ಕೂ ಮುದುಕಿಯು ರಾಹುಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.**

ಉ:- ದೇಶದ ಗಡಿ ಭಾಗದಲ್ಲಿ ಸಮುದ್ರದ ಮೇಲಿನ ಆಕಾಶದಲ್ಲಿ ಹಾರುತ್ತಿದ್ದ ಯುದ್ದ ವಿಮಾನದ ಮೇಲೆ ವೈರಿಗಳ ವೈಮಾನಿಕ ದಾಳಿಯಿಂದಾಗಿ ವಿಮಾನವು ನುಚ್ಚುನೂರಾಗಿ ಸಮುದ್ರದ ಮೆಲೆ ಬಿದ್ದಿತು. ಅದರಲ್ಲಿದ್ದ ವೈದ್ಯ ರಾಹಿಲನು ಕಾಲಿಗೆ ತೀವ್ರ ಪೆಟ್ಟಾಗಿದ್ದರೂ ಈಜಿ ದಡ ಸೇರುತ್ತಾನೆ ಅಲ್ಲಿಯೆ ಇದ್ದ ಅನ್ಯದೇಶದವರ ಮನೆಗೆ ಬಂದು ಬಾಗಿಲು ತಟ್ಟುತ್ತಾನೆ. ಬಾಗಿಲು ತೆಗೆದ ಮುದುಕಿಯ ಸೊಸೆಯು ಹೆರಿಗೆಯ ಬೇನೆಯಿಂದ ಬಳಲುತ್ತಿರುತ್ತಾಳೆ, ಆ ವೇಳೆಯಲ್ಲಿ ಆಸ್ಪತ್ರೆಗೆ ಕರೆದೊಯ್ಯುವ ಪರಿಸ್ಥಿತಿಯಲ್ಲಿ ಅವಳಿರಲಿಲ್ಲ, ವೈದ್ಯನಾಗಿದ್ದ ರಾಹಿಲನು ತನ್ನ ಕಾಲಿನ ನೋವನ್ನು ಮರೆತು ಮಗುವನ್ನು ರಕ್ಷಿಸಲು ಸಾದ್ಯವಾಗದಿದ್ದರೂ ತಾಯಿಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗುತ್ತಾನೆ, ಹೀಗೆ ರಾಹಿಲನು ಮುದುಕಿಯ ಕುಟುಂಬಕ್ಕೆ ನೆರವಾಗುತ್ತಾನೆ.

ಅದೇ ವೇಳೆಯಲ್ಲಿ ಅವನನ್ನು ಹುಡುಕುತ್ತ ತನ್ನದೇ ದೇಶದ ಸೈನಿಕರು ಮುದುಕಿಯ ಮನೆಗೆ ಬರುತ್ತಾರೆ. ಬಾಗಿಲು ತೆಗೆಯಬೇಡಿ ಎಂದು ರಾಹಿಲನ ಅಸಹಾಯಕತೆಯ ದಯನೀಯ ನೋಟದಿಂದ ಕೈಯ ಸನ್ನೆ ಮಾಡಿದಾಗ ಮುದುಕಿಯು ಆ ನೋಟದಲ್ಲಿ ತನ್ನ ಮಗನನ್ನು ಕಾಣುತ್ತಾಳೆ. ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೆ? ಎಂದು ಕೇಳುತ್ತಾ ಒಳ ನುಗ್ಗಿ ಬಂದವರಿಗೆ ಅವಳು ಯಾರೂ ಬಂದಿಲ್ಲ, ಎಂದು ಉತ್ತರಿಸಿ ರಾಹಿಲನನ್ನು ರಕ್ಷಿಸುತ್ತಾಳೆ.
ಹೀಗೆ ತನಗೆ ಸಹಾಯ ಮಾಡಿದ ರಾಹಿನಿಗೆ ಮುದುಕಿಯು ಪ್ರತಿಯಾಗಿ ಅವನನ್ನು ಸೈನಿಕರ ದಾಳಿಗೆ ತುತ್ತಾಗುವುದರಿಂದ ರಕ್ಷಿಸಿ ಪ್ರತ್ಯುಪಕಾರ ಮಾಡುತ್ತಾಳೆ.

**3) ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**

ಉ:- ಯುದ್ದದ ಪರಿಣಾಮ ಯಾವಾಗಲೂ ಸರ್ವನಾಶವೇ, ಯುದ್ದಕ್ಕೆ ಕಾರಣ ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಯುದ್ದದ ಭೀಕರತೆಯು ಧರ್ಮ, ದೇಶಗಳ ಬೇದವಿಲ್ಲದೆ ಭಾಗಿಯಾದ ಸೈನಿಕರಿಗೆ ಅವರ ಕುಟುಂಬವರ್ಗದವರಿಗೂ ಹಾಗು ದೇಶಕ್ಕೂ ನಾನಾ ರಿತಿಯ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಯುದ್ಧ ಒಂದು ಪೀಳಿಗೆಯ ಸುಖೀ ಜೀವನವನ್ನು ಕಸಿಯಬಲ್ಲುದು, ದುಡಿಯುವ ತಂದೆ, ಮಗ ಅಥವಾ ಗಂಡನನ್ನು ಆಶ್ರಯಿಸಿದವರ ಬದುಕನ್ನೇ ಯುದ್ಧ ಕಸಿದುಕೊಂಡುಬಿಡುತ್ತದೆ. ಬೌತಸ್ವರೂಪದ ಹಾನಿ ಉಂಟಾಗಿ ಗತೀಚಕ್ರ ಹಿಂದಕ್ಕೆ ಓಡುತ್ತದೆ. ಯುದ್ದವೆನ್ನುವುದು ಮಾನವ ನಿರ್ಮಿತ ಕೆಡುಕಿನ ಕಾರ್ಯ, ಯುದ್ದದಲ್ಲಿ ಬಳಕೆಯಾಗುವ ಬಾಂಬ್ ಗಳಿಂದ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿ ಮಾನವ ಮತ್ತು ಪ್ರಾಣಿ ಸಸ್ಯವರ್ಗಗಳ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುವುದು. ಒಟ್ಟಾರೆಯಾಗಿ ಯುದ್ದದಿಂದ ಯಾರಿಗೂ ನೆಮ್ಮದಿ ಉಂಟಾಗಲು ಸಾದ್ಯವಿಲ್ಲ.

## ಇ) ಸಂದರ್ಭಸಹಿತ ಸ್ವಾರಸ್ಯವನ್ನುವಿವರಿಸಿ.

**1. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"**

ಆಯ್ಕೆ:- ಈ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು'ಕಥಾ ಸಂಕಲನದಿಂದ ಆರಿಸಲಾಗಿರುವ 'ಯುದ್ಧ'ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:- ಡಾಕ್ಟರ್ ರಾಹಿಲನು ಶತ್ರು ಸೈನಿಕರಿಂದ ಗಾಯಗೊಂಡುತತ್ತರಿಸಿ ಬರುವಾಗ ಧಾರಾಕಾರ ಮಳೆ ಸುರಿಯುತ್ತಿತ್ತು. ರಕ್ಷಣೆ ಪಡೆಯಲೆಂದು ಹುಡುಕುತ್ತಿದ್ದಾಗ ಒಂದು ಮನೆಯೊಂದು ಕಾಣಿಸಿತು, ಹೇಗೋ ತೆವಳಿಕೊಂಡು ಆ ಮನೆಯ ಬಳಿ

ಹೋಗಿ ಬಾಗಿಲು ತಟ್ಟುವ ಸಂದರ್ಭದಲ್ಲಿ " ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ" ಎಂದು ಗುಡಿಸಿಲಿನ ಒಳಗಿದ್ದ ಮುದುಕಿಗೆ ಹೇಳುತ್ತಾನೆ.

ಸ್ವಾರಸ್ಯ:- ರಾಹಿಲನು ಶತ್ರುಗಳಿಂದ ತಪ್ಪಿಸಿಕೊಂಡು ಶತ್ರು ದೇಶದ ಮನೆಗೇ ಬಂದು ರಕ್ಷಣೆಗಾಗಿ ಬೇಡುವುದು ಕಥೆಯಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**2. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿನೀರನ್ನು ಸಿದ್ಧಪಡಿಸಿ"**

ಆಯ್ಕೆ:- ಈ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು'ಕಥಾ ಸಂಕಲನದಿಂದ ಆರಿಸಲಾಗಿರುವ 'ಯುದ್ಧ'ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:- ಮುದುಕಿಯು "ನನ್ನ ಸೊಸೆಯು ಹೆರಿಗೆಯ ಬೇನೆಯನ್ನು ತಿನ್ನುತ್ತಿದ್ದಾಳೆ,ಸಂಜೆಯಿಂದಲೇ ನೋವು ಪ್ರಾರಂಭವಾಗಿದೆ, ಡಾಕ್ಟರನ್ನೋ ಸೂಲಗಿತ್ತಿಯನ್ನೋ ಕರೆಯೋಣವೆಂದರೆ ಈ ಬಾಂಬುಗಳು, 'ಬ್ಲಾಕ್ ಔಟ್' ಎಂದು ಹೇಳಿದ ಸಂದರ್ಭದಲ್ಲಿ ಕಾಲಿಗೆ ಪೆಟ್ಟಾಗಿದ್ದ ಡಾಕ್ಟರ್ ರಾಹಿಲನು ಮೇಲಿನಂತೆ ಹೇಳುತ್ತಾನೆ.

ಸ್ವಾರಸ್ಯ:- ತನ್ನ ಕಾಲಿಗೆ ಪೆಟ್ಟಾಗಿದ್ದರೂ ಅದನ್ನು ಲೆಕ್ಕಿಸದೆ ಮುದುಕಿಯ ಸೊಸೆಗೆ ಹೆರಿಗೆ ಮಾಡಿಸಲು ಮುಂದಾಗುವ ರಾಹಿಲನ ವೃತ್ತಿ ಧರ್ಮ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**3."ಯುದ್ಧಕ್ಕೆ ಹೋದ ನನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ"**

ಆಯ್ಕೆ:- ಈ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು'ಕಥಾ ಸಂಕಲನದಿಂದ ಆರಿಸಲಾಗಿರುವ 'ಯುದ್ಧ'ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:- "ಬಂದಿದ್ದಾತ ತಮ್ಮವನಲ್ಲ" ಎಂಬ ಮುದುಕಿಯ ಸಂದೇಹ ನಿಜವಾಗಿತ್ತು. ತಮಗೆ, ತಮ್ಮ ದೇಶಕ್ಕೆ ದ್ರೋಹ ಬಗೆಯುವವನು ಎಂದು ಕ್ಷಣಕಾಲ ಆಕೆಯ ಕಣ್ಣುಗಳು ರೋಷದಿಂದ ಕೆರಳಿ ಬಾಗಿಲ ಬಳಿ ಸಮೀಪಿಸುತ್ತಾ ಆತನ ಮುಖ ನೋಡಿದ ಸಂದರ್ಭದಲ್ಲಿ ಮೇಲಿನಂತೆ ಹೇಳುತ್ತಾಳೆ.

ಸ್ವಾರಸ್ಯ:- ಕಷ್ಟದಲ್ಲಿದ್ದರೂ ತನ್ನ ಸೊಸೆಯ ಪ್ರಾಣ ಉಳಿಸಿದ ರಾಹಿಲನಲ್ಲಿ ತನ್ನ ಮಗನನ್ನು ಕಾಣುವ ಮುದುಕಿಯ ಪುತ್ರವಾತ್ಸಲ್ಯ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**4. "ನನ್ನ ಮೊಮ್ಮಗನ ಹೆಣವಿದೆ ಅಲ್ಲಿ: ಅದನ್ನೂ ನೋಡಿ"**

ಆಯ್ಕೆ:- ಈ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು'ಕಥಾ ಸಂಕಲನದಿಂದ ಆರಿಸಲಾಗಿರುವ 'ಯುದ್ಧ'ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:- ಸೈನಿಕರ ಉಡುಪಿನಲ್ಲಿದ್ದ ನಾಲ್ಕೈದು ಜನರು "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ?" ಎಂದು ಕೇಳುತ್ತಾ ಮುದುಕಿಯ ಮನೆಗೆ ನುಗ್ಗಿದಾಗ ಮುದುಕಿಯು "ಇಲ್ಲವಲ್ಲಾ' ಎನ್ನುತ್ತಾಳೆ, ಆಗ ಅಧಿಕಾರಿ 'ಆದರೂ ಈ ಮನೆಯಲ್ಲೊಮ್ಮೆ ನೋಡಿಬಿಡಿ' ಎಂದು ಸೈನಿಕರಿಗೆ ಅಪ್ಪಣೆ ಮಾಡಿದ ಸಂದರ್ಭದಲ್ಲಿ ರಾಹಿಲನನ್ನು ರಕ್ಷಿಸುವ ಸಲುವಾಗಿ ಮುದುಕಿ ಮೇಲಿನಂತೆ ಹೇಳುತ್ತಾಳೆ.

ಸ್ವಾರಸ್ಯ:- ಶತ್ರು ದೇಶದವನಾದರೂ ತನ್ನ ಗಾಯವನ್ನು ಸಹಿಸಿಕೊಂಡು ಸೊಸೆಯ ಪ್ರಾಣ ಉಳಿಸಿದ ರಾಹಿಲನನ್ನು ರಕ್ಷಿಸಲು ಮುದುಕಿಯ ಉಪಾಯ ಮತ್ತು ಮಾನವೀಯತೆಯ ಗುಣ ಇಲ್ಲಿ ವ್ಯಕ್ತವಾಗಿದೆ.

## ಉ) ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

**1. ರಾಹಿಲನ ದೇಹದಲ್ಲಿ ಹೊಸರಕ್ತ ಸಂಚಾರವಾದಂತಾಯಿತು.**

**ಅ) ಶಕ್ತಿ ಆ) ವಿದ್ಯುತ್ ಇ) ಹೊಸರಕ್ತ ಈ) ಮಿಂಚು**

**2. ನರಳಾಟದ ಬೆನ್ನಲ್ಲೇ ಹಿರಿಯ ಹೆಂಗಸೊಬ್ಬಳ ಸಾಂತ್ವನ ಕೇಳಿ ಬಂತು.**

**ಅ) ಆರ್ತನಾದ ಆ) ಅಳು ಇ) ಚೀರಾಟ ಈ) ಸಾಂತ್ವನ**

**3. ಮುದುಕಿ ಮತ್ತು ಸೊಸೆಯ ರೋದನ ಮನೆಯ ಮೂಲೆ ಮೂಲೆಯಲ್ಲಿ ಪ್ರತಿಧ್ವನಿಸಿತು.**

**ಅ) ಸಂತಸ ಆ) ಜಗಳ ಇ) ರೋದನ ಈ) ಸಂಗೀತ**

**4. ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ?**

**ಅ) ಜನರು ಆ) <u>ಸೈನಿಕರು</u> ಇ) ಗಂಡಸರು ಈ) ಹೆಂಗಸರು**

**5. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು.**

**ಅ)ತಂದೆಯು ಆ) ತಾಯಿಯು ಇ) ಮಗಳು ಈ) <u>ಮಗನು</u>**

## ಭಾಷಾ ಚಟುವಟಿಕೆ

**ಕೊಟ್ಟಿರುವ ಗಾದೆಗಳ ಅರ್ಥವನ್ನು ವಿವರಿಸಿ ಬರೆಯಿರಿ.**

**1. ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಸಾರುತ್ತದೆ. **'ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ'** ಎಂಬುದು ಪ್ರಸಿದ್ಧ ಗಾದೆ ಮಾತಾಗಿದೆ.

ಉಪನಿಷತ್ತಿನಲ್ಲಿ ಬರುವ **'ಸತ್ಯಮೇವ ಜಯತೇ'** ಎಂಬ ಮಾತು **'ಸತ್ಯ ಎಂದಿಗೂ ಗೆಲ್ಲುತ್ತದೆ'** ಎಂಬುದೇ ಆಗಿದೆ. ಸತ್ಯ – ಸುಳ್ಳುಗಳ ಹೋರಾಟದಲ್ಲಿ ಕೆಲವೊಮ್ಮೆ ಸುಳ್ಳು ಜಯಿಸಿದರೂ ಅದು ತಾತ್ಕಾಲಿಕ. ಕೊನೆಗೆ ಗೆಲ್ಲುವುದು ಸತ್ಯವೇ ಆಗಿರುತ್ತದೆ. ದುರ್ಗಸಿಂಹನ ಪಂಚತಂತ್ರದ 'ವೃಕ್ಷಸಾಕ್ಷಿ' ಕಥೆಯಲ್ಲಿ ದುಷ್ಟಬುದ್ಧಿಯು ಸ್ನೇಹಿತನಾದ ಧರ್ಮಬುದ್ಧಿಯ ಮೇಲೆ ಕಳ್ಳತನದ ಸುಳ್ಳು ಆಪಾದನೆ ಹೊರಿಸಿ ನ್ಯಾಯಾಧಿಕರಣದವರೆಗೂ ಎಳೆದು, ಕೊನೆಗೆ ದುಷ್ಟಬುದ್ಧಿಯು ತನ್ನ ಸಂಪತ್ತನ್ನು ಕಳೆದುಕೊಂಡು, ತಂದೆಯ ಸಾವಿಗೂ ಕಾರಣನಾಗುತ್ತಾನೆ. ಈ ಕಥೆಯು ಈ ಗಾದೆಗೆ ಒಂದು ಉತ್ತಮ ಉದಾಹರಣೆಯಾಗಿದೆ.

ಸುಳ್ಳಿನ ಬಲೆಯಲ್ಲಿ ಸಿಲುಕಿದರೆ ಹೊರಬರುವುದು ಕಷ್ಟ. ಆದ್ದರಿಂದ ಸುಳ್ಳಿಗೆ ಸುಖವಿಲ್ಲ ಎಂಬುದನ್ನು ಅರಿತು ಸುಳ್ಳಿನ ದಾಸರಾಗಿ ಜೀವನವನ್ನು ಹಾಳು ಮಾಡಿಕೊಳ್ಳುವ ಬದಲು ಸತ್ಯವೆಂಬ ಬೆಳಕಿನ ಹಾದಿಯಲ್ಲಿ ನಡೆದು ಜೀವನ ಸಾರ್ಥಕಗೊಳಿಸಿಕೊಳ್ಳಬೇಕು ಎಂದು ಈ ಗಾದೆಯು ತಿಳಿಸುತ್ತದೆ.

**2. ಆಳಾಗಬಲ್ಲವನು; ಅರಸಾಗಬಲ್ಲನು.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತುಗಾದೆಯ ಮಹತ್ವವನ್ನು ಬಹು ಸಾರುತ್ತದೆ. **'ಆಳಾಗಬಲ್ಲವನು ಅರಸನಾಗಬಲ್ಲ'** ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ.

ಕಾಯಕದ ಘನತೆಯನ್ನು ಬಡವರು ಶ್ರೀಮಂತರೆನ್ನದೆ ತಿಳಿದು ಕೊಳ್ಳಬೇಕಾಗಿರುವುದು ಅಗತ್ಯ. ತಾನು ಪುರುಷ ಗೃಹಕೃತ್ಯಗಳನ್ನು ಮಾಡುವುದು ಅವಮಾನ, ಎರಡು ಪದವಿಗಳನ್ನು ಪಡೆದಿರುವವನು, ಹಳ್ಳಿಯಲ್ಲಿ ಕೃಷಿ ಮಾಡುವುದು ಅವಮಾನ – ಎಂಬಂಥ ಧೋರಣೆ ಸರಿಯಲ್ಲ. ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ. ಆಳಿನ ದುಡಿಮೆ ಸಮಸ್ಯೆ ಸ್ಥಿತಿಗತಿಗಳನ್ನು ಸ್ವತಃ ಅವರೊಂದಿಗೆ ಬೆರೆತು ಅರ್ಥಮಾಡಿಕೊಂಡರಷ್ಟೇ ಅರಸ ಅದನ್ನು ಪರಿಹರಿಸಲು ಸಾಧ್ಯ ಎಂಬ ಮಾತನ್ನು ಈ ಗಾದೆಯು ಧ್ವನಿಸುತ್ತದೆ.

# ಗದ್ಯ ಪಾಠ – ೬. ಶಬರಿ.

## ಪು.ತಿ. ನರಸಿಂಹಾಚಾರ್ಯ.

**ಲೇಖಕರ ಪರಿಚಯ :– ಪು.ತಿ.ನ ಕಾವ್ಯನಾಮದಿಂದ ಪ್ರಸಿದ್ದರಾಗಿರುವ ತಿರುನಾರಾಯನಯ್ಯಂಗಾರ್ಯ ನರಸಿಂಹಚಾರ್ ರವರು ಕ್ರಿ.ಶ.1905ರಲ್ಲಿ ಮಂಡ್ಯ ಜಿಲ್ಲೆಯ <u>ಮೇಲುಕೋಟೆ</u>ಯಲ್ಲಿ ಜನಿಸಿದರು. ಶ್ರೀಯುತರು ರಚಿಸಿರುವ ಕೃತಿಗಳೆಂದರೆ ಶಬರಿ, ಅಹಲ್ಯೆ, ಗೋಕುಲ ನಿರ್ಗಮನ, ವಿಕಟವಿಜಯ ಮುಂತಾದವು ಪ್ರಮುಖ ಕೃತಿಗಳು.ಶ್ರೀಯುತರಿಗೆ ಶ್ರೀಯುತರಿಗೆ 'ಪಂಪ ಪ್ರಶಸ್ತಿ' ಮತ್ತು ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.**

***<u>ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.</u>***

**1. ಶ್ರೀ ರಾಮನ ತಂದೆಯ ಹೆಸರೇನು?**

**ಉ:–ಶ್ರೀ ರಾಮನ ತಂದೆಯ ಹೆಸರು <u>ದಶರಥ.</u>**

**2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**

**ಉ:–ಶ್ರೀರಾಮನಿಗೆ ಸಮರ್ಪಿಸಲು ಶಬರಿ <u>ಪರಿಮಳದ ಹೂವು, ಮಧುಪರ್ಕ ಮತ್ತು ರುಚಿಕರ</u> ಹಣ್ಣುಹಂಪಲುಗಳನ್ನು ಸಂಗ್ರಹಿಸಿದ್ದಳು.**

**3. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**

ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

**4.** ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

ಉ:-ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದಂಡಕಾರಣ್ಯದಲ್ಲಿ ವಾಸಮಾಡುತ್ತಿದ್ದ ಕಬಂಧ ಎಂಬ ಹೆಸರಿನ ರಾಕ್ಷಸ.

**5.** ಶಬರಿ ಗೀತನಾಟಕದ ಕರ್ತೃ ಯಾರು?

ಉ:-ಶಬರಿ ಗೀತನಾಟಕದ ಕರ್ತೃ ಪು. ತಿ. ನರಸಿಂಹಾಚಾರ್ಯ.

***ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.***

**1.**ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?

ಉ:-ರಾಮನು ಗಿರಿವನಗಳನ್ನು ಕುರಿತು "ಗಿರಿವನಗಳೇ ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ? ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಪ್ರಾರ್ಥಿಸಿದನು.

**2.** ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ತಿಳಿಸಿ.

ಉ:-ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?" ಎಂದು ಹೇಳಿ ಸಂತೈಸಿದನು.

**3.** ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

ಉ:-ರಾಮನ ಸ್ವಾಗತಕ್ಕಾಗಿ ಶಬರಿಯು ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಸಂಗ್ರಹಿಸಿ ಸಿದ್ಧಮಾಡಿಕೊಂಡಿದ್ದಳು.

**4.** ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.

ಉ:-ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಂಡಳು. ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. "ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

**5.** ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದಳು?

ಉ:-ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ "ನಾವು ನಿನ್ನ ಪ್ರೀತಿಯ ಸ್ವಾಗತದಿಂದ ಸಂತಸಗೊಂಡೆವು. ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು. ಕಣ್ಣಿಗೆ ಕಾಣದ ಆನಂದವನ್ನು ಅನುಭವಿಸುವ ಪುಣ್ಯ ನಮ್ಮದಾಯಿತು. ನಾವು ನಿನಗೆ ಎಂದೆಂದಿಗೂ ಋಣಿಗಳು" ಎಂದು ಹೇಳಿದರು.

***ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯದಲ್ಲಿ ಉತ್ತರಿಸಿ.***

**1.** ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಉ:-ರಾಮಲಕ್ಷ್ಮಣರನ್ನು ಕಂಡು ಶಬರಿ ಹಿಗ್ಗಿ, ಸಂತಸವನ್ನು ತುಂಬಿಕೊಳ್ಳುತ್ತಾಳೆ.ರಾಮಲಕ್ಷ್ಮಣರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ.ರಾಮನನ್ನು ಕಂಡ ತಾನು ಪರಮಸುಖಿಯೆಂದು ನರ್ತಿಸುತ್ತಾಳೆ.ರಾಮನೂ ಕೂಡ "ನಿನ್ನ ಆದರದಿಂದ ನಾವು ಸುಖಿ, ನಿನಗೆ ನಾವು ಋಣಿ" ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು "ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು ತೃಷೆ ಹಿಂಗಿತೇ?ನಾನೊಬ್ಬಳು ಬಡವಿ, ನನ್ನ ಮೇಲೆ ಮರುಕ ತೋರಿದಿರಾ?"ಎನ್ನುತ್ತಾಳೆ.ಶ್ರೀರಾಮನು "ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ, ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ, ನಿನ್ನ ಮನೆಯೇ ನಮ್ಮ ಮನೆ, ನೀನೇ ತಾಯಿಯಂತೆ" ಎನ್ನುತ್ತಾನೆ. ಶಬರಿಯು "ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ.ನಾನು ಧನ್ಯಳಾದೆ ಸಿದ್ಧಮಾತಂಗರ ವರ ನನಗೆ ಫಲಿಸಿತು.ನಿಮ್ಮನ್ನು ಕಂಡು ಪುಣ್ಯವು ತುಂಬಿತು.ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು.ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು" ಎನ್ನುತ್ತಾಳೆ.ಶ್ರೀರಾಮನು ಗುರುಗಳ ಮಹಿಮೆಯನ್ನು ಬಲ್ಲೆನೆಂದು ಹೇಳುತ್ತ."ದುಃಖವನ್ನು ಮರೆಸಿ, ಶಾಂತಿ ನೀಡುವ ಈ ವನದಲ್ಲಿ ಶುದ್ಧ ಪ್ರೇಮ ಮೂರ್ತಿ ನೀನು ಇದ್ದೀಯೆ.ಈ ದಿನ ನಮಗೆ ಸುದಿನ" ಎಂದು ಶಬರಿಯನ್ನು ಬಾಯಿತುಂಬ ಹೊಗಳುತ್ತಾನೆ.

2. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ? ತಿಳಿಸಿ.

ಉ:–ರಾಮನು ಬಂದು ತನ್ನ ಆಶ್ರಮದಲ್ಲಿ ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯಪಟ್ಟಳು.ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ, ಪಾದಕ್ಕೆ ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು.ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು.ಸಿದ್ಧತೆಯೇ ಇಲ್ಲವಲ್ಲ ಎಂದು ಹಂಬಲಿಸಿದಳು.ಮನಸ್ಸಿನ ಬಯಕೆಯಂತೆ ಬಗೆಬಗೆಯ ಕಂಪು ಇರುವ ವನಮಾಲೆಯನ್ನು ರಾಮನ ಕೊರಳಿಗೆ ಹಾಕಿ ಹಿಗ್ಗಿದಳು. ಜಗತ್ತಿನಲ್ಲಿ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತ, ನಿಮಗಾಗಿ ತಂದಿದ್ದೇನೆಂದು ತಿಳಿಸಿ ರಾಮನ ಕೈಗೆ ಇತ್ತಳು. ಶಬರಿಯ ಸೇವೆಯಿಂದ ರಾಮನು ಸುಪ್ರಸನ್ನನಾದನು.ರಾಮಲಕ್ಷ್ಮಣರು ಧನ್ಯತಾಭಾವದಿಂದ ಮಂದಹಾಸ ಬೀರಿದರು.ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

3. 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ.

ಉ:–ಶಬರಿ ಮಾತಂಗ ಋಷಿಯ ಆಶ್ರಮದಲ್ಲಿ ಇರುತ್ತಾಳೆ.ಸಿದ್ಧರಾದ ಮಾತಂಗ ಋಷಿಗಳು ಶಬರಿಯ ಮನದಾಸೆಯನ್ನು ತಿಳಿದವರಾಗಿದ್ದು, "ರಾಮಲಕ್ಷ್ಮಣರು ಆಶ್ರಮಕ್ಕೆ ಬಂದೇ ಬರುತ್ತಾರೆ.ನಿನ್ನಿಷ್ಟಾರ್ಥ ನೆರೆವೇರುತ್ತದೆ" ಎಂದಿದ್ದರು.ಅವರ ಮಾತಿನಂತೆ ರಾಮಲಕ್ಷ್ಮಣರು ಶಬರಿಯ ಆಶ್ರಮಕ್ಕೆ ಭೇಟಿ ನೀಡುತ್ತಾರೆ.ಶಬರಿಯು ರಾಮನ ದರ್ಶನದಿಂದ ಪುಳಕಿತಳಾಗುತ್ತಾಳೆ. ಕಣ್ತುಂಬ ರಾಮನ ದರ್ಶನ ಮಾಡಿ, ಮುಟ್ಟಿ, ನಮಸ್ಕರಿಸಿ, ಸಂಭ್ರಮಿಸುತ್ತಾಳೆ. ಪರಿಮಳದ ವನಮಾಲೆಯನ್ನು ರಾಮನ ಕೊರಳಿಗೆ ಹಾಕಿ, ರುಚಿಕರ ಹಣ್ಣುಗಳನ್ನು ನೀಡಿ ಉಪಚರಿಸುತ್ತಾಳೆ. ಧನ್ಯಳಾದೆನೆಂದು ಸಂತಸ ವ್ಯಕ್ತಪಡಿಸುತ್ತಾಳೆ. ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಕಾದು, ಮುನಿಗಳ ಮಾತನ್ನು ನಂಬಿ, ರಾಮನು ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಗುತ್ತದೆ. ಶಬರಿಯ ಮನದಾಸೆ ಈಡೇರುತ್ತದೆ. ಹಾಗಾಗಿ 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

***ಕೊಟ್ಟಿರುವ ಪ್ರತಿ ಹೇಳಿಕೆಯನ್ನು ಸಂದರ್ಭದೊಂದಿಗೆ ವಿವರಿಸಿ, ಸ್ವಾರಸ್ಯವನ್ನು ಬರೆಯಿರಿ.***

1. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು."

ಆಯ್ಕೆ :– ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ'ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :–ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ತಪಸ್ವೀ ಧನುವಿನ ಸೂಚನೆಯಂತೆ ಮಾತಂಗಾಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಎದುರಿಗೆ ಬರುತ್ತಿದ್ದ ವೃದ್ಧೆಯನ್ನು (ಶಬರಿಯನ್ನು) ಕಂಡು ರಾಮನು ಈ ಮಾತನ್ನು ಲಕ್ಷ್ಮಣನಿಗೆ ಹೇಳುತ್ತಾನೆ.

ಸ್ವಾರಸ್ಯ :– ಶ್ರೀರಾಮನ ಬರುವಿಕೆಗಾಗಿ ಕಾದು, ಕಾತರಿಸಿ, ಮರುಳಾಗಿದ್ದ ವೃದ್ಧೆ ಶಬರಿಯನ್ನು ಕಂಡು ರಾಮಲಕ್ಷ್ಮಣರು ವಿಸ್ಮಯಗೊಂಡದ್ದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

2. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."

ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ'ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :–ತನ್ನಿಂದ ಇನಿತು ಉಪಕಾರವಿಲ್ಲದಿದ್ದರು ತನ್ನನ್ನು ಪ್ರೀತಿಯಿಂದ ನೆನೆಯುತ್ತ ಹಂಬಲಿಸುತ್ತಿರುವ ವೃದ್ಧೆ ಶಬರಿಯನ್ನು ಕಂಡ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ಪೂಜ್ಯೆಯಾದ ಶಬರಿಯು ತನ್ನನ್ನು ಪ್ರೀತಿಯಿಂದ ನೆನೆಯುತ್ತ, ಬರುವಿಕೆಗಾಗಿ ಭಕ್ತಿಯಿಂದ ಹಂಬಲಿಸುತ್ತ ಇರುವ ದೃಶ್ಯವನ್ನು ನೋಡಿ ರಾಮನು "ಅವಳ ಅನುರಾಗವನ್ನು ಕಂಡು ನಾಚಿದೆನು" ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

3. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವದೇ?"

ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ'ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :–ಮಾತಂಗಾಶ್ರಮವನ್ನು ಪ್ರವೇಶಿಸಿದ ಸಂದರ್ಭದಲ್ಲಿ "ಎಂದು ಕಾಣುವೆನು ಶ್ರೀರಾಮನನ್ನು, ಸನ್ಮಂಗಳ ಮೂರುತಿಯನ್ನು" ಎಂದು ಹಾಡುತ್ತ ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಂಡು ರಾಮನು ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ :– ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕುರಿತು ರಾಮನು ಏನೂ ಅರಿಯದವನಂತೆ"ದಾರಿಗರಾದ ನಮಗೆ ಇಲ್ಲಿ ಉಳಿದುಕೊಳ್ಳಲು ಸ್ಥಳಾವಕಾಶ ದೊರೆಯುವದೇ?"ಎಂದು ಕೇಳುವುದು ಸ್ವಾರಸ್ಯಪೂರ್ಣವಾಗಿದೆ.

4. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ?"
ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ'ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
ಸಂದರ್ಭ :–ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು "ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು, ಇಷ್ಟು ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು" ಎಂದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ಹೇಳುತ್ತಾಳೆ.
ಸ್ವಾರಸ್ಯ :– "ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮಧುರವಾದುದು" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾಳೆ.

5. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."
ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ'ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
ಸಂದರ್ಭ :–ರಾಮನ ದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮುಕ್ತಿಯನ್ನು ಪಡೆಯುವುದಕ್ಕಾಗಿ ಅಗ್ನಿ ಪ್ರವೇಶಿಸಿದ ಸಂದರ್ಭದಲ್ಲಿ ರಾಮನು ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ :– "ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ" ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಠತೆಯನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.
ಉ) ಹೊಂದಿಸಿ ಬರೆಯಿರಿ:

| ಅ | ಬ | ಉತ್ತರ |
|---|---|---|
| ೧. ಮತಂಗ | ಸೀತೆ | ಆಶ್ರಮ |
| ೨. ಪು.ತಿ.ನ. | ಆಶ್ರಮ | ಮೇಲುಕೋಟೆ |
| ೩. ದಶರಥ | ಮೇಲುಕೋಟೆ | ರಾಮ |
| ೪. ಚಿತ್ರಕೂಟ | ಪರ್ವತ | ಅರಣ್ಯ |
| ೫. ಭೂಮಿಜಾತೆ | ರಾಮ | ಸೀತೆ |
| | ಅರಣ್ಯ | |

## ಗಾದೆ ಮಾತನ್ನು ವಿವರಿಸಿ.

### 1. ತಾಳಿದವನು ಬಾಳಿಯಾನು.

ಗಾದೆ ವೇದಕ್ಕೆ ಸಮಾನ ವೇದ ಸುಳ್ಳಾದರೂ ಗಾದೆ ಸುಳ್ಳಾಗದು, ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಇಂತಹ ಗಾದೆಗಳಲ್ಲಿ ತಾಳಿದವನು ಬಾಳಿಯಾನು ಎಂಬ ಗಾದೆಯೂ ಸಹ ಒಂದಾಗಿದೆ.

ತಾಳುವಿಕೆಗಿಂತ ತಪವು ಇಲ್ಲ ಎಂದಿದ್ದಾರೆ ಕನಕದಾಸರು. ಗಿಡನೆಟ್ಟಿದ ಕೂಡಲೇ ಫಲ ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಂಗೀತಾಭ್ಯಾಸ ಮಾಡಿದರೆ ಒಂದೇ ತಿಂಗಳಿನಲ್ಲಿ ಕಛೇರಿ ನೀಡುವಂತಾಗಬೇಕು ಎನ್ನುವುದು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾಳ್ಮೆ ಬೇಕು.

ತಾಳ್ಮೆ ಎಂದರೆ ಆಮೆಗತಿಯಲ್ಲಿ ಸಾಗುವುದು ಎಂದರ್ಥವಲ್ಲ ಯಾವ ಸಾಧನೆಗೆ ಎಷ್ಟು ಸಮಯ ಮತ್ತು ಪ್ರಯತ್ನಗಳು ಬೇಕೋ ಅವನ್ನು ಪೂರ್ಣತೆಯಿಂದ ಮಾಡಲು ಬೇಕಾಗುವ ಶಕ್ತಿಯೇ ತಾಳ್ಮೆ; ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ. ಆದ್ದರಿಂದ

ತಾಳ್ಮೆ ಪ್ರತಿಯೊಬ್ಬರಲ್ಲಿ ಇರಬೇಕಾದ ಅತ್ಯಮುಲ್ಯವಾದ ಸಂಪತ್ತು ಎಂದೇ ಹೇಳಬಹುದು. "ತಾಳ್ಮೆಯಿಂದ ಕಟ್ಟಿದ್ದು, ಪಡೆದದ್ದು, ಧೀರ್ಘಕಾಲ ಬಾಳುತ್ತದೆ" ಎಂಬುದನ್ನು ಈ ಗಾದೆಯು ವಿವರಿಸುತ್ತದೆ.

## 2. ಮನಸ್ಸಿದ್ದರೆ ಮಾರ್ಗ.

ಗಾದೆ ವೇದಕ್ಕೆ ಸಮಾನ ವೇದ ಸುಳ್ಳಾದರೂ ಗಾದೆ ಸುಳ್ಳಾಗದು, ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಇಂತಹ ಗಾದೆಗಳಲ್ಲಿ ಮನಸ್ಸಿದ್ದರೆ ಮಾರ್ಗ ಎಂಬ ಗಾದೆಯೂ ಸಹ ಒಂದಾಗಿದೆ

ಯಾವುದೇ ಸಾಧನೆ ಮಾಡಬೇಕಾದರೂ ಸಹ ಮೊದಲು ಮನಸ್ಸು ಮಾಡಬೇಕು. ನಾವೂ ಬದುಕಿನಲ್ಲಿ ಸಾಧನೆ ಮಾಡಲು. ಯಶಸ್ಸು ಗಳಿಸಲು ಆರಂಭದಿಂದ ಗುರಿ ಸಾಧಿಸುವವರೆಗೆ ನಿರಂತರ ಬದುಕಲು ಮನಸ್ಸು ಮಾಡಬೇಕು ಆಗದು ಎಂದು ಕೈ ಲಾಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ ಎನ್ನುವ ಮಾತಿನಂತೆ ಒಂದೇ ಮನಸ್ಸಿನಿಂದ ಪ್ರಯತ್ನೀಲರಾದರೆ, ಮನಸ್ಸಿಟ್ಟು ಅಧ್ಯಯನ ಮಾಡಿದರೆ ಖಂಡಿತ ಗುರಿ ಸಾಧಿಸಬಹುದು.

ವಿದ್ಯಾರ್ಥಿಗಳಾದವರು ಪರೀಕ್ಷೆಯಲ್ಲಿ ಅತ್ಯುನ್ನತ ಸಾಧನೆ ಮಾಡಲು ಪ್ರತಿ ದಿನ ಕಷ್ಟ ಪಟ್ಟು ಅಭ್ಯಾಸ ಮಾಡಬೇಕು. ಇದಕ್ಕೆ ಮನಸ್ಸಿನ ಇಚ್ಚಾ ಶಕ್ತಿ ಅತಿ ಮುಖ್ಯ. ಮನಸಿದ್ದಡೆ ಮಾರ್ಗವಿದೆ. ಮಾನಸಿಕ ಸಿದ್ದತೆಯೇ ಪ್ರತಿ ಉತ್ತಮ ಕಾರ್ಯದ ತಳಪಾಯ. ಹೀಗಾಗಿ ನಾವೂ ಸತ್ಕಾರ್ಯ ಮಾಡಲು ಉತ್ತಮ ವ್ಯಕ್ತಿಗಳಾಗಿ ರೂಪುಗೊ ಳ್ಳೋಣ ಎಂಬುದೇ ಈ ಗಾದೆ ಮಾತಿನ ಅರ್ಥವಾಗಿರುತ್ತದೆ.

### ಭಾಷಾ ಚಟುವಟಿಕೆ

### ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

**1. ತದ್ಧಿತಾಂತಗಳೆಂದರೇನು?**

ನಾಮಪದಗಳ ಮೇಲೆ ಬೇರೆಬೇರೆ ಅರ್ಥಗಳಲ್ಲಿ ಗಾರ, ಕಾರ, ಇಗ, ಆಡಿಗ, ವಂತ, ಇಕ, ಗಾರ್ತಿ, ಕಾರ್ತಿ, ಇತಿ, ವಂತೆ, ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತಗಳಾಗುತ್ತವೆ.

**2. ತದ್ಧಿತಾಂತ ಭಾವನಾಮಗಳೆಂದರೇನು? ಉದಾಹರಣೆ ಸಹಿತ ವಿವರಿಸಿ.**

ಸಾಮಾನ್ಯವಾಗಿ ಷಷ್ಠೀ ವಿಭಕ್ತ್ಯಂತ ನಾಮಪದಗಳ ಮುಂದೆ ಭಾವಾರ್ಥದಲ್ಲಿ – ತನ,– ಇಕೆ, –ಪು, – ಮೆ ಇತ್ಯಾದಿ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಭಾವನಾಮಗಳೆನಿಸುವುವು.

**ಉದಾ:–** ಜಾಣನ (ಭಾವ) ತನ – ಜಾಣತನ

ಚೆಲುವಿನ (ಭಾವ) ಇಕೆ – ಚೆಲುವಿಕೆ

ಕರಿದರ (ಭಾವ) ಪು – ಕಪ್ಪು

ಪಿರಿದರ (ಭಾವ) ಮೆ – ಪೆರ್ಮೆ

**ಆ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದ ಬರೆಯಿರಿ.**

1. ನದಿ, ಪರ್ವತ : ರೂಢನಾಮ : : ವ್ಯಾಪಾರಿ, ವಿಜ್ಞಾನಿ : __________
2. ನಾನು, ನೀನು : ಪುರುಷಾರ್ಥಕ ಸರ್ವನಾಮ : : ಯಾರು? ಏನು? : __________
3. ಅಷ್ಟು : ಪರಿಮಾಣ ವಾಚಕ : : ಹನ್ನೆರಡು : __________
4. ಪೊಟಿಲ್ : ಪಟ್ಟಣ : : ಕಸವರ : __________

**ಉತ್ತರಗಳು: 1. ಅನ್ವರ್ಥನಾಮ, 2. ಪ್ರಶ್ನಾರ್ಥಕ ಸರ್ವನಾಮ, 3. ಸಂಖ್ಯಾವಾಚಕ, 4. ಚಿನ್ನ.**

*********************************

# ಗದ್ಯ ಪಾಠ –೭ ಲಂಡನ್ ನಗರ – ವಿನಾಯಕ ಕೃಷ್ಣ ಗೋಕಾಕ್.

ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ವಿ. ಕೃ. ಗೋಕಾಕರು** ಕ್ರಿ.ಶ.**1909** ರಲ್ಲಿ ಹಾವೇರಿ ಜಿಲ್ಲೆಯ **ಸವಣೂರಿನಲ್ಲಿ** ಜನಿಸಿದರು. ಇವರು **'ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರಗಳು** ಲಭಿಸಿವೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?

ಉತ್ತರ:– ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರು ವೂಲವರ್ತ

೨. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?

ಉ:– ನೆಲ್ಸನ್‌ರ ಮೂರ್ತಿ ಇರುವ ಸ್ಥಳದ ಹೆಸರು ಟ್ರಾಫಲ್ಗಾರ್ ಸ್ಕ್ವಯರ್ (**Trafalgar square**)

೩. 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?

ಉ:– ವೆಸ್ಟ್ ಮಿನಿಸ್ಟರ್ ಅಬೆ 'ಸತ್ತುಹೋಗಿರುವ ಸಾರ್ವ ಭೌಮರ ಕವಿಪುಂಗವರ' ಸ್ಮಾರಕವಾಗಿದೆ.

೪. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?

ಉ:– ಚೇರಿಂಗ್ ಕ್ರಾಸ್ ಎಂಬುದು ಅಂಗ್ಲರ ವೈಭವ ಕಂಡು ಬರುವ ಓಣಿಯಾಗಿದೆ.

***ಆ) ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.***

1. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?

ಉ:– ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳೆಂದರೆ ಬೂಟು, ಕಾಲು ಚೀಲ, ಸಾಬೂನು, ಔಷಧ, ಪುಸ್ತಕ, ಅಡಿಗೆ ಪಾತ್ರೆಗಳು, ಇಲೆಕ್ಟ್ರಿಕ್ ದೀಪದ ಸಾಮಾನುಗಳು, ಫೋಟೋ, ಅಡವಿಯ ಹೂ, ಯುದ್ದ ಸಾಮಾಗ್ರಿ ಮುಂತಾದ ಎಲ್ಲವೂ ದೊರೆಯುತ್ತವೆ.

2. ಲಂಡನ್ನಿನ ಹೆಣ್ಣುಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?

ಉ:– ಲಂಡನ್ನಿನ ಯಾವುದೇ ದೊಡ್ಡ ಅಂಗಡಿಗೆ ಹೋದರೂ ಅಲ್ಲಿನ ಟೈಪಿಸ್ಟ್, ಕಾರಕೂನ, ಒಬ್ಬ ಹೆಣ್ಣು ಮಗಳು, ಸಿನಿಮಾಗೃಹದಲ್ಲಿ ಜಾಗವನ್ನು ಹುಡುಕಿಕೊಡುವವರೂ ಹೆಣ್ಣು ಮಕ್ಕಳೆ, ಕಾಲೇಜಿನ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನೂ ಇಟ್ಟಿದ್ದಾರೆ.

3. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?

ಉ:– ಲೇಖಕರು "ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ, ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ, ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯರಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ ಎಂದು ದಾಖಲಿಸಿದ್ದಾರೆ.

4. 'ಪೊಯಟ್ ಕಾರ್ನರ್' ನಲ್ಲಿ ಯಾವ ಯಾವ ಕವಿಗಳ ಸಮಾಧಿ ಇದೆ?

ಉ:– ಪೊಯಟ್ ಕಾರ್ನರ್ ನಲ್ಲಿ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲಲ್ಡ್ಸ್ಮಿತ್, ಡ್ರಾಯರ್, ಬೆನ್ ಜಾಜ್‌ಸನ್, ವರ್ಡ್ಸವರ್ತ್, ಮೊದಲಾದ ಕವಿಗಳ ಸಮಾಧಿ ಇದೆ.

5. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?

ಉ:– ಸಾಮ್ರಾಟರು ಪಟ್ಟಾಭಿಷೇಕವಾಗುವಾಗ ಮಾತ್ರ ಇದರ ಮೇಲೆ ಕೂರಬೇಕು. ಈ ಶಿಲೆಯನ್ನು ಒಳಗೊಂಡ ಸಿಂಹಾಸನವು ವೆಸ್ಟ್ ಮಿನಿಸ್ಟರ್ ಮಂದಿರದಲ್ಲಿಯ ಒಂದು ಭಾಗದಲ್ಲಿದೆ. "ಸ್ಟೋನ್ ಆಫ್ ಸ್ಟೋನ್" ಎಂದು ಇದರ ಹೆಸರು. 3ನೇ ಎಡ್ವರ್ಡನು ಸ್ಕಾಟ್‌ಲ್ಯಾಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ.

***ಆ) ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸಿ.***

1).ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿದ ವಿಶೇಷತೆಗಳೇನು?

ಉ:– ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ ಜಗತ್ತು. ಇಲ್ಲಿನ ಟ್ರಾಮ್ ಬಸ್ಸುಗಳು ಭೂಗರ್ಭದಲ್ಲಿ ಸಂಚರಿಸುತ್ತವೆ. ಊಲವರ್ತ ಸ್ಟೇಷನರಿ ಅಂಗಡಿಯು ಪ್ರಾಚೀನ ಮಹಾಕಾವ್ಯದಂತೆ ಒಂದು ಮಹಾಕೋಶವಾಗಿದೆ. ಇಲ್ಲಿ ಎಲ್ಲಾತರಹದ ಸಾಮಗ್ರಿಗಳು ದೊರಕುತ್ತವೆ. ಲಂಡನ್ ನಗರದ ಎಲ್ಲಾ ಅಂಗಡಿಗಳಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳೆ ಕಾರ್ಯ ನಿರ್ವಸುತ್ತಾರೆ. ಚೇರಿಂಗ್ ಕ್ರಾಸ್ ಎಂಬ ಓಣಿಯಲ್ಲಿ ಆಂಗ್ಲ ಸಮಾಜದ ವೈಭವವು ಕಂಡುಬರುತ್ತದೆ. ಟ್ರಾಫಲ್ಗಾರ್ ಸ್ಕ್ವಯರ್‌ನಲ್ಲಿ ನೆಲ್ಸನ್‌ರವರ ಮೂರ್ತಿ ಇದೆ. ಇಲ್ಲಿಯ ಹೆಣ್ಣು ಮಕ್ಕಳ ಟೊಪ್ಪಿಗೆಯು ವೈವಿದ್ಯಮಯವಾಗಿರುತ್ತದೆ. ವೆಸ್ಟ್ ಮಿನಿಸ್ಟರ್ ಅಬೆ ಎನ್ನುವುದು ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಪ್ರಾರ್ಥನಾ ಮಂದಿರ, ಇದನ್ನು ಸತ್ತವರ ಸ್ಮಾರಕ ಎಂದು ಕರೆಯುತ್ತಾರೆ. ಪೊಯೆಟ್ಸ್ ಕಾರ್ನ್ರ ನಲ್ಲಿ ಇಂಗ್ಲೆಂಡಿನ ಪ್ರಸಿದ್ದ ಕವಿಪುಂಗವರ ಸಮಾಧಿಗಳಿವೆ, ಇದರ ಸಮೀಪದಲ್ಲೇ ಪ್ರಖ್ಯಾತ ವಿಜ್ಞಾನಿಗಳ ವ್ಯಾಪಾರಿಗಳ ವಾಸ್ತು ಶಿಲ್ಪಿಗಳ

ಸರದಾರರ, ಸೇನಾಪತಿಗಳ ಸಮಾಧಿಗಳೂ ಸಹ ಇವೆ. ಲಂಡನ್ ನಗರದಲ್ಲಿ ಇರುವ ಅರಮನೆಟು ಸವಚಿಥಯ್ ಹಾಗು ರಾಜರುಗಳ ವೈಭವ ರಾಯಲ್ ಛಾಪೆಲ್ ನಲ್ಲಿ ಕಂಡು ಬರುತ್ತದೆ.

2) ವೆಸ್ಟ್ ಮಿನಿಸ್ಟರ್ ಅಭೆ ಪ್ರಾರ್ಥನಾ ಮಂದಿರ ಒಚಿದು ವಿಶೇಷ ಸ್ಮಾರಕ ವಿವರಿಸಿ.

ವೆಸ್ಟ್ ಮಿನಿಸ್ಟರ್ ಅಬೆ ಎನ್ನುವುದು ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಪ್ರಾರ್ಥನಾ ಮಂದಿರ, ಇದನ್ನು ಸತ್ತವರ ಸ್ಮಾರಕ ಎಂದು ಕರೆಯುತ್ತಾರೆ. ಇದು ಸಂತರ ಸಾರ್ವಭೌಮರ ಸ್ಮಾರಕವಾಗಿದೆ. ಆದುದರಿಂದ ಇದನ್ನು ಸತ್ತವರ ಸ್ಮಾರಕ ಎಂದು ಕರೆಯುತ್ತಾರೆ. ಇದು ಕಬ್ಬಿಗರ ಸ್ಫೂತಿಯ ತಾಣವಾಗಿದೆ. ಹೊರಬಿನಿಂದ ಉತ್ತಮವಾಗಿ ಶೃಂಗರಿಸಿದ ಸಣ್ಣ ಬಾಗಿಲು ಒಳಗೆ ಮಾತ್ರ ಕಟ್ಟಡವು ಸುಂದರವಾಗಿದೆ. ಸಾಗುವ ಹಾದಿಯ ಎಡಬಲಕ್ಕೆ ರಾಜಕಾರಣ ಚತುರರ ಶಿಲಾಮೂರ್ತಿಗಳಿವೆ. ಪಾದ್ರಿಯ ಆಸನದ ಉತ್ತಮವಾದ ಕೆತ್ತನೆಯ ಕೆಲಸದಿಂದ ಕೂಡಿದ ಬಂಗಾರದ ಬಣ್ಣವನ್ನು ಅದಕ್ಕೆ ಲೇಪಿಸಿದ್ದಾರೆ.

***ಖ) ಸಂದರ್ಭ ಸಹಿತ ಸ್ವಾರಸ್ಯವನ್ನು ಬಿವರಿಸಿ.***

1. " ನಿಮ್ಮ ದೇಶದ ಗೌರವವನ್ನು ಕಾಯಿರಿ, ಇದು ದೊಡ್ಡ ರಾಷ್ಟ್ರ"

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರ ಸಮುದ್ರದಾಚೆಯಿಂದ' ಎಂಬ ಪ್ರವಾಸ ಕಥನದಿಂದ ಆರಿಸಲಾಗಿರುವ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ:– ಲೇಖಕರು ಲಂಡನ್ ನಗರದ ಬೀದಿಬೀದಿಯಲ್ಲಿ ಇತಿಹಾಸದ ಪ್ರಸಿದ್ಧ ಪುರುಷರ ಪ್ರತಿಮೆಗಳನ್ನು ನೋಡಿ ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದವರು ನಿಂತು ಕೈ ಎತ್ತಿ "ನಿಮ್ಮ ದೇಶದ ಗೌರವವನ್ನು ಕಾಯಿರಿ/ ಇದು ದೊಡ್ಡ ರಾಷ್ಟ್ರ' ಎಂದು ಹೇಳುತ್ತಿರುವಂತೆ ತೋರುತ್ತದೆ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :– ರಾಷ್ಟ್ರಕ್ಕಾಗಿ ದುಡಿದ ಮಹನೀಯರಿಗೆ ಲಂಡನ್ ನಗರದಲ್ಲಿ ಅಲ್ಲಿನ ಜನ ತೋರುವ ಗೌರವಭಾವನೆ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

2. "ಹೊತ್ತು ಹೊತ್ತು ಹೊತ್ತೇ ಹಣ"

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರ ಸಮುದ್ರದಾಚೆಯಿಂದ' ಎಂಬ ಪ್ರವಾಸ ಕಥನದಿಂದ ಆರಿಸಲಾಗಿರುವ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ:– ಲಂಡನ್ ನಗರದ ಬೀದಿಯಲ್ಲಿ ಲಕ್ಷಾಂತರ ಜನರು ಅವಸರದಿಂದ ಓಡಾಡುವುದನ್ನು ನೋಡಿ ಲೇಖಕರು ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ :– ಇಲ್ಲಿ ಸಮಯಕ್ಕೆ ಬಹಳ ಪ್ರಾಮುಖ್ಯತೆ ಇದೆ, ಅದರಲ್ಲೂ ವಿದೇಶಗಳಲ್ಲಿ ಸಮಯವೇ ಹಣ ಎಂಬ ಮಾತು ಅಕ್ಷರಸಹ ನಿಜವಾಗಿದೆ ಎಂಬ ಮಾತು ಸ್ವಾರಸ್ಯಪೂರ್ಣವಾಗಿದೆ.

3. "ಯಾರನ್ನು ತುಳಿದರೇನು ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ ಮಣ್ಣು ಮಣ್ಣು"

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರ ಸಮುದ್ರದಾಚೆಯಿಂದ' ಎಂಬ ಪ್ರವಾಸ ಕಥನದಿಂದ ಆರಿಸಲಾಗಿರುವ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ:– ವೆಸ್ಟ್ ಮಿನಿಸ್ಟರ್ ಹಭೆ ಎಂಬ ಪ್ರಾರ್ಥನಾ ಮಂದಿರದಲ್ಲಿ ಸ್ಥಾಪಿಸಲಾಗಿದ್ದ ಕವಿಗಳ ಸಾರ್ವಭೌಮರ ನೆನಪಿಗಾಗಿ ಕಲ್ಲುಹಾಸುಗಳನ್ನು ಇಟ್ಟಿದ್ದು ಅವುಗಳ ಮೇಲೆ ನಡೆದು ಹೋಗಬೇಕಾಗಿತ್ತು. ಅವುಗಳ ಬಳಿ ನಡೆದು ಹೋಗುತ್ತಿದ್ದ ಸಂದರ್ಭದಲ್ಲಿ ಲೇಖಕರು ಯಾರನ್ನು ತುಳಿದರೇನು? ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ, ಮಣ್ಣು ಮಣ್ಣು ಎಂಬ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ಸಾಧಕರ ಮಾರ್ಗದಲ್ಲಿ ನಡೆಯುವಾಗ ಮಾನವನು ದಿಕ್ಕು ತಪ್ಪಿದಂತಾದಾಗ ಎಲ್ಲವೂ ಅಷ್ಟೆ ಬರೀ ಮಣ್ಣು ಎಂದು ಮನಸ್ಸಿನಲ್ಲಿ ಮೂಡಿ ನಶ್ವರವಾಗಿ ಕಾಣುತ್ತದೆ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

4. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರ ಸಮುದ್ರದಾಚೆಯಿಂದ' ಎಂಬ ಪ್ರವಾಸ ಕಥನದಿಂದ ಆರಿಸಲಾಗಿರುವ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ:– ಲಂಡನ್ ನಗರ ಪ್ರವಾಸ ಕಥನದ ಕೊನೆಯಲ್ಲಿ ಪ್ರವಾಸದ ಶೈಕ್ಷಣಿಕ ಮಹತ್ವವನ್ನು ತಿಳಿಸುವ ಸಂದರ್ಭದಲ್ಲಿ ಪ್ರವಾಸದಿಂದ ತಮ್ಮ ಮನಸ್ಸು ವಿಕಾಸ ಹೊಂದಿ ದೃಷ್ಟಿಕೋನ ವಿಶಾಲವಾದ ಬಗ್ಗೆ ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ ಎಂದು "ಬೇಕನ್" ಹೇಳಿದ ಮಾತನ್ನು ಇಲ್ಲಿ ಹೇಳಿದ್ದಾರೆ.

**ಸ್ವಾರಸ್ಯ :– "ದೇಶ ಸುತ್ತು ಕೋಶ ಓದು" ಎಂಬ ಮಾತಿನಂತೆ ಪರಿಪೂರ್ಣ ಶಿಕ್ಷಣಕ್ಕೆ ಪ್ರವಾಸ ಅತೀ ಮುಖ್ಯ ಆದ್ದರಿಂದ ಈ ಮಾತು ಮಹತ್ವ ಪಡೆದಿದೆ.**

***ಉ) ಖಾಲಿ ಬಿಟ್ಟಿರುವ ಪದಗಳನ್ನು ಸರಿಯಾದ ಪದಗಳಿಂದ ತುಂಬಿರಿ.***

1. ಲಂಡನ್ ಪಟ್ಟಣವೆಂದರೆ ಒಂದು ________ ಜಗತ್ತು. (ಸ್ವತಂತ್ರ)
2. ವೂಲವರ್ಥ ಎಂಬುದು__________ ಅಂಗಡಿ. (ಸ್ಟೇಷನರಿ)
3. ಮನೆ ಹಿಡಿದು ಇರುವ __________ ಬುದ್ಧಿ ಮನೆಯ ಮಟ್ಟದ್ದೇ. (ತರುಣನ)
4. ಅಬೆಯಲ್ಲಿರುವ ಸಿಂಹಾಸನಕ್ಕೆ __________ ಎಂದು ಹೆಸರು. (ಸ್ಟೋನ್ ಆಫ್ ಸ್ಟೋನ್)
5. ವೆಸ್ಟ್‌ಮಿನ್‌ಸ್ಟರ್ ಅಬೆ ಎಂಬುದು_________ (ಪ್ರಾರ್ಥನಾ ಂದಿರ)

ಊ) ಈ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಬರೆಯಿರಿ.

೧. ಒಮ್ಮೊಮ್ಮೆ = ಒಮ್ಮೆ+ಒಮ್ಮೆ –ಲೋ.ಸಂಧಿ ೨. ಜಾಗವನ್ನು=ಜಾಗ+ಅನ್ನು–ಆಗಮ ಸಂಧಿ

೩. ಅತ್ಯಾದರ=ಅತಿ+ಆದರ–ಯಣ್ ಸಂಧಿ ೪. ವಾಚಾನಾಲಯ =ವಾಚನ+ ಆಲಯ –ಸ.ಧೀ ಸಂ

೫. ಸಂಗ್ರಹಾಲಯ= ಸಂಗ್ರಹ ಆಲಯ –ಸ.ಧೀ.ಸಂ

## ***ಭಾಷಾ ಚಟುವಟಿಕೆ***

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ನಾಮಪದ ಎಂದರೇನು? ಉದಾಹರಿಸಿರಿ.**

**ಉತ್ತರ:** ವ್ಯಕ್ತಿ, ಸ್ಥಳ, ವಸ್ತು, ಪ್ರಾಣಿ, ಪಕ್ಷಿ ಮೊದಲಾದವುಗಳ ಹೆಸರನ್ನು ಸೂಚಿಸುವ ಪದಗಳೇ ನಾಮಪದಗಳು.

ಉದಾ: ರಾಜಕುಮಾರ್, ಬೆಂಗಳೂರು, ನದಿ, ಹುಲಿ, ಗಿಳಿ ಇತ್ಯಾದಿ

**2. ನಾಮವಾಚಕಗಳ ವಿಧಗಳನ್ನು ಪಟ್ಟಿಮಾಡಿರಿ.**

**ಉತ್ತರ:** 1. ಗುಣವಾಚಕ 2. ಸಂಖ್ಯಾವಾಚಕ 3. ದಿಗ್ವಾಚಕ 4. ಪರಿಮಾಣವಾಚಕ 5. ವಸ್ತುವಾಚಕ

**3. ಕೃದಂತ ಎಂದರೇನು? ಉದಾಹರಣೆಗಳನ್ನು ಬರೆಯಿರಿ.**

**ಉತ್ತರ:** ಧಾತುಗಳಿಗೆ ಕೃತ್‌ಪ್ರತ್ಯಯಗಳು ಸೇರಿ ಕೃದಂತಗಳೆನಿಸುತ್ತವೆ. ಇದಕ್ಕೆ ಕೃನ್ನಾಮಗಳೆಂಬ ಹೆಸರೂ ಇದೆ.

ಉದಾ: ಮಾಟ, ಓಡಿದ, ತಿಂದ, ನೋಡಿ, ಆಟ, ನೋಡಿದ **ಇತ್ಯಾದಿ**

**4. ಕೊಟ್ಟಿರುವ ಪದಗಳನ್ನು ಕೃದಂತನಾಮ, ಕೃದಂತಭಾವನಾಮ, ಕೃದಂತಾವ್ಯಯಗಳಾಗಿ ವಿಂಗಡಿಸಿ ಬರೆಯಿರಿ.**

ಮಾಟ, ಓಡಿದ, ತಿಂದ, ನೋಡಿ, ಆಟ, ನೋಡಿದ

**ಉತ್ತರ:** ಕೃದಂತನಾಮ – ಓಡಿದ, ನೋಡಿದ

ಕೃದಂತಭಾವನಾಮ – ಮಾಟ, ಆಟ

ಕೃದಂತಾವ್ಯಯ – ನೋಡಿ, ತಿಂದ

**ಆ) ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.**

1. ವರ್ತಮಾನ ಕೃದಂತನಾಮಕ್ಕೆ ಈ ಪದವು ಉದಾಹರಣೆಯಾಗಿದೆ.

ಅ) ಬರೆಯುವ ಆ) ಬರೆದ ಇ) ಬರೆಯದ ಈ) ಬರೆಹ

**ಉತ್ತರ: ಅ) ಬರೆಯುವ**

2. 'ನೋಟ' ಎಂಬುದು ಈ ವ್ಯಾಕರಣಾಂಶವಾಗಿದೆ.

ಅ) ಕೃದಂತನಾಮ ಆ) ಕೃದಂತಭಾವನಾಮ ಇ) ಕೃದಂತಾವ್ಯಯ ಈ)ತದ್ಧಿತಾಂತ

**ಉತ್ತರ: ಆ) ಕೃದಂತಭಾವನಾಮ**

3. ಇವುಗಳಲ್ಲಿ ಕೃದಂತಾವ್ಯಯಕ್ಕೆ ಉದಾಹರಣೆಯಾದ ಪದ.

ಅ) ತೊಡುಗೆ ಆ) ತಿನ್ನುವಿಕೆ ಇ) ನಡೆಯುವ ಈ) ಮಾಡಲಿಕ್ಕೆ

**ಉತ್ತರ: ಈ) ಮಾಡಲಿಕ್ಕೆ**

4. 'ಲೋಕದೊಳ್' ಎಂಬುದು ಈ ವಿಭಕ್ತಿಯಲ್ಲಿದೆ.

ಅ) ಪ್ರಥಮಾ ಆ) ತೃತೀಯಾ ಇ) ಪಂಚಮೀ ಈ) ಸಪ್ತಮೀ

**ಉತ್ತರ: ಈ) ಸಪ್ತಮೀ**

***************************

# ಗದ್ಯ ಪಾಠ 8. ಅಗ್ನಿಭೂತಿ ವಾಯುಭೂತಿಯರ ಕಥೆ

**– ಶಿವಕೋಟ್ಯಾಚಾರ್ಯ**

**ಲೇಖಕರ ಪರಿಚಯ : ಶಿವಕೋಟ್ಯಾಚಾರ್ಯ**ರ ಕಾಲ ಕ್ರಿ. ಶ. ಸುಮಾರು 10ನೆಯ ಶತಮಾನ. **ವಿಜಯನಗರ ಜಿಲ್ಲೆಯ ಕೋಗಳಿ ನಾಡಿನವನು**. ಇವರು ಕನ್ನಡದ ಪ್ರಥಮ ಗದ್ಯಕೃತಿ **'ವಡ್ಡಾರಾಧನೆ'**ಯ ಕರ್ತೃ. ಜೈನ ಧಾರ್ಮಿಕ ಕಥೆಗಳ ಸಂಗ್ರಹವಾದ ವಡ್ಡಾರಾಧನೆಯಲ್ಲಿ 19 ಕಥೆಗಳಿವೆ. ಇವರಿಗೆ ಕನ್ನಡದ ಮೊದಲ **ಗದ್ಯಕವಿ** ಎಂಬ ಬಿರುದಿದೆ.

## ಸಾರಾಂಶ

ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ವತ್ಸೆ ಎಂಬ ನಾಡಿದ್ದಿತು. ಅಲ್ಲಿ ಕೌಸಂಬಿ ಎಂಬ ಪಟ್ಟಣವಿತ್ತು. ಅದನ್ನು ಅತಿಬಲನೆಂಬ ಅರಸನು ಆಳುತ್ತಿದ್ದನು. ಮನೋಹರಿ ಎಂಬುವಳು ಅವನ ಮಹಾದೇವಿ(ರಾಣಿ). ಆಕೆ ಹೆಸರಿಗೆ ತಕ್ಕಂತೆ ನೋಡಿದವರೆಲ್ಲರ ಕಣ್ಣುಗಳಿಗೆ ಚೆಲುವೆಯಾಗಿದ್ದಳು. ಸತ್ಯ, ಶುಚಿತ್ವ, ಸದಾಚಾರಗಳಿಂದ ಕೂಡಿದ್ದಳು. ಅತ್ಯಂತ ರೂಪ ಲಾವಣ್ಯ, ಸೌಭಾಗ್ಯ, ಕಾಂತಿ, ಹಾವಭಾವ, ವಿಲಾಸ ವಿನೋದಗಳನ್ನು ಉಳ್ಳವಳಾಗಿದ್ದಳು. ಅಂತು ಅವರಿಬ್ಬರು ತಮ್ಮ ಇಷ್ಟ ವಿಷಯ ಸುಖಗಳನ್ನು ಅನುಭವಿಸುತ್ತಾ ಇದ್ದರು. ಆ ಅರಸನ ಮಂತ್ರಿ ಸೋಮಶರ್ಮ. ಕಾಶ್ಯಪಿ ಎಂಬುವಳು ಅವನ ಹೆಂಡತಿ. ಇವರಿಗೆ ಅಗ್ನಿಭೂತಿ ವಾಯುಭೂತಿ ಎಂಬ ಇಬ್ಬರು ಮಕ್ಕಳು. ಇವರು ತಾಯಿ ತಂದೆಗಳ ಮಾತನ್ನೇ ಕೇಳದೆ, ವೇದ ಮೊದಲಾದ ಶಾಸ್ತ್ರಗಳನ್ನು ಓದದೆ ತಂದೆ ಸಂಪಾದಿಸಿದ ಸಂಪತ್ತನ್ನೆಲ್ಲ ವೆಚ್ಚ ಮಾಡುತ್ತಾ ಬೇಟೆ, ಜೂಜು, ಮಾಂಸಸೇವನೆ, ಮದ್ಯಪಾನ, ಕಳ್ಳತನ, ದುರ್ವಾಕ್ಯ ಮೊದಲಾದ ಸಪ್ತ(ಏಳು) ವ್ಯಸನ(ಚಟ)ಗಳಿಗೆ ಬಲಿಯಾಗಿ ನಡೆಯುತ್ತಿದ್ದರು. ಹೀಗೆ ಕೆಲವು ಕಾಲ ಕಳೆಯಿತು. ತಂದೆ ಸೋಮಶರ್ಮನು ತೀರಿ ಹೋದನು. ಅತಿಬಲ ಮಹಾರಾಜನು ಸೋಮಶರ್ಮನಿಗೆ ಮಕ್ಕಳಿದ್ದಾರೋ ಇಲ್ಲವೋ ಎಂದು ವಿಚಾರಿಸಿದನು. ಇದ್ದಾರೆಂದು ತಿಳಿದು ಕೂಡಲೇ ದೂತರನ್ನು ಕಳುಹಿಸಿ ಅವರಿಬ್ಬರನ್ನು ಕರೆಸಿ, ಪೂರ್ಣ ಸ್ನಾನ ಮಾಡಿಸಿ, ಬಟ್ಟೆಯುಡಿಸಿ, ತಕ್ಕ ಭೂಷಣಗಳನ್ನು ಕೊಡಿಸಿ ಊಟ ಮಾಡಿಸಿದನು. ತಾಂಬೂಲ ಕೊಟ್ಟು ನೀವು ದುಃಖ ಪಡದಿರಿ ಎಂದು ಸಮಾಧಾನ ಹೇಳಿ ಮನೆಗೆ ಕಳುಹಿಸಿಕೊಟ್ಟನು.

ಕೆಲವು ದಿನಗಳ ನಂತರ ಅವರನ್ನು ಕರೆಯಿಸಿ ನೀವು ಯಾವ ವಿದ್ಯೆಗಳನ್ನು ಬಲ್ಲಿರಿ? ಎಂದು ವಿಚಾರಿಸಿದನು. ಆಗ ಅವರು ತಲೆ ಬಗ್ಗಿಸಿ ಮಾತನಾಡದೇ ಕಣ್ಣೀರನ್ನು ತುಂಬಿ, ನಾಚಿಕೆಯಿಂದ ಕಾಲ ಬೆರಳಿನಿಂದ ನೆಲದ ಮೇಲೆ ಬರೆಯುತ್ತಿದ್ದರು. ಸಭೆಯಲ್ಲಿದ್ದ ಎಲ್ಲರೂ ಇವರು ಮೂರ್ಖರು, ಯಾವ ವಿದ್ಯೆಗಳನ್ನು ತಿಳಿದಿಲ್ಲ, ಸಪ್ತ ವ್ಯಸನಗಳಿಗೆ ಒಳಗಾದವರು ಎಂದು ರಾಜನಿಗೆ ಹೇಳಿದರು. ಆಗ ರಾಜನು ಅವರನ್ನು ಅಲ್ಲಿಂದ ಕಳುಹಿಸಿ, ಅವರ ದಾಯಾದಿಗಳಾಗಿದ್ದು ಶಾಸ್ತ್ರಗಳನ್ನು ಬಲ್ಲ ಒಬ್ಬನಿಗೆ ಮಂತ್ರಿಪದವಿಯನ್ನು, ಜೀವನವನ್ನು, ಗೌರವವನ್ನೂ ಕೊಟ್ಟನು. ಇದನ್ನು ಕೇಳಿದ ಅಗ್ನಿಭೂತಿ ಮತ್ತು ವಾಯುಭೂತಿಯರು ದುಃಖಿತರಾದರು. ವೈರಾಗ್ಯದಿಂದ ಹರಕು ಬಟ್ಟೆಯನ್ನುಟ್ಟು ಭಿಕ್ಷೆ ಬೇಡಿಯಾದರೂ ಓದುತ್ತೇವೆಂದು ತಾಯಿಗೆ ಹೇಳಿದರು. ಆಗ ಕಾಶ್ಯಪಿಯು – " ಮಕ್ಕಳೇ ಮಗಧೆಯೆಂಬುದು ನಾಡು. ಅಲ್ಲಿ ರಾಜಗೃಹಮೆಂಬ ಪಟ್ಟಣ. ಅದನ್ನು ಸುಬಲನೆಂಬ ಅರಸನು ಆಳುವನು, ಸುಪ್ರಭೆ ಅವನ ಮಹಾದೇವಿ. ಅವರಿಗೆ ನಮ್ಮಣ್ಣ ಸೂರ್ಯಮಿತ್ರ ಮಂತ್ರಿ. ಸೂರ್ಯಮಿತ್ರನು ಎಲ್ಲಾ ವಿದ್ಯೆಗಳನ್ನು ಬಲ್ಲಾತ. ಅವನು ನಿಮ್ಮನ್ನು ಓದಿಸಿ ಯೋಗ್ಯರನ್ನಾಗಿ ಮಾಡುವಂತೆ ತಿಳಿಸಿ, ಪತ್ರವನ್ನು ಬರೆಯಿಸಿ ನಿಮ್ಮ ಕೈಯಲ್ಲಿ ಕಳುಹಿಸುತ್ತೇನೆ. ನೀವು ಹೋಗಿ ನಿಮ್ಮ ಮಾವನ ಬಳಿಯಿದ್ದು, ವಿದ್ಯೆ ಕಲಿಯಿರಿ " ಎಂದು ಪತ್ರ ಬರಿಯಿಸಿ ಕೊಟ್ಟಳು. ಅವರು ತಾಯಿಯನ್ನು ಬೀಳ್ಕೊಂಡು ಕೆಲವು ದಿನಗಳ ನಂತರ ರಾಜಗೃಹಕ್ಕೆ ಬಂದರು. ಸೂರ್ಯಮಿತ್ರನ ಮನೆಯನ್ನು ಕೇಳಿಕೊಂಡು ಬಂದು ಪತ್ರವನ್ನು ಕೊಟ್ಟರು. ಸೂರ್ಯಮಿತ್ರನು ಎಲ್ಲಿಂದ ಬಂದಿರಿ? ಯಾರ ಪತ್ರವಿದು? ಎಂದು ಕೇಳಿದನು. ಆಗ ಕೌಸಂಬಿಯಿಂದ ಬಂದೆವು. ನಿಮ್ಮ ತಂಗಿಯಾದ ಕಾಶ್ಯಪಿಯು ಈ ಪತ್ರವನ್ನು ಕಳುಹಿಸಿದಳು ಎಂದರು. ಸೂರ್ಯಮಿತ್ರನು ಆ ಪತ್ರವನ್ನು ಓದಿ ನೋಡಿದಾಗ ಸೋಮಶರ್ಮನು ತೀರಿ ಹೋದದ್ದು, ಮಂತ್ರಿ ಪದವಿ ಬೇರೆಯವರಿಗಾದುದು, ಮಕ್ಕಳು ವ್ಯಸನಿಗಳಾಗಿ ಜೀವನೋಪಾಯ ಕಳೆದುಕೊಂಡದ್ದು, ಇವರನ್ನು ಶಾಸ್ತ್ರಜ್ಞರು, ಬುದ್ಧಿವಂತರು, ಯೋಗ್ಯರನ್ನಾಗಿ ಮಾಡಬೇಕೆಂದು ಸೂಚಿಸಿ ಕಳುಹಿಸಿದ್ದು ಹೀಗೆ ಎಲ್ಲವನ್ನೂ ಓದಿ ತಿಳಿದನು. ನಾನು ಇವರಿಗೆ ಸಲುಗೆ ಕೊಟ್ಟೆನಾದರೆ ಮೊದಲಿನಂತೆ ಗರ್ವಿಷ್ಠರಾಗಿ ಹಾಳಾಗುವರೆಂದು ಮನದಲ್ಲಿ ಯೋಚಿಸಿ, ಅಗ್ನಿಭೂತಿ ವಾಯುಭೂತಿಯರಿಗೆ ಹೀಗೆಂದನು – " ನನಗೆ ಕಾಶ್ಯಪಿಯೆಂಬ ತಂಗಿಯೂ ಸೋಮಶರ್ಮನೆಂಬ ಮೈದುನನೂ ಇಲ್ಲ. ಸೂರ್ಯಮಿತ್ರನೆಂಬ ಹೆಸರಿದೆ. ನಿಮ್ಮ ಮಾವನಾದ ಸೂರ್ಯಮಿತ್ರನು ನಾನಲ್ಲ. ನೀವು ಯಾರಾದರೇನು? ವಿದ್ಯಾರ್ಥಿಗಳಾಗಿ ವಿದ್ಯೆ ಕಲಿಯುತ್ತೇವೆ ಎಂಬ ಪ್ರೀತಿಯಿಂದ ಬಂದಿರುವುದಾದರೆ ಅಡ್ಡಿಯಿಲ್ಲ. ಭಿಕ್ಷೆ ಬೇಡಿ ಹರಕು ಬಟ್ಟೆಯನ್ನುಟ್ಟು ರಾತ್ರಿ ಹಗಲೂ ಆಲಸ್ಯಗೊಳ್ಳದೆ ನಿರ್ಬಂಧದಿಂದ ಓದುವುದಾದರೆ ನಿಮಗೆ ವಿದ್ಯೆ ಕಲಿಸಬಹುದು" ಎಂದನು. ಆಗ ಅವರು ದಯಮಾಡಿ ಅನುಗ್ರಹಿಸಿ ಎಂದು ನಮಸ್ಕರಿಸಿ, ಸಂತೋಷಪಟ್ಟರು. ಒಳ್ಳೆಯ ದಿನ, ವಾರ, ಯೋಗ್ಯವಾದ ವಿದ್ಯಾ ನಕ್ಷತ್ರದಂದು ತಮ್ಮ ಅನುಕೂಲದಲ್ಲಿ ಉಪಾಧ್ಯಾಯರಿಗೆ ನಮಸ್ಕರಿಸಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಸೂರ್ಯಮಿತ್ರನು ಅವರನ್ನು ಹಗಲು ರಾತ್ರಿ ಎಡೆಬಿಡದೆ ನಿರಂತರವಾಗಿ ಕಟ್ಟುನಿಟ್ಟಿನಿಂದ ಓದಿಸಿದನು. ಏಳೆಂಟು ವರ್ಷಗಳೊಳಗೆ ನಾಲ್ಕು ವೇದಗಳು, ವೇದದ ಆರು ಅಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷಗಳನ್ನೂ, ಹದಿನೆಂಟು ಧರ್ಮಶಾಸ್ತ್ರಗಳನ್ನು, ಮೀಮಾಂಸೆ, ತರ್ಕ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ ನಾಟಕಗಳು, ಅರ್ಥಶಾಸ್ತ್ರ, ಸಾಮುದ್ರಿಕ, ಅಶ್ವಶಾಸ್ತ್ರ, ಗಜಶಾಸ್ತ್ರ, ಹಾನಿತ ಸುಶ್ರುತನ ವೈದ್ಯಶಾಸ್ತ್ರ, ಚರಕ ಸಂಹಿತ, ಕ್ಷಾರಪಾನೀಯ ಮುಂತಾದ ನರವೈದ್ಯಶಾಸ್ತ್ರಗಳನ್ನೂ, ಜ್ಯೋತಿಷ್ಯ ಮಂತ್ರವಾದ ಮೊದಲಾದ ಶಾಸ್ತ್ರಗಳೆಲ್ಲವನ್ನು ಕಲಿಸಿ ಅವರನ್ನು ಯೋಗ್ಯರನ್ನಾಗಿ ಮಾಡಿದನು.

ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಗೆ ನಿಮ್ಮ ಅನುಗ್ರಹದಿಂದ ನಾವು ಎಲ್ಲಾ ಶಾಸ್ತ್ರಗಳನ್ನು ಕಲಿತು ವಿದ್ವಾಂಸರಾದೆವು. ಇನ್ನು ನಾವು ನಮ್ಮ ನಾಡಿಗೆ ತೆರಳುವುವು ಎಂದು ಉಪಾಧ್ಯಾಯರಿಗೆ ವಂದಿಸಿ, ನಮಸ್ಕರಿಸಿ ಹೊರಟಾಗ ಸೂರ್ಯಮಿತ್ರನು ಹೀಗೆಂದನು – " ನೀವು ನನ್ನ ತಂಗಿಯ ಮಕ್ಕಳು. ನನಗೆ ಸೋದರ ಅಳಿಯಂದಿರಾಗುವಿರಿ. ನಿಮಗೆ ನಾನು ಸಲುಗೆಯನ್ನು ಕೊಡಲಿಲ್ಲ. ಏಕೆಂದರೆ ನೀವು ಹಿಂದೆ ನಿಮ್ಮ ತಂದೆ ಕೊಟ್ಟ ಸಲುಗೆಯಿಂದ ಉನ್ಮತ್ತರಾಗಿ ಕೆಟ್ಟು ಹೋದಿರಿ. ಇಲ್ಲೂ ಸಹ ಎಲ್ಲಿಯಾದರೂ ಸೊಕ್ಕಿ ಕೆಟ್ಟುಹೋಗುವಿರೆಂದು ಭಾವಿಸಿ, ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಕಾರಣದಿಂದ ಸಲುಗೆ ಕೊಡಲಿಲ್ಲ. ಇದಕ್ಕೆ ಕೋಪಗೊಳ್ಳದಿರಿ, ನನ್ನನ್ನು ಕ್ಷಮಿಸಿ ಎಂದು ಅವರಿಗೆ ವಸ್ತ್ರಾಭರಣಗಳನ್ನು, ಪ್ರಯಾಣಕ್ಕೆ ಬೇಕಾಗುವ ಬುತ್ತಿಯನ್ನು ಕೊಟ್ಟು ಕಳುಹಿಸುವ ಸಂದರ್ಭದಲ್ಲಿ ಹಿರಿಯವನಾದ ಅಗ್ನಿಭೂತಿಯು ಮಾವನು ನಮಗೆ ಸಲುಗೆ ಕೊಡದೆ ಇಬ್ಬರನ್ನೂ ಯೋಗ್ಯರನ್ನಾಗಿ ಮಾಡಿದನು ಎಂದು ಸಂತೋಷಪಟ್ಟನು. ಕಿರಿಯವನಾದ ವಾಯುಭೂತಿ ತಮಗೆ ಸೂರ್ಯಮಿತ್ರನು ಮಾಡಿದುದೆಲ್ಲವೂ ಅಪಕಾರವೆಂದೇ ಬಗೆದನು. " ನಾವು ಭಿಕ್ಷೆ ಬೇಡಿ ತಂದ ಅನ್ನಕ್ಕೆ ಸೇರಿಸಲು ಎಣ್ಣೆಯನ್ನಾಗಲಿ, ಉಪ್ಪನ್ನಾಗಲಿ, ಮಜ್ಜಿಗೆಯನ್ನಾಗಲಿ ನಮಗೆ ಎಂದಿಗೂ ಕೊಡಲೂ ಇಲ್ಲ ಕೊಡಿಸಲೂ ಇಲ್ಲ. ಕೆರೆ ಹೋಗಿ ಸ್ನಾನ ಮಾಡುವ ಸಂದರ್ಭದಲ್ಲಿ ತಲೆಗೆ ಹಚ್ಚಲು ಎಣ್ಣೆಯನ್ನಾದರೂ ನೀಡಲಿಲ್ಲ. ತಾನಾದರೋ ದಿವ್ಯವಾದ ಆಹಾರಗಳನ್ನು ಪ್ರತಿದಿನವೂ ನೆಂಟರನ್ನು, ಆಳುಗಳನ್ನು ಕೂಡಿಕೊಂಡು ಉಣ್ಣುತ್ತಿದ್ದನು. ಹಬ್ಬದ ದಿವಸದಲ್ಲಾದರೂ ಇವರಿಗೆ ಊಟ ಹಾಕಿ ಎಂದು ಹೇಳಲಿಲ್ಲ. ಇವನು ಪಂಚ ಮಹಾಪಾತಕ ಮಾಡಿದನು. ನಮ್ಮನ್ನು ಏಳೆಂಟು ವರ್ಷಗಳವರೆಗೆ ಶತ್ರುಗಳಂತೆ ದಂಡಿಸಿದನೆಂದು ಮನದಲ್ಲಿ ತಿಳಿದು ವಾಯುಭೂತಿಯು ಕೋಪದಿಂದ ವಂದಿಸಿ ಹೊರಟು ಹೋದನು.

ಅಂತು ಇಬ್ಬರೂ ಕೆಲವು ದಿನಗಳಲ್ಲಿ ಕೌಶಂಬಿ ತಲುಪಿದರು. ತಮ್ಮ ಮನೆ ಹೊಕ್ಕು ತಾಯಿಯನ್ನು ಕಂಡು ವಂದಿಸಿದರು. ತಾವು ವಿದ್ವಾಂಸರಾಗಿ ಬಂದುದನ್ನು ತಿಳಿಸಿದರು. ಸ್ನಾನ ಊಟ ಮಾಡಿ ವಿಶ್ರಾಂತಿ ಪಡೆದರು. ಒಳ್ಳೆಯ ದಿನ ವಾರ ನಕ್ಷತ್ರದಲ್ಲಿ ಇಬ್ಬರು ಅತಿಬಲ ಮಹಾರಾಜನಲ್ಲಿಗೆ ಬಂದು ಬೇರೆಬೇರೆಯಾಗಿ ಸ್ತುತಿ ರಚನೆ ಮಾಡಿದರು. ಕ್ರಿಯ ಕಾರಕ ಸಂಬಂಧದಿಂದ ವ್ಯಾಖ್ಯಾನಿಸಿ ತಮ್ಮ ಪಾಂಡಿತ್ಯವನ್ನು ಪ್ರಕಟಿಸಿದರು. ರಾಜಸಭೆಯಲ್ಲಿದ್ದ ಪಂಡಿತರೆಲ್ಲರೂ ಮೆಚ್ಚಿ ಹೊಗಳಿದರು. ಅರಸನು ಸಂತೋಷಗೊಂಡು ನಿಮ್ಮ ತಂದೆಯ ಮಂತ್ರಿ ಸ್ಥಾನವನ್ನೂ ಜೀವಿಕೆಯನ್ನೂ ಸ್ವೀಕರಿಸಿ ಎಂದು ಅವರಿಗೆ ಕೊಟ್ಟಾಗ ನಮಸ್ಕರಿಸಿ ಸ್ವೀಕರಿಸಿದರು. ಸುಖವಾಗಿ ಬಾಳುತ್ತ, ಅವರು ಪಂಡಿತರಿಗೆ ವಿದ್ಯೆಗಳನ್ನು ವಿವರಿಸುತ್ತಾ ಲೋಕದಲ್ಲೂ ಅರಮನೆಯಲ್ಲೂ ಪೂಜ್ಯರಾದರು.

# ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಕೌಸಂಬಿಯ ಅರಸ ಯಾರು?**

**ಉತ್ತರ:** ಕೌಸಂಬಿಯ ಅರಸ ಅತಿಬಲ.

**2. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು?**

**ಉತ್ತರ:** ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರು ಅಗ್ನಿಭೂತಿ ವಾಯುಭೂತಿ.

**3. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು?**

**ಉತ್ತರ:** ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಸೋದರನಾದ ಸೂರ್ಯಮಿತ್ರನ ಬಳಿಗೆ ಕಳುಹಿಸಿದಳು.

**4. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು?**

**ಉತ್ತರ:** ಸಲುಗೆಯಿಂದ ಕೆಡಬಾರದೆಂದು ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಅಗ್ನಿಭೂತಿ ವಾಯುಭೂತಿಯರಿಗೆ ಹೇಳಿದನು.

**5. ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಯಾವುದು?**

**ಉತ್ತರ:** ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಮಂತ್ರಿಪದವಿ.

## ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

**1. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಿದ್ದೇಕೆ?**

**ಉತ್ತರ:** ಅತಿಬಲ ಮಹಾರಾಜನು ಅಗ್ನಿಭೂತಿ ವಾಯುಭೂತಿಯನ್ನು ರಾಜಸಭೆಗೆ ಕರೆಯಿಸಿ ನೀವು ಯಾವ ವಿದ್ಯೆಗಳನ್ನು ಬಲ್ಲಿರಿ? ಎಂದು ವಿಚಾರಿಸಿದನು. ಆಗ ಅವರು ತಲೆ ಬಗ್ಗಿಸಿ ಮಾತನಾಡದೇ ಕಣ್ಣೀರನ್ನು ತುಂಬಿ, ನಾಚಿಕೆಯಿಂದ ಕಾಲ ಬೆರಳಿನಿಂದ ನೆಲದ ಮೇಲೆ ಬರೆಯುತ್ತಿದ್ದರು. ಸಭೆಯಲ್ಲಿದ್ದ ಎಲ್ಲರೂ ಇವರು ಮೂರ್ಖರು, ಯಾವ ವಿದ್ಯೆಗಳನ್ನು ತಿಳಿದಿಲ್ಲ, ಸಪ್ತ ವ್ಯಸನಗಳಿಗೆ ಒಳಗಾದವರು ಎಂದು ತೀರ್ಮಾನಿಸಿದರು.

**2. ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಂದ ಕಲಿತ ವಿದ್ಯೆಗಳಾವುವು?**

**ಉತ್ತರ:** ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಂದ ಹಗಲು ರಾತ್ರಿಯೆನ್ನದೆ ನಿರಂತರವಾಗಿ ಕಟ್ಟುನಿಟ್ಟಿನಿಂದ ಓದಿ, ಏಳೆಂಟು ವರ್ಷಗಳೊಳಗೆ ನಾಲ್ಕು ವೇದಗಳು, ವೇದದ ಆರು ಅಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷಗಳನ್ನೂ, ಹದಿನೆಂಟು ಧರ್ಮಶಾಸ್ತ್ರಗಳನ್ನು, ಮೀಮಾಂಸೆ, ತರ್ಕ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ ನಾಟಕಗಳು, ಅರ್ಥಶಾಸ್ತ್ರ, ಸಾಮುದ್ರಿಕ, ಅಶ್ವಶಾಸ್ತ್ರ, ಗಜಶಾಸ್ತ್ರ, ಹಾನಿತ ಸುಶ್ರುತನ ವೈದ್ಯಶಾಸ್ತ್ರ, ಚರಕ ಸಂಹಿತ, ಕ್ಷಾರಪಾನೀಯ ಮುಂತಾದ ನರವೈದ್ಯಶಾಸ್ತ್ರಗಳನ್ನೂ, ಜ್ಯೋತಿಷ್ಯ ಮಂತ್ರವಾದ ಮೊದಲಾದ ಶಾಸ್ತ್ರಗಳೆಲ್ಲವನ್ನು ಕಲಿತರು.

**3. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು?**

**ಉತ್ತರ:** ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ –" ನೀವು ನನ್ನ ತಂಗಿಯ ಮಕ್ಕಳು. ನನಗೆ ಸೋದರ ಅಳಿಯಂದಿರಾಗುವಿರಿ. ನಿಮಗೆ ನಾನು ಸಲುಗೆಯನ್ನು ಕೊಡಲಿಲ್ಲ. ಏಕೆಂದರೆ ನೀವು ಹಿಂದೆ ನಿಮ್ಮ ತಂದೆ ಕೊಟ್ಟ ಸಲುಗೆಯಿಂದ ಉನ್ಮತ್ತರಾಗಿ ಕೆಟ್ಟು ಹೋದಿರಿ. ಇಲ್ಲೂ ಸಹ ಎಲ್ಲಿಯಾದರೂ ಸೊಕ್ಕಿ ಕೆಟ್ಟುಹೋಗುವಿರೆಂದು ಭಾವಿಸಿ, ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಕಾರಣದಿಂದ ಸಲುಗೆ ಕೊಡಲಿಲ್ಲ. ಇದಕ್ಕೆ ಕೋಪಗೊಳ್ಳದಿರಿ, ನನ್ನನ್ನು ಕ್ಷಮಿಸಿ ಎಂದು ಹೇಳಿದನು.

**4. ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು?**

**ಉತ್ತರ:–** ಸೂರ್ಯಮಿತ್ರನು ಮಾವನೆಂದು ತಿಳಿದಾಗ ಕಿರಿಯವನಾದ ವಾಯುಭೂತಿ ತಮಗೆ ಸೂರ್ಯಮಿತ್ರನು ಮಾಡಿದುದೆಲ್ಲವೂ ಅಪಕಾರವೆಂದೇ ಬಗೆದನು. " ನಾವು ಭಿಕ್ಷೆ ಬೇಡಿ ತಂದ ಅನ್ನಕ್ಕೆ ಸೇರಿಸಲು ಎಣ್ಣೆಯನ್ನಾಗಲಿ, ಉಪ್ಪನ್ನಾಗಲಿ, ಮಜ್ಜಿಗೆಯನ್ನಾಗಲಿ ನಮಗೆ ಎಂದಿಗೂ ಕೊಡಲೂ ಇಲ್ಲ ಕೊಡಿಸಲೂ ಇಲ್ಲ. ಕೆರೆ ಹೋಗಿ ಸ್ನಾನ ಮಾಡುವ ಸಂದರ್ಭದಲ್ಲಿ ತಲೆಗೆ ಹಚ್ಚಲು ಎಣ್ಣೆಯನ್ನಾದರೂ ನೀಡಲಿಲ್ಲ. ತಾನಾದರೋ ದಿವ್ಯವಾದ ಆಹಾರಗಳನ್ನು ಪ್ರತಿದಿನವೂ ನೆಂಟರನ್ನು ಆಳುಗಳನ್ನು ಕೂಡಿಕೊಂಡು ಉಣ್ಣುತ್ತಿದ್ದನು. ಹಬ್ಬದ ದಿವಸದಲ್ಲಾದರೂ ಇವರಿಗೆ ಊಟ ಹಾಕಿ ಎಂದು ಹೇಳಲಿಲ್ಲ. ಇವನು ಪಂಚ ಮಹಾಪಾತಕ ಮಾಡಿದನು. ನಮ್ಮನ್ನು ಏಳೆಂಟು ವರ್ಷಗಳವರೆಗೆ ಶತ್ರುಗಳಂತೆ ದಂಡಿಸಿದನೆಂದು ವಾಯುಭೂತಿಯು ಕೋಪದಿಂದ ಮನದಲ್ಲಿ ಅಂದು ಕೊಂಡನು.

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ:**

**1. ಸಪ್ತವ್ಯಸನಿಗಳಾಗಿದ್ದ ಅಗ್ನಿಭೂತಿ ವಾಯುಭೂತಿಯರು ಪಂಡಿತರಾದುದು ಹೇಗೆ?**

**ಉತ್ತರ:–** ರಾಜಸಭೆಯಲ್ಲಿ ತಮಗಾದ ಅಪಮಾನದಿಂದ ಅಗ್ನಿಭೂತಿ ವಾಯುಭೂತಿಯರು ನೊಂದು ಹರಕು ಬಟ್ಟೆಯನ್ನುಟ್ಟು ಭಿಕ್ಷೆ ಬೇಡಿಯಾದರೂ ಓದುತ್ತೇವೆಂದು ತಾಯಿಗೆ ಹೇಳಿದರು. ಆಗ ಕಾಶ್ಯಪಿಯು – " ಮಕ್ಕಳೇ ಮಗಧೆಯೆಂಬುದು ನಾಡು. ಅಲ್ಲಿ ರಾಜಗೃಹಮೆಂಬ ಪಟ್ಟಣ. ಅದನ್ನು ಸುಬಲನೆಂಬ ಅರಸನು ಆಳುವನು. ಅವರಿಗೆ ನಮ್ಮಣ್ಣ ಸೂರ್ಯಮಿತ್ರ ಮಂತ್ರಿ. ಸೂರ್ಯಮಿತ್ರನು ಎಲ್ಲಾ ವಿದ್ಯೆಗಳನ್ನು ಬಲ್ಲಾತ. ಅವನು ನಿಮ್ಮನ್ನು ಓದಿಸಿ ಯೋಗ್ಯರನ್ನಾಗಿ ಮಾಡುವಂತೆ ತಿಳಿಸಿ, ಪತ್ರವನ್ನು ಬರೆಯಿಸಿ ನಿಮ್ಮ ಕೈಯಲ್ಲಿ ಕಳುಹಿಸುತ್ತೇನೆ. ನೀವು ಹೋಗಿ ನಿಮ್ಮ ಮಾವನ ಬಳಿಯಿದ್ದು, ವಿದ್ಯೆ ಕಲಿಯಿರಿ " ಎಂದು ಪತ್ರ ಬರಿಯಿಸಿ ಕೊಟ್ಟಳು. ಅವರು ತಾಯಿಯನ್ನು ಬೀಳ್ಕೊಂಡು ಕೆಲವು ದಿನಗಳ ನಂತರ ರಾಜಗೃಹಕ್ಕೆ ಬಂದರು. ಸೂರ್ಯಮಿತ್ರನ ಮನೆಯನ್ನು ಕೇಳಿಕೊಂಡು ಬಂದು ಪತ್ರವನ್ನು ಕೊಟ್ಟರು. ಸೂರ್ಯಮಿತ್ರನು ಎಲ್ಲಿಂದ ಬಂದಿರಿ? ಯಾರ ಪತ್ರವಿದು? ಎಂದು ಕೇಳಿದನು. ಆಗ ಕೌಸಂಬಿಯಿಂದ ಬಂದೆವು. ನಿಮ್ಮ ತಂಗಿಯಾದ ಕಾಶ್ಯಪಿಯು ಈ ಪತ್ರವನ್ನು ಕಳುಹಿಸಿದಳು ಎಂದರು. ಸೂರ್ಯಮಿತ್ರನು ಆ ಪತ್ರವನ್ನು ಓದಿ ನೋಡಿದಾಗ ಸೋಮಶರ್ಮನು ತೀರಿ ಹೋದದ್ದು, ಮಂತ್ರಿ ಪದವಿ ಬೇರೆಯವರಿಗಾದುದು, ಮಕ್ಕಳು ವ್ಯಸನಿಗಳಾಗಿ ಜೀವನೋಪಾಯ ಕಳೆದುಕೊಂಡದ್ದು, ಇವರನ್ನು ಶಾಸ್ತ್ರಜ್ಞರು, ಬುದ್ಧಿವಂತರು, ಯೋಗ್ಯರನ್ನಾಗಿ ಮಾಡಬೇಕೆಂದು ಸೂಚಿಸಿ ಕಳುಹಿಸಿದ್ದು ಹೀಗೆ ಎಲ್ಲವನ್ನೂ ಓದಿ ತಿಳಿದನು. ನಾನು ಇವರಿಗೆ ಸಲುಗೆ ಕೊಟ್ಟೆನಾದರೆ ಮೊದಲಿನಂತೆ ಗರ್ವಿಷ್ಠರಾಗಿ ಹಾಳಾಗುವರೆಂದು ಮನದಲ್ಲಿ ಯೋಚಿಸಿ, ಅಗ್ನಿಭೂತಿ ವಾಯುಭೂತಿಯರಿಗೆ ಹೀಗೆಂದನು –" ನನಗೆ ಕಾಶ್ಯಪಿಯೆಂಬ ತಂಗಿಯೂ ಸೋಮಶರ್ಮನೆಂಬ ಮೈದುನನೂ ಇಲ್ಲ. ಸೂರ್ಯಮಿತ್ರನೆಂಬ ಹೆಸರಿದೆ. ನಿಮ್ಮ ಮಾವನಾದ ಸೂರ್ಯಮಿತ್ರನು ನಾನಲ್ಲ. ನೀವು ಯಾರಾದರೇನು? ವಿದ್ಯಾರ್ಥಿಗಳಾಗಿ ವಿದ್ಯೆ ಕಲಿಯುತ್ತೇವೆ ಎಂಬ ಪ್ರೀತಿಯಿಂದ ಬಂದಿರುವುದಾದರೆ ಅಡ್ಡಿಯಿಲ್ಲ. ಭಿಕ್ಷೆ ಬೇಡಿ ಹರಕು ಬಟ್ಟೆಯನ್ನುಟ್ಟು ರಾತ್ರಿ ಹಗಲೂ ಆಲಸ್ಯಗೊಳ್ಳದೆ ನಿರ್ಬಂಧದಿಂದ ಓದುವುದಾದರೆ ನಿಮಗೆ ವಿದ್ಯೆ ಕಲಿಸಬಹುದು" ಎಂದನು. ಆಗ ಅವರು ದಯಮಾಡಿ

ಅನುಗ್ರಹಿಸಿ ಎಂದು ನಮಸ್ಕರಿಸಿ, ಸಂತೋಷಪಟ್ಟರು. ಒಳ್ಳೆಯ ದಿನ, ವಾರ, ಯೋಗ್ಯವಾದ ವಿದ್ಯಾ ನಕ್ಷತ್ರದಂದು ತಮ್ಮ ಅನುಕೂಲದಲ್ಲಿ ಉಪಾಧ್ಯಾಯರಿಗೆ ನಮಸ್ಕರಿಸಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಏಳೆಂಟು ವರ್ಷಗಳೊಳಗೆ ಎಲ್ಲಾ ವಿದ್ಯೆಗಳನ್ನು ಕಲಿತು ಪಂಡಿತರಾದರು.

**2. ಸೂರ್ಯಮಿತ್ರನು ತಮ್ಮ ಮಾವನೆಂದು ತಿಳಿದಾಗ ಅಗ್ನಿಭೂತಿ ವಾಯುಭೂತಿಯರಲ್ಲಿ ಮೂಡಿದ ಭಾವನೆಗಳೇನು? ವಿವರಿಸಿ.**

**ಉತ್ತರ:–** ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಗೆ ನಿಮ್ಮ ಅನುಗ್ರಹದಿಂದ ನಾವು ಎಲ್ಲಾ ಶಾಸ್ತ್ರಗಳನ್ನು ಕಲಿತು ವಿದ್ವಾಂಸರಾದೆವು. ಇನ್ನು ನಾವು ನಮ್ಮ ನಾಡಿಗೆ ತೆರಳುವುವು ಎಂದು ಉಪಾಧ್ಯಾಯರಿಗೆ ವಂದಿಸಿ, ನಮಸ್ಕರಿಸಿ ಹೊರಟಾಗ ಸೂರ್ಯಮಿತ್ರನು ಹೀಗೆಂದನು –" ನೀವು ನನ್ನ ತಂಗಿಯ ಮಕ್ಕಳು. ನನಗೆ ಸೋದರ ಅಳಿಯಂದಿರಾಗುವಿರಿ. ನಿಮಗೆ ನಾನು ಸಲುಗೆಯನ್ನು ಕೊಡಲಿಲ್ಲ. ಏಕೆಂದರೆ ನೀವು ಹಿಂದೆ ನಿಮ್ಮ ತಂದೆ ಕೊಟ್ಟ ಸಲುಗೆಯಿಂದ ಉನ್ಮತ್ತರಾಗಿ ಕೆಟ್ಟು ಹೋದಿರಿ. ಇಲ್ಲೂ ಸಹ ಎಲ್ಲಿಯಾದರೂ ಸೊಕ್ಕಿ ಕೆಟ್ಟುಹೋಗುವಿರೆಂದು ಭಾವಿಸಿ, ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಕಾರಣದಿಂದ ಸಲುಗೆ ಕೊಡಲಿಲ್ಲ. ಇದಕ್ಕೆ ಕೋಪಗೊಳ್ಳದಿರಿ, ನನ್ನನ್ನು ಕ್ಷಮಿಸಿ ಎಂದು ಅವರಿಗೆ ವಸ್ತ್ರಾಭರಣಗಳನ್ನು, ಪ್ರಯಾಣಕ್ಕೆ ಬೇಕಾಗುವ ಬುತ್ತಿಯನ್ನು ಕೊಟ್ಟು ಕಳುಹಿಸುವ ಸಂದರ್ಭದಲ್ಲಿ ಹಿರಿಯವನಾದ ಅಗ್ನಿಭೂತಿಯು ಮಾವನು ನಮಗೆ ಸಲುಗೆ ಕೊಡದೆ ಇಬ್ಬರನ್ನೂ ಯೋಗ್ಯರನ್ನಾಗಿ ಮಾಡಿದನು ಎಂದು ಸಂತೋಷಪಟ್ಟನು.

ಕಿರಿಯವನಾದ ವಾಯುಭೂತಿ ತಮಗೆ ಸೂರ್ಯಮಿತ್ರನು ಮಾಡಿದುದೆಲ್ಲವೂ ಅಪಕಾರವೆಂದೇ ಬಗೆದನು. " ನಾವು ಭಿಕ್ಷೆ ಬೇಡಿ ತಂದ ಅನ್ನಕ್ಕೆ ಸೇರಿಸಲು ಎಣ್ಣೆಯನ್ನಾಗಲಿ, ಉಪ್ಪನ್ನಾಗಲಿ, ಮಜ್ಜಿಗೆಯನ್ನಾಗಲಿ ನಮಗೆ ಎಂದಿಗೂ ಕೊಡಲೂ ಇಲ್ಲ ಕೊಡಿಸಲೂ ಇಲ್ಲ. ಕೆರೆ ಹೋಗಿ ಸ್ನಾನ ಮಾಡುವ ಸಂದರ್ಭದಲ್ಲಿ ತಲೆಗೆ ಹಚ್ಚಲು ಎಣ್ಣೆಯನ್ನಾದರೂ ನೀಡಲಿಲ್ಲ. ತಾನಾದರೋ ದಿವ್ಯವಾದ ಆಹಾರಗಳನ್ನು ಪ್ರತಿದಿನವೂ ನೆಂಟರನ್ನು, ಆಳುಗಳನ್ನು ಕೂಡಿಕೊಂಡು ಉಣ್ಣುತ್ತಿದ್ದನು. ಹಬ್ಬದ ದಿವಸದಲ್ಲಾದರೂ ಇವರಿಗೆ ಊಟ ಹಾಕಿ ಎಂದು ಹೇಳಲಿಲ್ಲ. ಇವನು ಪಂಚ ಮಹಾಪಾತಕ ಮಾಡಿದನು. ನಮ್ಮನ್ನು ಏಳೆಂಟು ವರ್ಷಗಳವರೆಗೆ ಶತ್ರುಗಳಂತೆ ದಂಡಿಸಿದನೆಂದು ಮನದಲ್ಲಿ ತಿಳಿದು ವಾಯುಭೂತಿಯು ಕೋಪದಿಂದ ವಂದಿಸಿ ಹೊರಟು ಹೋದನು.

## ಈ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

**1. "ಕಣ್ಣ ನೀರಂ ತೀವಿ ನೆಲನಂ ಬರೆಯುತ್ತಿರೆ"**

**ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ವಿರಚಿತ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಅತಿಬಲ ಮಹಾರಾಜನು ಸೋಮಶರ್ಮನ ಸಾವಿನ ನಂತರ ಕರೆಸಿ, ಪೂರ್ಣ ಸ್ನಾನ ಮಾಡಿಸಿ, ಬಟ್ಟೆಯುಡಿಸಿ, ತಕ್ಕ ಭೂಷಣಗಳನ್ನು ಕೊಡಿಸಿ ಊಟ ಮಾಡಿಸಿದನು. ತಾಂಬೂಲ ಕೊಟ್ಟು ನೀವು ದುಃಖ ಪಡದಿರಿ ಎಂದು ಸಮಾಧಾನ ಹೇಳಿ ಮನೆಗೆ ಕಳುಹಿಸಿಕೊಟ್ಟನು. ಕೆಲವು ದಿನಗಳ ನಂತರ ಅವರನ್ನು ಕರೆಯಿಸಿ ನೀವು ಯಾವ ವಿದ್ಯೆಗಳನ್ನು ಬಲ್ಲಿರಿ? ಎಂದು ವಿಚಾರಿಸಿದನು. ಆಗ ಅವರು ತಲೆ ಬಗ್ಗಿಸಿ ಮಾತನಾಡದೇ ಕಣ್ಣೀರನ್ನು ತುಂಬಿ, ನಾಚಿಕೆಯಿಂದ ಕಾಲ ಬೆರಳಿನಿಂದ ನೆಲದ ಮೇಲೆ ಬರೆಯುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ನಾವು ಯಾವ ವಿದ್ಯೆಗಳನ್ನು ತಿಳಿದಿಲ್ಲ ಎಂದು ನಾಚಿಕೆಯಿಂದ ತಲೆ ತಗ್ಗಿಸಿ ನಿಂತಿರುವ ಭಾವ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**2. "ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಟ್ಟಿಯೊಳ್ ಬಂದಿರಪ್ಪೊಡೆ "**

**ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ವಿರಚಿತ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಸೂರ್ಯಮಿತ್ರನು ಕಾಶ್ಯಪಿಯ ಪತ್ರ ಓದಿ ತಿಳಿದ ಮೇಲೆ ಅಗ್ನಿಭೂತಿ ವಾಯುಭೂತಿಯರಿಗೆ ಸಲುಗೆ ಕೊಟ್ಟೆನಾದರೆ ಮೊದಲಿನಂತೆ ಗರ್ವಿಷ್ಠರಾಗಿ ಹಾಳಾಗುವರೆಂದು ಮನದಲ್ಲಿ ಯೋಚಿಸಿ, ಹೀಗೆಂದನು –" ನನಗೆ ಕಾಶ್ಯಪಿಯೆಂಬ ತಂಗಿಯೂ ಸೋಮಶರ್ಮನೆಂಬ ಮೈದುನನೂ ಇಲ್ಲ. ಸೂರ್ಯಮಿತ್ರನೆಂಬ ಹೆಸರಿದೆ. ನಿಮ್ಮ ಮಾವನಾದ ಸೂರ್ಯಮಿತ್ರನು ನಾನಲ್ಲ.

ನೀವು ಯಾರಾದರೇನು? ವಿದ್ಯಾರ್ಥಿಗಳಾಗಿ ವಿದ್ಯೆ ಕಲಿಯುತ್ತೇವೆ ಎಂಬ ಪ್ರೀತಿಯಿಂದ ಬಂದಿರುವುದಾದರೆ ಅಡ್ಡಿಯಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಇಲ್ಲಿ ಸೂರ್ಯಮಿತ್ರನ ಸಮಯಪ್ರಜ್ಞೆ, ಮುಂದಾಲೋಚನೆ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**3. "ಪಸರಂಗೊಟ್ಟೆನಿಲ್ಲಿದರ್ಕ್ಕೆ ಮುಳಿಯದಿರಿಂ"**

**ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ವಿರಚಿತ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಗೆ ನಿಮ್ಮ ಅನುಗ್ರಹದಿಂದ ನಾವು ಎಲ್ಲಾ ಶಾಸ್ತ್ರಗಳನ್ನು ಕಲಿತು ವಿದ್ವಾಂಸರಾದೆವು. ಇನ್ನು ನಾವು ನಮ್ಮ ನಾಡಿಗೆ ತೆರಳುವುವು ಎಂದು ಉಪಾಧ್ಯಾಯರಿಗೆ ವಂದಿಸಿ, ನಮಸ್ಕರಿಸಿ ಹೊರಟಾಗ ಸೂರ್ಯಮಿತ್ರನು ಹೀಗೆಂದನು –" ನೀವು ನನ್ನ ತಂಗಿಯ ಮಕ್ಕಳು. ನನಗೆ ಸೋದರ ಅಳಿಯಂದಿರಾಗುವಿರಿ. ನಿಮಗೆ ನಾನು ಸಲುಗೆಯನ್ನು ಕೊಡಲಿಲ್ಲ. ಏಕೆಂದರೆ ನೀವು ಹಿಂದೆ ನಿಮ್ಮ ತಂದೆ ಕೊಟ್ಟ ಸಲುಗೆಯಿಂದ ಉನ್ಮತ್ತರಾಗಿ ಕೆಟ್ಟು ಹೋದಿರಿ. ಇಲ್ಲೂ ಸಹ ಎಲ್ಲಿಯಾದರೂ ಸೊಕ್ಕಿ ಕೆಟ್ಟುಹೋಗುವಿರೆಂದು ಭಾವಿಸಿ, ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಕಾರಣದಿಂದ ಸಲುಗೆ ಕೊಡಲಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಸೊಕ್ಕು ತಲೆಗೇರಿದರೆ ಯಾವ ವಿದ್ಯೆಗಳನ್ನೂ ಕಲಿಯಲು ಸಾಧ್ಯವಿಲ್ಲ ಎಂಬ ತಂತ್ರ ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

**4. "ಪಂಡಿತಜನಮೆಲ್ಲಂ ಮೆಚ್ಚಿ ಬಿಚ್ಚಳಿಸಿ"**

**ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ವಿರಚಿತ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಪಂಡಿತರಾದ ಅಗ್ನಿಭೂತಿ ವಾಯುಭೂತಿಯರು ಕೌಶಂಬಿ ತಲುಪಿ, ತಮ್ಮ ಮನೆ ಹೊಕ್ಕು ತಾಯಿಯನ್ನು ಕಂಡು ವಂದಿಸಿದರು. ತಾವು ವಿದ್ವಾಂಸರಾಗಿ ಬಂದುದನ್ನು ತಿಳಿಸಿದರು. ಸ್ನಾನ ಊಟ ಮಾಡಿ ವಿಶ್ರಾಂತಿ ಪಡೆದರು. ಒಳ್ಳೆಯ ದಿನ ವಾರ ನಕ್ಷತ್ರದಲ್ಲಿ ಇಬ್ಬರು ಅತಿಬಲ ಮಹಾರಾಜನಲ್ಲಿಗೆ ಬಂದು ಬೇರೆಬೇರೆಯಾಗಿ ಸ್ತುತಿ ರಚನೆ ಮಾಡಿದರು. ಕ್ರಿಯ ಕಾರಕ ಸಂಬಂಧದಿಂದ ವ್ಯಾಖ್ಯಾನಿಸಿ ತಮ್ಮ ಪಾಂಡಿತ್ಯವನ್ನು ಪ್ರಕಟಿಸಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ವಿದ್ಯೆಯಿಂದ ಪದವಿ, ಗೌರವ ಎಲ್ಲವೂ ದೊರೆಯುವುವು ಎಂಬುದು ಮೇಲಿನ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**ಉ. ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

ಅ) ಭರತಕ್ಷೇತ್ರದೊಳ್ : ಸಪ್ತಮಿ :: ನೆಲನಂ : ________________

ಆ) ಪಸರ : ಸಲುಗೆ :: ತುಟೆಲ್ : ________________

ಇ) ಬುದ್ದಿಯೊಡೆಯ : ಆಗಮ ಸಂಧಿ :: ನೋಡಿದರೆಲ್ಲರ : ________________

ಈ) ಕಪ್ಪಡಮುಟ್ಟು : ಕ್ರಿಯಾಸಮಾಸ :: ಸಪ್ತವ್ಯಸನಗಳು : ________________

**ಉತ್ತರಗಳು:– ಅ. ದ್ವಿತೀಯ, ಆ. ನಮಸ್ಕಾರ, ಇ. ಲೋಪಸಂಧಿ, ಈ. ದ್ವಿಗು ಸಮಾಸ**

## ಭಾಷಾ ಚಟುವಟಿಕೆ

**ಅ. ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.**

**ಶೌಚಾಚಾರಗಳು**= ಶೌಚ+ಆಚಾರಗಳು – ಸವರ್ಣದೀರ್ಘ ಸಂಧಿ

**ನೋಡಿದರೆಲ್ಲರ**= ನೋಡಿದರು+ ಎಲ್ಲರ – ಲೋಪಸಂಧಿ

**ತಂಗೆಯಿಲ್ಲ** = ತಂಗೆ+ಇಲ್ಲ –ಆಗಮಸಂಧಿ

**ವ್ಯಸನಾಭಿಭೂತ** = ವ್ಯಸನ+ಅಭಿಭೂತ – ಸವರ್ಣದೀರ್ಘ ಸಂಧಿ

**ಇ. ಕೊಟ್ಟಿರುವ ವಿಷಯಗಳನ್ನು ಕುರಿತು ಪ್ರಬಂಧ ಬರೆಯಿರಿ.**

1. ಮಹಿಳಾ ಸಬಲೀಕರಣ

**ಪೀಠಿಕೆ :–** ಸಮಾಜದಲ್ಲಿ ಯಾವುದೇ ತಾರತಮ್ಯವನ್ನು ಮಾಡದೆ ಪುರುಷರಿಗೆ ಇರುವಂತೆ ಸಮಾನವಾದ ಅವಕಾಶಗಳನ್ನು ಮಹಿಳೆಯರಿಗೆ ನೀಡಿ ಅವರಲ್ಲಿ ಬಲವನ್ನು ತುಂಬುವುದೇ ಮಹಿಳಾ ಸಬಲೀಕರಣ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ವರ ಬಲವನ್ನು ಹೆಚ್ಚಿಸಿ ಅವರಲ್ಲಿ ಆತ್ಮವಿಶ್ವಾಸವನ್ನು ತುಂಬುವುದೇ ಆಗಿದೆ.

**ವಿಷಯ ನಿರೂಪಣೆ :–** ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನವಾದ ಸಾಮರ್ಥ್ಯ ಹೊಂದಿದ್ದು, ಕಾರಣಾಂತರಗಳಿಂದ ವಂಚಿತರಾಗಿದ್ದಾರೆ. ಅವರನ್ನು ಸಬಲರನ್ನಾಗಿ ಮಾಡಬೇಕಿದೆ. ಈ ಉದ್ದೇಶದಿಂದ ಸರ್ಕಾರವು ಹಲವು ಯೋಜನೆಗಳನ್ನು ಜಾರಿಗೊಳಿಸಿದೆ.

ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯದಲ್ಲಿ ಮೀಸಲಾತಿ ನೀಡಿದೆ.

ಸ್ತ್ರೀಶಕ್ತಿ ಯೋಜನೆ, ಮಹಿಳಾ ಸ್ವಸಹಾಯ ಸಂಘಗಳು ಸ್ಥಾಪನೆಯಾಗಿವೆ.

ಭಾಗ್ಯಲಕ್ಷ್ಮೀ ಯೋಜನೆ, ಸುಕನ್ಯಾ ಸಮೃದ್ಧಿ ಯೋಜನೆಗಳು

ನಾರಿಶಕ್ತಿ ಪುರಸ್ಕಾರ

ಕೆಲಸದ ಸ್ಥಳದಲ್ಲಿ ಲಿಂಗಾಧಾರಿತ ತಾರತಮ್ಯದ ನಿಷೇಧ ಮಾಡಲಾಗಿದೆ.

ದೌರ್ಜನ್ಯ ಮತ್ತು ಶೋಷಣೆಯಿಂದ ಕಾನೂನಿನ ರಕ್ಷಣೆ ಇತ್ಯಾದಿ ಕ್ರಮಗಳ ಮೂಲಕ ಪುರುಷರಿಗೆ ಸರಿಸಮಾನವಾದ ಅವಕಾಶಗಳನ್ನು ನೀಡುತ್ತಾ ಸಶಕ್ತರನ್ನಾಗಿ ಮಾಡಲಾಗುತ್ತಿದೆ.

**ಉಪಸಂಹಾರ :–** ಯಾವುದೇ ಮಿತಿ ನಿರ್ಬಂಧಗಳಿಲ್ಲದೆ ಶಿಕ್ಷಣ, ಉದ್ಯೋಗ, ಜೀವನಶೈಲಿ ಮೊದಲಾದ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಪಡೆಯಲು ಸಾಧ್ಯವಾದಾಗ ಮಹಿಳೆಯುರು ಸಬಲರಾಗುತ್ತಾರೆ. ಇದು ಅರಿವು, ಶಿಕ್ಷಣ, ತರಬೇತಿಗಳ ಮೂಲಕ ಅವರ ಸ್ಥಾನಮಾನವನ್ನು ಹೆಚ್ಚಿಸುವುದನ್ನು ಒಳಗೊಂಡಿದೆ.

## 2. ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ತ

**ಪೀಠಿಕೆ :–** ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರುತ್ತದೆ ಎನ್ನುವಂತೆ ಶಾಲಾ ಮಕ್ಕಳು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಲು ಅಕ್ಷರದಾಸೋಹ ಮತ್ತು ಕ್ಷೀರಭಾಗ್ಯಗಳಂತಹ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸಿವೆ.

**ವಿಷಯ ನಿರೂಪಣೆ :–** ಅಕ್ಷರ ದಾಸೋಹ ಎಂಬುದು ಶಾಲಾ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡುವ ಯೋಜನೆಯಾಗಿದೆ. ಅದೇ ರೀತಿ ಕ್ಷೀರಭಾಗ್ಯ ಎಂಬುದು ಹಾಲು ನೀಡುವ ಯೋಜನೆಯಾಗಿದೆ.

**ಉದ್ದೇಶಗಳು:**

*.ಪ್ರತಿ ಮಗು ಉಪವಾಸವಿರಬಾರದು, ಅಪೌಷ್ಠಿಕತೆಯಿಂದ ಬಳಲಬಾರದು

*.ಶಾಲೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಚಟುವಟಿಕೆಯಿಂದ ಇರಲು ಮತ್ತು ಕಲಿಕೆಯಲ್ಲಿ ಆಸಕ್ತಿ ಹೊಂದಲು ಸಹಾಯಕ

*.ಶಿಕ್ಷಣದಿಂದ ವಂಚಿತರಾಗದಂತೆ ತಡೆಯುವುದು.

*.ಮಕ್ಕಳನ್ನು ಶಾರೀರಿಕವಾಗಿ ಹಾಗೂ ಬೌದ್ಧಿಕವಾಗಿ ಸದೃಢರನ್ನಾಗಿ ಮಾಡುವುದು.

ಈ ಯೋಜನೆಗಳು ಬಂದ ನಂತರ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಪ್ರಮಾಣ ಹೆಚ್ಚಾಗಿ ಶಿಕ್ಷಣದ ಗುಣಮಟ್ಟ ಸುಧಾರಣೆಯಾಗಿದೆ.

**ಉಪಸಂಹಾರ :–** ಮಕ್ಕಳು ದೇಶದ ಸಂಪತ್ತು ಆಗಬೇಕಾದರೆ ಅವರಲ್ಲಿ ಶಿಕ್ಷಣ ವೃದ್ಧಿಯಾಗಬೇಕು. ಶಿಕ್ಷಣದಲ್ಲಿ ಆಸಕ್ತಿಯಾಗಬೇಕಾದರೆ ಮಾನಸಿಕವಾಗಿ ಸದೃಢರಾಗಬೇಕು, ಮಾನಸಿಕವಾಗಿ ಸದೃಢವಾಗಬೇಕಾದರೆ ಪೌಷ್ಠಿಕತೆ ಅವಶ್ಯಕ. ಅಂತಹ ಪೌಷ್ಠಿಕತೆ ದೊರೆಯಬೇಕಾದರೆ ಇಂತಹ ಯೋಜನೆಗಳು ಸಹಕಾರಿಯಾಗುತ್ತವೆ.

# ಪದ್ಯ ಭಾಗ

# ಪದ್ಯ ಪಾಠ –೫ ಹಸಿರು. –ಕುವೆಂಪು.

**ಕುವೆಂಪು** ಕಾವ್ಯನಾಮದಿಂದ ಪ್ರಸಿದ್ಧರಾದ **ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ** ಅವರು ಕ್ರಿ.ಶ. 1904 ಡಿಸೆಂಬರ್ 29ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ **ಕುಪ್ಪಳ್ಳಿಯಲ್ಲಿ** ಜನಿಸಿದರು. ಇವರು **' ಕೊಳಲು, ಪಾಂಚಜನ್ಯ, ಪ್ರೇಮ ಕಾಶ್ಮೀರ, ಪಕ್ಷಿಕಾಶಿ , ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದು ಮಗಳು, ಯಮನ ಸೋಲು, ಬೆರಳ್ಗೆ ಕೊರಳ್, ನೆನಪಿನ ದೋಣಿಯಲ್ಲಿ, ಶ್ರೀರಾಮಾಯಣ ದರ್ಶನಂ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ ,ರಾಷ್ಟ್ರಕವಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ,** ಮೊದಲಾದ ಪ್ರಶಸ್ತಿಗಳು ಲಭಿಸಿವೆ.

## ಮೌಲ್ಯವನ್ನಾಧರಿಸಿ ಪದ್ಯದ ಸಾರಾಂಶ.:–

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸುರಾದುದೊ ಕವಿಯಾತ್ಮಂ
ರಸಪಾನ ಸ್ನಾನದಲಿ!

ಕುವೆಂಕು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಅಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು ಆನಂದದಿಂದ ಸವಿದ ಪ್ರಕೃತಿಯ ಹಚ್ಚಹಸುರಿನ ಸೌಂಧರ್ಯ ಅನುಭೂತಿಯು ಆ ಪದ್ಯದಲ್ಲಿ ಭಾವಪೂರ್ಣವಾಗಿ ಮೂಡಿ ಬಂದಿದೆ. ಅಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನ ಅಚ್ಚಹಸುರಿನ ನೋಟ ಕವಿಯ ಆತ್ಮವನ್ನು ಹಸುರಾಗಿಸಿ/ಶಾಂತವಾಗಿಸಿ ಆನಂದಾನುಭೂತಿಯನ್ನು ಹೊಂದಿ ರಸಾನುಭವವನ್ನು ಅನುಭವಿಸುತ್ತಿತ್ತು ಎನ್ನುವುದನ್ನು ಈ ನುಡಿ ಅಭಿವ್ಯಕ್ತಪಡಿಸುತ್ತದೆ.

ಪ್ರಕೃತಿ, ಪ್ರೇಮ, ಮನಶ್ಯಾಂತಿ ಮತ್ತು ಆನಂದಾನುಭವ ಎಂಬ ಮೌಲ್ಯಗಳು ಈ ಪದ್ಯದಲ್ಲಿ ಅಭಿವ್ಯಕ್ತಗೊಂಡಿವೆ.

ಅಶ್ವೀಜದ ಶಾಲಿವನದ
ಗಿಳಿಯೆದೆ ಬಣ್ಣದ ನೋಟ;
ಅದರೆಡೆಯಲಿ ಬನದಂಚಲಿ
ಕೊನೆವೆತ್ತಡಕೆಯ ತೋಟ!

ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯ ಹಸಿರು ಕವಿಗೆ ಭತ್ತದ ಗದ್ದೆಯೂ ಗಿಳಿಯ ಬಣ್ಣದಂತೆ ಕಂಗೊಳಿಸುತ್ತದೆ.ಬತ್ತದ ಗದ್ದೆಯ ಕೊನೆಯಲ್ಲಿರುವ ಕಾಡಿನ ಪಕ್ಕದ ಹಸುರಾದ ಅಡಿಕೆಯ ತೋಟ ಕಣ್ಮನಗಳಿಗೆ ಆನಂದವನ್ನುಂಟು ಮಾಡಿ ಆನಂದಾನುಭೂತಿಯನ್ನು ಹೊಂದಿ ರಸಾನುಭವವನ್ನು ಅನುಭವಿಸುತ್ತಿತ್ತು ಎಂದು ಅಭಿವ್ಯಕ್ತವಾಗಿದೆ.

ಕುವೆಂಕು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಅಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು ಆನಂದದಿಂದ ಸವಿದ ಪ್ರಕೃತಿಯ ಹಚ್ಚಹಸುರಿನ ಸೌಂಧರ್ಯ ಅನುಭೂತಿಯು ಆ ಪದ್ಯದಲ್ಲಿ ಭಾವಪೂರ್ಣವಾಗಿ ಮೂಡಿ ಬಂದಿದೆ.

ಪ್ರಕೃತಿ, ಪ್ರೇಮ, ಮನಶ್ಯಾಂತಿ ಮತ್ತು ಆನಂದಾನುಭವ ಎಂಬ ಮೌಲ್ಯಗಳು ಈ ಪದ್ಯದಲ್ಲಿ ಅಭಿವ್ಯಕ್ತಗೊಂಡಿವೆ.

ಅದೊ ಹುಲ್ಲಿನ ಮಕಮಲ್ಲಿನ
ಪೊಸಪಚ್ಚೆಯ ಜಮಖಾನೆ
ಪಸರಿಸಿ ತಿರೆ ಮೈ ಮುಚ್ಚಿರೆ
ಬೇರೆ ಬಣ್ಣವನೆ ಕಾಣೆ!

ಕುವೆಂಕು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಅಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು ಆನಂದದಿಂದ ಸವಿದ ಪ್ರಕೃತಿಯ ಹಚ್ಚಹಸುರಿನ ಸೌಂಧರ್ಯ ಅನುಭೂತಿಯು ಆ ಪದ್ಯದಲ್ಲಿ ಭಾವಪೂರ್ಣವಾಗಿ ಮೂಡಿ ಬಂದಿದೆ.

ನವರಾತ್ರಿಯಲ್ಲಿ  ಹಸುರಿನಿಂದ ಕೂಡಿದ ಪ್ರಕೃತಿಯಲ್ಲಿ, ಮಲೆನಾಡಿನಲ್ಲಿ ಭೂಮಿಯ ತುಂಬ ಹೊಸ ಹಸುರು ಬಣ್ಣದ ಮಕಮಲ್ಲಿನ ಜಮಖಾನೆಯನ್ನು ಹರಡಿಸಿ, ಭೂದೇವಿಯ ಮೈಮುಚ್ಚುವಂತೆ ಕಾಣುತ್ತದೆ.ಆದ್ದರಿಂದ ಇಲ್ಲಿ ಬೇರೆ ಬಣ್ಣಗಳು ಕಂಡುಬರದೆ ಹಸುರಿನ ಆನಂದಾನುಭೂತಿಯನ್ನು ಹೊಂದಿ ಮನಸ್ಸು ರಸಾನುಭವವನ್ನು ಅನುಭವಿಸುತ್ತಿತ್ತು.

ಪ್ರಕೃತಿ, ಪ್ರೇಮ, ಮನಶ್ಯಾಂತಿ ಮತ್ತು ಆನಂದಾನುಭವ ಎಂಬ ಮೌಲ್ಯಗಳು ಈ ಪದ್ಯದಲ್ಲಿ ಅಭಿವ್ಯಕ್ತಗೊಂಡಿವೆ.

ಹಸುರತ್ತಲ್ ! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್ ನೆತ್ತರ್ ಒಡಲಿನಲಿ!

ಕುವೆಂಕು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಅಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು ಆನಂದದಿಂದ ಸವಿದ ಪ್ರಕೃತಿಯ ಹಚ್ಚಹಸುರಿನ ಸೌಂಧರ್ಯ ಅನುಭೂತಿಯು ಆ ಪದ್ಯದಲ್ಲಿ ಭಾವಪೂರ್ಣವಾಗಿ ಮೂಡಿ ಬಂದಿದೆ.

ನವರಾತ್ರಿಯಲ್ಲಿ ಮಲೆನಾಡಿನಲ್ಲಿ ಎತ್ತ ನೋಡಿದರೂ ಹಸುರು ಅತ್ತ ನೋಡಿದರೂ ಹಸುರು,  ಎಲ್ಲೆಲ್ಲೂ ಹಸುರಿನ ಸಾಗರ ಕಂಡು ಬರುತ್ತದೆ. ಇದರಿಂದ ಕವಿಯ ಆತ್ಮ ಒಡಲು, ನೆತ್ತರು ಹಸುರುಗಟ್ಟಿ ಶಾಂತತೆಯಿಂದ ಕೂಡಿ ಅನಂದಾನುಭೂತಿಯನ್ನು ಅನುಭವಿ, ರಸಾನುಭವವನ್ನು ಅನುಭವಿಸುತ್ತಿತ್ತು ಎಂದು ಪ್ರಸ್ತುತ ನುಡಿಯಲ್ಲಿ ಅಭೀವ್ಯಕ್ತಗೊಂಡಿದೆ.

ಪ್ರಕೃತಿ, ಪ್ರೇಮ, ಮನಶ್ಯಾಂತಿ ಮತ್ತು ಆನಂದಾನುಭವ ಎಂಬ ಮೌಲ್ಯಗಳು ಈ ಪದ್ಯದಲ್ಲಿ ಅಭಿವ್ಯಕ್ತಗೊಂಡಿವೆ.

## ಅಭ್ಯಾಸ

## ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

**1. ಆಶ್ವಯುಜ ಬತ್ತದ ಗದ್ದೆಯ ಬಣ್ಣ ಯಾವ ಹಸಿರಿನಂತಿದೆ?**

ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ.

**2. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?**

ಕವಿಯು ನೋಡಿದ ಅಡಕೆಯ ತೋಟ ವನದಂಚಿನಲ್ಲಿದೆ.

**3. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?**

'ಹಸುರು' ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.

**4. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?**

ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಹೊಸ ಪಚ್ಚೆಯ ಜಮಖಾನೆಯ ರೀತಿ ಇದೆ.

## ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?

**ಕವಿಗೆ ನವರಾತ್ರಿಯಲ್ಲಿ, ಹಸುರಿನಿಂದ ಕಂಗೊಳಿಸುವ ಭೂಮಿಯಲ್ಲಿ, ನೀಲ ಸಮುದ್ರದಲ್ಲಿ ಹಸುರಾದ ಕವಿಯ ಹೃದಯಕ್ಕೆ 'ಆಗಸ ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು, ಕಾಡಂಚಿನ ಅಡಕೆಯ ತೋಟ, ಹೂವಿನ ಕಂಪಿನಲ್ಲಿ, ಎಲರಿನ ತಂಪಿನಲ್ಲಿ, ಹಕ್ಕಿಯ ಕೊರಳಿನಲ್ಲಿ, ಹೀಗೆ ಆಗಸದಿಂದ ಬಿಸಿಲವರೆಗೂ ಕವಿಗೆ ಹಸುರು ಕಾಣುತ್ತಿದೆ.**

2. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ' ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?

**ಹಸುರಾದ ಭೂಮಿ, ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು, ಕಾಡಂಚಿನ ಅಡಕೆಯ ತೋಟ ಇವೆಲ್ಲಾ ಕಣ್ಣಿಗೆ ಗೋಚರವಾದರೆ ಹೂವಿನ ಕಂಪಿನ ಹಸುರು ಮೂಗಿಗೆ, ಎಲರಿನ ತಂಪಿನ ಸ್ಪರ್ಷ ಚರ್ಮಕ್ಕೆ, ಹಕ್ಕಿಯ ಕೊರಳಿನ ಚಿಲಿಪಿಲಿ ಗಾನ ಕಿವಿಗೆ, ಶ್ಯಾಮಲ ಸಮುದ್ರದ ಹಸುರು ಕವಿಯಾತ್ಮಕ್ಕೆ ರಸಪಾನ ಮಾಡಿದಂತಾದುದು ನಾಲಗೆಗೆ, ಹೀಗೆ ಪ್ರಕೃತಿಯ ಹಸುರು ಸಕಲ ಇಂದ್ರಿಯಗಳನ್ನೂ ವ್ಯಾಪಿಸಿದೆ ಎಂಬುದನ್ನು ಕವಿ ಕುವೆಂಪು ಅಭೂತಪೂರ್ವವಾಗಿ ವರ್ಣಿಸಿದ್ದಾರೆ.**

3. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?

**ಕವಿಯಾತ್ಮವು ಹಸುರುಗಟ್ಟಲು ಆಶ್ವಯುಜ ಮಾಸದ ವಿಶಾಲವಾದ ಶಾಮಲ ಕಡಲು, ಹಸುರಾಗಸ, ಹಸುರು ಮುಗಿಲು, ಹಸುರು ಗದ್ದೆಯ ಬಯಲು, ಹಸುರು ಮಲೆ, ಹಸುರು ಕಣಿವೆ, ಸಂಜೆಯ ಬಿಸಿಲು, ಅಶ್ವೀಜದ ಶಾಲಿವನದ ಗಿಳಿಯ ಹಸುರು ಬಣ್ಣದ ನೋಟ, ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ, ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾಲೆ ಪಸರಿಸಿದಂತೆ ಭೂಮಿಯು ಹಸುರುಟ್ಟಿದ್ದು ಹೊಸ ಹೂವಿನ ಕಂಪು, ತಂಗಾಳಿಯ ತಂಪು, ಹಕ್ಕಿಯ ಇಂಪಾದ ಗಾನ, ಎತ್ತೆತ್ತ ನೋಡಿದರೂ ಹಸುರು ಹಸುರು ಹಸುರು ಇವೆಲ್ಲಾ ಕವಿಯಾತ್ಮ ಹಸುರುಗಟ್ಟಲು ಕಾರಣವಾದ ಅಂಶಗಳಾಗಿವೆ.**

## ಸಂದರ್ಭದೊಂದಿಗೆ ಸ್ವಾರಸ್ಯವನ್ನೂ ಬರೆಯಿರಿ.

**1. "ಹಸುರಾದುದು ಕವಿಯಾತ್ಮಂ"**

**ಆಯ್ಕೆ:– ಈ ವಾಕ್ಯವನ್ನು ಕುವೆಂಪು ಅವರ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು" ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.**

ಸಂದರ್ಭ:– ನವರಾತ್ರಿಯ ನವಧಾತ್ರಿಯ ಈ ಶಾಮಲ ವರ್ಣದ ಕಡಲಿನಲ್ಲೂ ಕವಿಯ ಆತ್ಮ ಹಸುರಾಯಿತು. ರಸಪಾನದಲ್ಲಿ ಮಿಂದಿತು, ಎಂದು ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ:– ನವರಾತ್ರಿಯ ಕಪ್ಪು ಕಡಲಿನಲ್ಲೂ ಹಸುರನ್ನು ಕಾಣುವ ಕುವೆಂಪು ಅವರ ಕವಿಯಾತ್ಮದ ಪ್ರಕೃತಿಯ ರಸಸ್ವಾದನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**2. "ಬೇರೆ ಬಣ್ಣವೆನೆ ಕಾಣೆ'**

**ಆಯ್ಕೆ: ಈ ವಾಕ್ಯವನ್ನು ಕುವೆಂಪು ಅವರ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು" ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.**

ಸಂದರ್ಭ:– ಅಶ್ವಯುಜ ಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ತೊಟ; ಅದರ ಪಕ್ಕದಲ್ಲೇ ಕಾಡಂಚಿನ ಫಲಭರಿತ ಅಡಕೆಯ ತೋಟ ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನ ಹರಡಿದಂತೆ ಭೂಮಿಯು ಹಸುರುನಿಂದ ಮೈಮುಚ್ಚಿರುವ ಬಗೆಯನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ:– ಭೂಮಿಯ ಮೆಲೆ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ ಕವಿಯ ರಸಸ್ವಾದನೆಯ ಔಚಿತ್ಯವು ಸ್ವಾರಸ್ಯಪೂರ್ಣವಾಗಿದೆ.

3. "ಹಸುರು ಹಸುರಿಳೆಯುಸಿರು"

ಆಯ್ಕೆ:– ಈ ವಾಕ್ಯವನ್ನು ಕುವೆಂಪು ಅವರ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು" ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಹೊಸ ಹೂವಿನ ಕಂಪು, ಬೀಸುವ ಗಾಳಿಯ ತಂಪು, ಹಕ್ಕಿಯ ಕೊರಲಿನಂದ ಹೊರಟ ಗಾನದ ಇಂಪು, ಅಲ್ಲದೆ ಇಡೀ ಭೂಮಿಯ ಶ್ವಾಸವೆಲ್ಲಾ ಹಸುರುಮಯವಾಗಿದೆ ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಕವಿಯ ಏಕತಾ ದೃಷ್ಟಿಯಲ್ಲಿ ಎಲ್ಲದರಲ್ಲೂ ಹಸುರೇ ಕಾಣುತ್ತದೆ.

ಸ್ವಾರಸ್ಯ:– ಹಸುರು ಸರ್ವೇಂದ್ರಿಯಗಳನ್ನೂ ವ್ಯಾಪಿಸಿದೆ ಎಂದು ವರ್ಣಿಸಿರುವ ಕವಿಯ ಕಲ್ಪನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

4. "ಹಸುರತ್ತಲ್ ಹಸುರಿತ್ತಲ್, ಹಸುರೆತ್ತಲ್"

ಆಯ್ಕೆ:– ಈ ವಾಕ್ಯವನ್ನು ಕುವೆಂಪು ಅವರ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು" ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಅತ್ತ–ಇತ್ತ–ಎತ್ತಲ್ಲೂ ಹಸುರೇ ಆವರಿಸಿರುವುದನ್ನು ಕವಿ ದೃಷ್ಟಿಯಿಂದ ನೋಡಿದ ಕುವೆಂಪು ಅವರು "ಕಡಲಿನಲ್ಲಿ ಎಲ್ಲೆಲ್ಲೂ ಹಸುರೇ ಹಸುರು, ಕವಿಯ ಆತ್ಮ ಹಸುರು ನೆತ್ತರಿನಿಂದ ಹಸುರುಗಟ್ಟಿತು' ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಎಲ್ಲೆಲ್ಲೂ ಹಸುರನ್ನು ಕಂಡ ಕವಿಯಾತ್ಮವು ಹಸುರುಗಟ್ಟಿತಲ್ಲದೆ ಅವರ ದೇಹದಲ್ಲಿನ ರಕ್ತವೂ ಹಸುರೇ ಎಂದು ವಣಿಸಿದ್ದಾರೆ.

ಸ್ವಾರಸ್ಯ:– ಹಸುರು ಕೇವಲ ಸಸ್ಯವರ್ಗಕ್ಕೆ ಮಾತ್ರ ಸೀಮಿತವಲ್ಲ ಇಡೀ ಪ್ರಕೃತಿಯ ಚೈತನ್ಯಕ್ಕೆ ಅದೇ ಕಾರಣ. ಹಸುರು ಪ್ರಕೃತಿಗಷ್ಟೇ ಅಲ್ಲದೆ ರಕ್ತದಲ್ಲೂ ಹಸುರು ವ್ಯಾಪಿಸಿದೆ ಎನ್ನುವುದು  ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**************************

# ಪದ್ಯ ಪಾಠ ೬. ಹಲಗಲಿ ಬೇಡರು —ಜನಪದ ಸಾಹಿತ್ಯ

***ಅ) ಒಂದು ವಾಕ್ಯದಲ್ಲಿ ಉತ್ತರಿಸಿ.***

1. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?
   ಕುಂಪಣಿ ಸರ್ಕಾರದ ಅನುಮತಿ ಇಲ್ಲದೆ  ಭಾರತೀಯರು ಶಸ್ತ್ರಾಸ್ತ್ರಗಳನ್ನು  ಹೊಂದುವಂತಿಲ್ಲ ಹಾಗೂ ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂದು ಆದೇಶ ಹೊರಡಿಸಿತು.
2. ಹಲಗಲಿಯ ನಾಲ್ವರು ಪ್ರಮುಖರು ಯಾರು?
   ಬ್ಯಾಡರ ಬಾಲ, ಜಡಗ, ಪೂಜಾರಿ ಹನುಮ  ಮತ್ತು ರಾಮ ಹಲಗಲಿಯ ಪ್ರಮುಖರು.
3. ಹಲಗಲಿಯ ಗುರುತು ಉಳಿಯದಂತಾದುದು ಏಕೆ?
   ಬ್ರಿಟಿಷ್ ಸರ್ಕಾರದ ದಂಡು ಹಲಗಲಿಯ ಮೇಲೆ ದಾಳಿ ಮಾಡಿ ಬೆಂಕಿ ಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.
4. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?
   ಹಲಗಲಿ ಭಂಟರ ಹತಾರ ಕದನದ ಘಟನೆಯು ಹಲಗಲಿ ಲಾವಣಿಗೆ ಕಾರಣವಾಗಿದೆ.
5. ಹಲಗಲಿ ಗ್ರಾಮ ಎಲ್ಲಿದೆ?
   ಹಲಗಲಿ ಹಿಂದೆ ಮುಧೋಳ ಸಂಸ್ಥಾನದಲ್ಲಿದ್ದು ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.

***ಆ) ಎರಡು /ಮೂರು ವಾಕ್ಯಗಳಲ್ಲಿ ಉತ್ತರಿಸಿ.***

1. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

ಕುಂಪಣಿ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಹಾಗೂ ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂದು ಕುಂಪಣಿ ಸರ್ಕಾರ ಆದೇಶ ಹೊರಡಿಸಿತು. ಈ ಆದೇಶವನ್ನು ಪ್ರತಿಭಟಿಸಿ ಬ್ಯಾಡರ ಬಾಲ, ಜಡಗ, ಪೂಜಾರಿ ಹನುಮ, ರಾಮ ಮುಂತಾದ ಹಲಗಲಿಯ ವೀರರು ಸರ್ಕಾರದ ವಿರುದ್ಧ ದಂಗೆ ಎದ್ದರು.

2. ಹಲಗಲಿಗೆ ದಂಡು ಬರಲು ಕಾರಣವೇನು?

ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಎಂಬ ಆದೇಶವನ್ನು ಕುಂಪಣಿ ಸರ್ಕಾರ ಹೊರಡಿಸಿತು. ಈ ಆದೇಶದ ವಿರುದ್ಧ ಹಲಗಲಿಯ ವೀರರು ದಂಗೆ ಎದ್ದರು, ದಂಗೆಯನ್ನು ಹತ್ತಿಕ್ಕಲು ಬಂದ ಅಧಿಕಾರಿಗಳನ್ನು ಕೊಂದರು. ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರ ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕಳಿಸಿತು.

3. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ಮಾಡಿತು?

ಹಲಗಲಿ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು. ಎದುರಿಗೆ ಸಿಕ್ಕ ಸಿಕ್ಕವರನ್ನೆಲ್ಲ ಕೊಂದಿತು. ಬೇಡರನ್ನು ಸುತ್ತುಗಟ್ಟಿ ಅವರ ಮೇಲೆ ಗುಂಡಿನ ಮಳೆಕರೆದರು. ಗುಂಡಿನ ದಾಳಿಗೆ ಹೆದರಿದ ಕೆಲ ಬೇಡರು ಗುಡ್ಡದ ಕಡೆ ಓಡಿ ತಲೆ ಮರೆಸಿಕೊಂಡರು. ಸಿಪಾಯಿಗಳು ಊರಿಗೆ ಬೆಂಕಿ ಇಟ್ಟರು. ಊರು ಗುರುತು ಸಿಗದಂತೆ ನಾಶವಾಯಿತು.

4. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಘಟನೆಯನ್ನು ಕಥನಾತ್ಮಕವಾಗಿ ಕಟ್ಟಿದ ಹಾಡನ್ನು ಲಾವಣಿ ಎನ್ನುವರು. ಇವು ವೀರತ್ವ ಹಾಗೂ ಸಾಹಸವನ್ನು ವರ್ಣಿಸುವುದರಿಂದ ವೀರಗೀತೆಗಳು ಎನಿಸಿಕೊಂಡಿವೆ.

ಈ) ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ.

1. "ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ".

ಆಯ್ಕೆ :- ಈ ವಾಕ್ಯವನ್ನು ಡಾ।ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ :- ಕಂಪನಿ ಸರ್ಕಾರದ ಆದೇಶವನ್ನು ಪಾಲಿಸುವ ಅಧಿಕಾರಿಗಳಿಗೆ ಸರ್ಕಾರ ನೀಡಿದ ಸೂಚನೆ ಇದಾಗಿದೆ.ಲಾವಣಿಯ ಆರಂಭದಲ್ಲಿ ಹಲಗಲಿ ಬೇಡರ ದಂಗೆಗೆ ಕಾರಣ ನೀಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :- ಭಾರತೀಯರ ಮೇಲಿನ ಬ್ರಿಟಿಷರ ದರ್ಪ ಈ ಮಾತಿನಲ್ಲಿ ಸ್ವಾರಸ್ಯವಾಗಿ ಮೂಡಿ ಬಂದಿದೆ.

2. "ಜೀವ ಸತ್ತುಹೋಗುವದು ಗೊತ್ತಾ".

ಆಯ್ಕೆ :-ಈ ವಾಕ್ಯವನ್ನು ಡಾ।ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ:- ಕುಂಪಣಿ ಸರ್ಕಾರ ಆದೇಶ ಹೊರಡಿಸಿ, ಜನರಿಂದ ಆಯುಧಗಳನ್ನು ಕಿತ್ತುಕೊಳ್ಳಲು ಮುಂದಾ ಯಿತು. ಹಲಗಲಿಯ ವೀರರು ಆಯುಧಗಳನ್ನು ಕೊಡಲು ಒಪ್ಪಲಿಲ್ಲ. ನಾವು ಆಯುಧಗಳನ್ನು ನೀಡಿದರೆ ಇದ್ದೂ ಸತ್ತಂತೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :- ಹಲಗಲಿಯ ಬೇಡರು ಆಯುಧಗಳನ್ನು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ

3. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"

ಆಯ್ಕೆ :- ಈ ವಾಕ್ಯವನ್ನು ಡಾ।ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ :- ಬ್ರಿಟಿಷ್ ದಂಡು ಹಲಗಲಿ ಜನರ ಮೇಲೆ ಮನಬಂದಂತೆ ಗುಂಡು ಹಾರಿಸಿತು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :- ಬ್ರಿಟೀಷರ ಕ್ರೂರತನವನ್ನು ಸ್ವಾರಸ್ಯವಾಗಿ ವರ್ಣಿಸಲಾಗಿದೆ.

4. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು".

ಆಯ್ಕೆ :– ಈ ವಾಕ್ಯವನ್ನು ಡಾ।ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ :– ಬ್ರಿಟಿಷ್ ದಂಡು ಹಲಗಲಿಯನ್ನು ಲೂಟಿ ಮಾಡಿ ಬೆಂಕಿ ಹಚ್ಚಿ ನಾಶಗೊಳಿಸಿತು ಎಂದು ಹೇಳುವ ಸಂದರ್ಭದಲ್ಲಿ ಲಾವಣಿಕಾರ ಈ ಮಾತನ್ನು ಹೇಳಿದ್ದಾನೆ.

ಸ್ವಾರಸ್ಯ :– ಬ್ರಿಟೀಷರ ಕ್ರೂರತನವನ್ನು ವರ್ಣಿಸಲು ಅಸಾಧ್ಯ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

***ಉ) ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಬಿಟ್ಟ ಸ್ಥಳದಲ್ಲಿ ಬರೆಯಿರಿ.***

1. ಹಲಗಲಿ ಬಂಟರ ಕದನ ವೀರರಸ ಪ್ರಧಾನವಾದ -------- (ಕತೆ, ಗಾದೆ, ಒಗಟು, ಲಾವಣಿ)
2. ಹಲಗಲಿಯು ಈಗ ಈ ಜಿಲ್ಲೆಗೆ ಸೇರಿದೆ ---------- (ಬಾಗಲಕೋಟೆ, ಕಲಾದಗಿ, ಮುಧೋಳ, ಹೆಬಲಕ)
3. ಕುಂಪಣಿ ಸರ್ಕಾರ ಜಾರಿಗೆ ತಂದ ಶಾಸನ ---------- (ಯುದ್ಧಶಾಸನ, ನಿಶ್ಶಸ್ತ್ರೀಕರಣ, ಕಬುಲಶಾಸನ, ಕುರ್ತಕೋಟಿಶಾಸನ)
4. ಲಾವಣಿಕಾರ ಅಂಕಿತಗೊಳಿಸಿರುವ ದೈವ ----------- (ಕಲ್ಮೇಶ, ಹನುಮ, ರಾಮ, ಲಕ್ಷ್ಮೀಶ)
5. 'ವಿಲಾತಿ' ಪದದ ಸರಿಯಾದ ರೂಪ ---------- (ಆಯುಧ, ವಿಹಾರ, ವಿಲಂತಿ, ವಿಲಾಯಿತಿ)

## ಭಾಷಾ ಚಟುವಟಿಕೆ

***ಕೊಟ್ಟಿರುವ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ.***

ಕೈಯ=ಮುಂದು–ಮುಂಗೈ–ಅಂಶಿಸಮಾಸ ರಾತ್ರಿಯ +ನಡುವೆ–ನಡುರಾತ್ರಿ– ಅಂಶಿಸಮಾಸ

ಹನುಮನೂ+ಭೀಮನೂ+ರಾಮನೂ–ಹನುಮಭೀಮರಾಮರು–ದ್ವಂದ್ವಸಮಾಸ ಮೋಸವನ್ನು+ಮಾಡು–ಮೋಸಮಾಡು–ಕ್ರಿಯಾಸಮಾಸ

***ಕೊಟ್ಟಿರುವ ಗ್ರಾಮ್ಯಪದಗಳಿಗೆ ಗ್ರಂಥಸ್ಥರೂಪ ಬರೆಯಿರಿ.*** ಹೀಂಗ–ಹೀಗೆ, ಮ್ಯಾಗ–ಮೇಲೆ, ಕಳುವ್ಯಾರೆ–ಕಳುಹಿಸಿದ್ದಾರೆ, ಇಲ್ಲದ್ಹಂಗ–ಇಲ್ಲದಹಾಗೆ, ಇಸವಾಸ–ವಿಶ್ವಾಸ, ಸಕ್ಕಾರಿ–ಸಕ್ಕರೆ, ಏಸೊಂದು – ಎಷ್ಟೊಂದು, ಬ್ಯಾಸರ – ಬೇಸರ, ಯಾರ್ಯಾರ – ಯಾರು ಯಾರನ್ನು, ಬರ್ತಾನೆ – ಬರುತ್ತಾನೆ, ಕುಂತವಳೆ – ಕುಳಿತಿದ್ದಾಳೆ, ಬೆಳೆಯೋಳ – ಬೆಳೆಯುವವಳ, ತೊಳೆದೇನ – ತೊಳೆಯುತ್ತೇನೆ,

ಇಲ್ಲಿಗಂಟ –ಇಲ್ಲಿತನಕ, ಈಟ್ದಿನಗಂಟ – ಇಷ್ಟು ದಿನದ ತನಕ, ಮೋರೆ – ಮುಖ.

***ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ.***

ಅ) "ಒಳಗಿನ ಮಂದಿ ಗುಂಡು ಹೊಡೆಸಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

ಉಪಮೇಯ :– ಒಳಗಿನ ಮಂದಿ ಗುಂಡು ಹೊಡೆಯುವುದು

ಉಪಮಾನ :– ಮುಂಗಾರಿನ ಸಿಡಿಲು ಸಿಡಿಯುವುದು

ಉಪಮಾ ವಾಚಕ :– ಹಾಂಗ

ಸಮಾನ ಧರ್ಮ :– ಸ್ಪಷ್ಟವಾಗಿಲ್ಲ

ಸಮನ್ವಯ :– ಇಲ್ಲಿ ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನ ಸಿಡಿಲಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಇದು ಉಪಮಾ ಅಲಂಕಾರವಾಗಿದೆ.

ಅಲಂಕಾರ ;– ಉಪಮಾಲಂಕಾರ

ಲಕ್ಷಣ ;– ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸುವುದೇ ಉಪಮಾ ಅಲಂಕಾರ

ಆ) ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"

ಉಪಮೇಯ :– ಗುಂಡು ಸುರಿಯುವುದು

ಉಪಮಾನ :– ಸಿಡಿಲು ಸಿಡಿಯುವುದು

ಉಪಮಾ ವಾಚಕ :– ಹಾಂಗ

ಸಮಾನ ಧರ್ಮ :– ಸ್ಪಷ್ಟವಾಗಿಲ್ಲ

ಸಮನ್ವಯ :– ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು, ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

ಅಲಂಕಾರ :– ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸುವುದೇ ಉಪಮಾ ಅಲಂಕಾರ

5. ದೇಶ್ಯ–ಅನ್ಯದೇಶ್ಯ ಪದಗಳನ್ನು ಆರಿಸಿ ಬರೆಯಿರಿ.

ಹೊತ್ತು, ಹತಾರ, ಮಸಲತ್ತ, ಬಂಟರು, ಹುಕುಮ, ಮುಂಗೈ, ಸಾಹೇಬ, ಕಾರಕೂನ, ಸಿಪಾಯಿ, ಮುಂಗಾರು, ಕಬುಲ.
**ದೇಶ್ಯ ಪದಗಳು–** ಹೊತ್ತು, ಬಂಟರು, ಮುಂಗೈ, ಮುಂಗಾರು.
**ಅನ್ಯದೇಶ್ಯ ಪದಗಳು–** ಹತಾರ, ಮಸಲತ್ತ, ಹುಕುಮ, ಸಾಹೇಬ, ಕಾರಕೂನ, ಸಿಪಾಯಿ, ಕಬುಲ

*************

# ಪದ್ಯ ಪಾಠ ೭. ವೀರ ಲವ. –ಲಕ್ಷ್ಮೀಶ

**ಕವಿ ಪರಿಚಯ :– ಲಕ್ಷ್ಮೀಶನು** ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿನವನು.** ಈತನ ಕಾಲ ಕ್ರಿ. ಶ. **1550**. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದು, **' ಜೈಮಿನಿ ಭಾರತ'** ವೆಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಲಕ್ಷ್ಮೀಶ ಕವಿಗೆ **ಉಪಮಾಲೋಲ, ಕರ್ಣಾಟ ಕವಿಚೂತವನ ಚೈತ್ರ** ಎಂಬ ಬಿರುದುಗಳಿವೆ.

**ಪದ್ಯದ ಸರಳ ಭಾವಾರ್ಥ (ಮೌಲ್ಯವನ್ನಾಧರಿಸಿ.)**

ಬಲ್ಗಯ್ಯ ನೃಪರಂಜಿ ತಡೆಯದೆ ರಘೂದ್ವಹನ ।
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ ।
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು ॥
ಪುಲ್ಗಳ ಪಸುರ್ಗೆಳಸಿ ಪೊಕ್ಕೊಡಾ ತೋಟಗಾ।
ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆ ಮಿಗೆ ।
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು ॥ 1 ॥

ಬಲಶಾಲಿಗಳಾದ ರಾಜರೂ ಸಹ ಶ್ರೀರಾಮನ ಶ್ರೇಷ್ಠತೆಯ ವಿಚಾರವನ್ನು ಕೇಳಿಯೆ ಕುದುರೆಯನ್ನು ಕಟ್ಟಲು ಹೆದರಿ, ಅದಕ್ಕೆ ನಮಸ್ಕರಿಸಿ ಅದನ್ನು ತಡೆಯದೇ ಇರಲು ,ಶ್ರೀರಾಮನ ಯಜ್ಞಾಶ್ವದ ಪ್ರೀತಿಯ ಕುದುರೆಯು ಇಡೀ ಭೂಮಂಡಲದಲ್ಲಿ ಚಲಿಸುತ್ತ, ವಾಲ್ಮೀಕಿಯ ತಪೋವನದ ಉಪವನದಲ್ಲಿ ಬೆಳೆದು ನಿಂತಿದ್ದ ಹುಲ್ಲಿನ ಹಸುರಿಗೆ ಮನಸೋತು ಆಕರ್ಷಣೆಗೆ ಒಳಗಾಗಿ ಅದನ್ನು ಪ್ರವೇಶಿಸಿತು. ಅಲ್ಲಿ ತನ್ನ ಸ್ನೇಹಿತರೊಡನೆ (ಒಡನಾಡಿಗಳೊಡನೆ ) ಆಟವಾಡಿ ಮುಗಿಸಿ ಬಿಲ್ಲಿನ ಸಮೇತನಾಗಿ ಬರುತ್ತಿದ್ದ ವೀರ ಲವನು ಆಶ್ರಮವನ್ನು ಪ್ರವೇಶಿಸಿದ್ದ ಪೂಜಿತ (ಪೂಜಿಸಲ್ಪಟ್ಟಿದ್ದ)ಸುಂದರ ಕುದುರೆಯನ್ನು ಕಂಡನು.

**ಈ ಪದ್ಯಭಾಗದಲ್ಲಿ ಶ್ರೀರಾಮನ ಶೌರ್ಯ ಪರಾಕ್ರಮ, ಶ್ರೀರಾಮನ ಬಗೆಗೆ ಶತ್ರು ರಾಜರುಗಳಗಿದ್ದ ಗೌರವ ಭಾವನೆ ಲವನ ಸ್ನೇಹ ಪರತೆ ಹಾಗು ವೀರತ್ವ ಮೊದಲಾದ ಮೌಲ್ಯಯುತ ಅಂಶಗಳು ಅಭಿವ್ಯಕ್ತಗೊಂಡಿವೆ**

ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ।
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ ।
ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ॥
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ ।
ನೆತ್ತಿಯೊಳ್ ಮೆರವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು ॥ 2 ॥

ಉಪವನದೊಳಕ್ಕೆ ನುಗ್ಗಿದ ಕುದುರೆಯನ್ನು ನೋಡಿದ ಲವನು ಎಲ್ಲಿಯ ಕುದುರೆಯಿದು ?ಉಪವನಕ್ಕೆ ನುಗ್ಗಿ ಹೂದೋಟವನ್ನು ಹಾಳು ಮಾಡಿದೆಯಲ್ಲ ! ವಾಲ್ಮೀಕಿ ಮುನಿಶ್ರೇಷ್ಠರು ವರುಣನು ಕರೆದಿದ್ದರಿಂದ ಅಲ್ಲಿಗೆ ಹೋಗುವಾಗ ನನಗೆ ಈ ಉಪವನವನ್ನು ಕಾಯಲು ಹೇಳಿ ಹೋಗಿದ್ದರು. ಮತ್ತೆ ಅವರು ವರುಣನ ಲೋಕದಿಂದ ಹಿಂದಿರುಗಿ ಬಂದಾಗ ಈ ಹೂದೋಟವು ಹಾಳಾದುದನ್ನು ನೋಡಿ ಮುನಿಸಿಕೊಳ್ಳುವರು ಎಂದು ಯೋಚಿಸುತ್ತ ಕುದುರೆಯೆಡೆಗೆ ಬಂದನು. ಆಗ ಲವನು ಅದರ ಹಣೆಯ ಮೇಲೆ ಬರಹದ ಪಟ್ಟಿಯು ಇದ್ದುದನ್ನು ನೋಡಿ ಅದನ್ನು ಓದತೊಡಗಿದನು.

**ಈ ಪದ್ಯಭಾಗದಲ್ಲಿ ಲವನ ಗುರು ಭಕ್ತಿ ಗುರುಗಳ ಮಾತಿನ ಮೇಲಿರುವ ಗೌರವ ಪ್ರಾಮಾಣಿಕತೆ ಹಾಗು ವೀರತ್ವ ಮೊದಲಾದ ಮೌಲ್ಯಯುತ ಅಂಶಗಳು ಅಭಿವ್ಯಕ್ತಗೊಂಡಿವೆ**

ಊರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೋರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ।

ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು॥ 3 ॥

ಈ ಭೂಮಿಯಲ್ಲಿ ಕೌಸಲ್ಯೆಯು ಪಡೆದ ಮಗನಾದ ಶ್ರೀರಾಮನೊಬ್ಬನೇ ವೀರ.ಅವನ ಯಜ್ಞ ತುರಗವಿದು.ಇದನ್ನು ಧರಿಸುವ ಸಮರ್ಥರು ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಿರಿ ಎಂದಿದ್ದನ್ನು ನೋಡಿ, ಓಹೋ ! ಅವನ (ಶ್ರೀರಾಮನ) ಗರ್ವವನ್ನು ಮುರಿಯದಿದ್ದರೆ ನನ್ನ ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯದಿರುವರೇ ?ಅಲ್ಲದೇ ನನ್ನ ತೋಳುಗಳಿದ್ದೂ ಏನು ಪ್ರಯೋಜನ ? ಎಂದರೆ ರಾಮನ ಗರ್ವವನ್ನು ಮುರಿಯುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ಲವನು ಉರಿದೆದ್ದನು.

**ಈ ಪದ್ಯ ಭಾಗದಲ್ಲಿ ಲವನ ಧೈರ್ಯ ಶೌರ್ಯ ವೀರತನ ತಾಯಿಯ ಮೇಲಿನ ಗವರವ ಮತು ಕಾರ್ಯತತ್ಪರತೆ ಮೊದಲಾದ ಮೌಲ್ಯಯುತ ಅಂಶಗಳು ಅಭಿವ್ಯಕ್ತಗೊಂಡಿವೆ**

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡ ರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ॥ 4 ॥

ಲವನು ತನ್ನ ಉತ್ತರೀಯವನ್ನು ಹೊಸೆದು, ಅದನ್ನು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಮರಕ್ಕೆ ಕಟ್ಟಲು ಮುನಿಸುತರು ಅತಿಯಾಗಿ ನಡುಗಿ ,ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟುಬಿಡು,ಇಲ್ಲವಾದರೆ ನಮ್ಮನ್ನು ಹೊಡೆಯುವರು ಎಂದರು ಅದಕ್ಕೆ ಲವನು ನಗುತ್ತ ಬ್ರಾಹ್ಮಣರ ಮಕ್ಕಳು ಅಂಜುವರೆಂದರೆ ಜಾನಕಿಯ ಮಗನು ಇದಕ್ಕೆ ಹೆದರುವನೇ ?ಹೋಗಿ ನೀವು ಎಂದು ಶೌರ್ಯದಿಂದ ಬಿಲ್ಲನ್ನು ಹೆದೆಗೇರಿಸಿ , ತೀಡಿ ಜೇಂಕಾರ ಮಾಡಿ ನಿಂತಿದ್ದನು .

**ಈ ಪದ್ಯ ಭಾಗದಲ್ಲಿ ಲವನ ಧೈರ್ಯ ಶೌರ್ಯ ವೀರತನ ಮತ್ತು ಕಾರ್ಯತತ್ಪರತೆ ಮೊದಲಾದ ಮೌಲ್ಯಯುತ ಅಂಶಗಳು ಅಭಿವ್ಯಕ್ತಗೊಂಡಿವೆ**

***ಅಭ್ಯಾಸ***

***ಅ) ಒಂದು ವಾಕ್ಯದಲ್ಲಿ ಉತ್ತರಿಸಿ.***

1. 'ಜೈಮಿನಿ ಭಾರತ' ಬರೆದ ಕವಿ ಯಾರು?
ಜೈಮಿನಿ ಭಾರತವನ್ನು ಬರೆದ ಕವಿ ಲಕ್ಷ್ಮೀಶ
2. ಯಜ್ಞಾಶ್ವವನ್ನು ಕಟ್ಟಿದವರು ಯಾರು?
ವೀರ ಲವನು ಯಜ್ಞಾಶ್ವವನ್ನು ಕಟ್ಟಿದನು.
3. ಲವನು ಕುದುರೆಯನ್ನು ಯಾವುದರಿಂದ ಕಟ್ಟಿದನು?
ಲವನು ಕುದುರೆಯನ್ನು ತನ್ನ ಉತ್ತರೀಯದಿಂದ ಕಟ್ಟಿದನು.
4. ಮುನಿ ಸುತರು ಹೆದರಲು ಕಾರಣವೇನು?
ತಮ್ಮನ್ನು ರಾಜಭಟರು ಹೊಡೆಯಬಹುದು ಎಂಬ ಆತಂಕದಿಂದ ಮುನಿಸುತರು ಹೆದರಿದರು.

***ಆ) ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.***

1. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
ಶ್ರೀರಾಮನು ಮಹರ್ಷಿಗಳ ಸೂಚನೆಯಂತೆ ಅಶ್ವಮೇಧ ಯಾಗವನ್ನು ಕೈಗೊಂಡನು. ಶತ್ರುಘ್ನನನ ಬೆಂಗಾವಲಿನಲ್ಲಿ ಯಜ್ಞಾಶ್ವ ಹೊರಟಿತು. ಶ್ರೀರಾಮನ ಹೆಸರನ್ನು ಕೇಳಿದ ರಾಜರು ಕುದುರೆಯನ್ನು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಧರೆಯಲ್ಲೆಲ್ಲಾ ಸಂಚರಿಸುತ್ತಾ ವಾಲ್ಮೀಕಿ ಆಶ್ರಮದ ಬಳಿ ಬಂದಿತು. ಆಶ್ರಮದಲ್ಲಿನ ಹಸಿರು ಹುಲ್ಲನ್ನು ತಿನ್ನಲು ಆಸೆಪಟ್ಟು ಆಶ್ರಮವನ್ನು ಪ್ರವೇಶಿಸಿತು.
2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?
ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ, "ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ಶ್ರೀರಾಮನೊಬ್ಬನೇ ವೀರನು. ಇದು ಅವನ ಯಜ್ಞ ಕುದುರೆ. ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರು ಇದನ್ನು ತಡೆಯಲಿ" ಎಂದು ಬರೆಯಲಾಗಿತ್ತು.

3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

ಆಶ್ರಮವನ್ನು ಪ್ರವೇಶಿಸಿದ ಯಜ್ಞಾಶ್ವವನ್ನು ಲವನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿದನು. ಇದನ್ನು ಕಂಡ ಮುನಿಸುತರು ಹೆದರಿ "ಬೇಡ ಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯುವರು" ಎಂದು ಹೇಳಿದರು. ಆಗ ಲವನು ನಗುತ "ಬ್ರಾಹ್ಮಣರ ಮಕ್ಕಳು ಹೆದರಿದರೆ, ಜಾನಕಿಯ ಮಗನು ಇದಕ್ಕೆ ಹೆದರುವನೇ? ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

***ಈ) ಸಂದರ್ಭಾನುಸಾರ ಸ್ವಾರಸ್ಯವನ್ನು ವಿವರಿಸಿ.***

1. "ರಘೋದ್ವಹನ ಸೊಲ್ಗೇಳಿ ನಮಿಸಲ್".

ಆಯ್ಕೆ:– ಈ ವಾಕ್ಯವನ್ನು 'ಲಕ್ಷ್ಮೀಷ ಕವಿ' ಬರೆದಿರುವ 'ಜೈಮಿನಿ ಭಾರತ' ಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯ ಪಾಠದಿಂದ ಆರಿಸಲಾಗಿದೆ.

ಸಂದರ್ಭ:– ಶ್ರೀರಾಮನ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ಅದಕ್ಕೆ ದೊರೆತ ಭವ್ಯ ಸ್ವಾಗತ ಹಾಗೂ ನೀಡಿದ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿ ಹೀಗೆ ಹೇಳಿದ್ದಾರೆ.

ಸ್ವಾರಸ್ಯ:– ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ, ಶರಣಾಗಿ, ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟರು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

2. "ತನ್ನ ಮಾತೆಯಂ ಸರ್ವಜನಮುಂ ಬಂಜೆ ಯೆನ್ನದಿರ್ದಪುದೆ".

ಆಯ್ಕೆ :– ಈ ವಾಕ್ಯವನ್ನು 'ಲಕ್ಷ್ಮೀಷ ಕವಿ' ಬರೆದಿರುವ 'ಜೈಮಿನಿ ಭಾರತ' ಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯ ಪಾಠದಿಂದ ಆರಿಸಲಾಗಿದೆ.

ಸಂದರ್ಭ:– ತನ್ನ ತೋಟವನ್ನು ಹಾಳುಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯ ಮೇಲಿದ್ದ ಬರೆಹವನ್ನು ಓದಿ ಅದನ್ನು ಕಟ್ಟಿಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಲವನು ಹೀಗೆ ಹೇಳುತ್ತಾನೆ

ಸ್ವಾರಸ್ಯ:– ಕ್ಷತ್ರೀಯನಾದ ಲವನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟುವ ಮೂಲಕ ತನ್ನ ಸ್ವಾಭಿಮಾನ ಹಾಗೂ ಮಾತೃ ಭಕ್ತಿ  ಮೆರೆದನು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

3. "ಅರಸುಗಳ ವಾಜಿಯಂ ಬಿಡು".

ಆಯ್ಕೆ:– ಈ ವಾಕ್ಯವನ್ನು 'ಲಕ್ಷ್ಮೀಷ ಕವಿ' ಬರೆದಿರುವ 'ಜೈಮಿನಿ ಭಾರತ' ಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯ ಪಾಠದಿಂದ ಆರಿಸಲಾಗಿದೆ.

ಸಂದರ್ಭ:– ವೀರ ಲವನು ತನ್ನ ಉತ್ತರೀಯ ದಿಂದ ಯಜ್ಞಾಶ್ವವನ್ನು ಬಾಳೆಯ ಗಿಡಕ್ಕೆ ಕಟ್ಟಿಹಾಕಿದನು. ಆ ಸಂದರ್ಭದಲ್ಲಿ ಮುನಿಪುತ್ರರು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:– ರಾಜನ ಯಜ್ಞಾಶ್ವವನ್ನು ಕಟ್ಟಿಹಾಕುವುದು ಅಪರಾಧ. ಅದರಿಂದ ಮುಂದೆ ತೊಂದರೆ ಉಂಟಾಗುತ್ತದೆ. ಎಂದು ಮುನಿಪುತ್ರರು ಭಯ ಗೊಂಡರು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

4. "ಜಾನಕಿಯ ಮಗನಿದಕೆ ಹೆದರುವನೆ".

ಆಯ್ಕೆ:– ಈ ವಾಕ್ಯವನ್ನು 'ಲಕ್ಷ್ಮೀಷ ಕವಿ' ಬರೆದಿರುವ 'ಜೈಮಿನಿ ಭಾರತ' ಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯ ಪಾಠದಿಂದ ಆರಿಸಲಾಗಿದೆ.

ಸಂದರ್ಭ:– ವೀರ ಲವನು ತನ್ನ ಉತ್ತರೀಯ ದಿಂದ ಯಜ್ಞಾಶ್ವವನ್ನು ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದನು. ಆಗ ಮುನಿ ಪುತ್ರರು ಕುದುರೆಯನ್ನು ಬಿಡು ಎಂದು ಹೇಳುವ ಸಂದರ್ಭದಲ್ಲಿ ಲವನು ಈ ಮಾತನ್ನು ಹೇಳಿದನು.

ಸ್ವಾರಸ್ಯ:– ಸೀತೆಯ ಮಗನಾದ ಲವನ ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

ಉ. ಹೊಂದಿಸಿ ಬರೆಯಿರಿ.

| ಅ | | ಬ | |
|---|---|---|---|
| 1. ದೇವನೂರು | – | ರಾಮ | **1.ಲಕ್ಷ್ಮೀಶ,** |
| 2. ಕೌಸಲ್ಯೆ | – | ಲಕ್ಷ್ಮೀಶ | **2.ರಾಮ,** |
| 3. ವರುಣ | – | ಅಶ್ವ | **3.ಅಬ್ಧಿಪ,** |

| | | | |
|---|---|---|---|
| 4. ವಾಲ್ಮೀಕಿ | – | ಅಬ್ಧಿಪ | 4.ಮುನಿ, |
| 5. ತುರಂಗ | – | ಮುನಿ | 5. ಅಶ್ವ |
| | – | ಅಶ್ವ | |

## ಭಾಷಾ ಚಟುವಟಿಕೆ

**ವಿಗ್ರಹಿಸಿ ಸಮಾಸದ ಹೆಸರನ್ನು ತಿಳಿಸಿ**

1.ಸೊಲ್ಗೇಳಿ=ಸೊಲ್ಲನ್ನು+ ಕೇಳಿ= ಕ್ರಿಯಾ ಸಮಾಸ
2.ನಲ್ಗುದುರೆ=ನಲ್ಲಿತು+ಕುದುರೆ=ಕರ್ಮದಾರಯಾ ಸಮಾಸ
3.ಬಿಲ್ಗೊಂಡು=ಬಿಲ್ಲನ್ನು+ಕೊಂಡು=ಕ್ರಿಯಾ ಸಮಾಸ
4.ಬಿಲ್ದಿರುವನೇರಿ ಬಿಲ್ದಿರುವನ್ನು+ ಏರಿಸಿ= ಕ್ರಿಯಾ ಸಮಾಸ
5.ಪೂದೋಟ=ಪೂವಿನ + ತೋಟ=ತತ್ಪುರುಷ ಸಮಾಸ

**ತತ್ಸಮ-ತದ್ಭವ ತಿಳಿಸಿ :-** ವೀರ- ಬೀರ ಯಜ್ಞ-ಜನ್ನ ಬಂಜೆ-ವಂಧ್ಯಾ

**ಪದವಿಂಗಡಿಸಿ ಸಂಧಿ ಹೆಸರನ್ನು ತಿಳಿಸಿ.**

ಚರಿಸುತದ್ವರದ=ಚರಿಸುತ+ಅದ್ವರದ =ಲೋಪ ಸಂಧಿ,
ನಿಜಾಶ್ರಮ=ನಿಜ+ಆಶ್ರಮ=ಸ.ಧೀ.ಸಂಧಿ
ಲೇಖನಮನೋದಿ=ಲೇಖನವನು+ಓದಿ=ಲೋಪಸಂಧಿ,
ತೆಗೆದುತ್ತರಿಯಂ=ತೆಗೆದು + ಉತ್ತರಿಯಂ=ಲೋಪಸಂಧಿ
ಬೇಡಬೇಡರುಗಳ=ಬೇಡಬೇಡ+ಅರಸುಗಳ= ಲೋಪ ಸಂಧಿ,
ನಿಂತಿರ್ದನು=ನಿಂತು+ಇರ್ದನು=ಲೋಪ ಸಂಧಿ

**ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸಿನ ಹೆಸರನ್ನು ತಿಳಿಸಿ**

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೋರ್ವನೇ ವೀರನಾತನ ಯಜ್ಞತುರುಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನಮನೋದಿ

| | | | |
|---|---|---|---|
| 5 | 5 | 5 | 5 |
| — ∪ — | — — ∪ | ∪ ∪ ∪ ∪ ∪ | — ∪ — |
| ಉರ್ವಿಯೊಳ್ | ಕೌಸಲ್ಯೆ | ಪಡೆದಕುವ | ರಂ ರಾಮ |

| | | | |
|---|---|---|---|
| 5 | 5 | 5 | 5 |
| — ∪ — | — ∪ — | ∪ ∪ — ∪ | ∪ ∪ ∪ ∪ ∪ |
| ನೋರ್ವನೇ | ವೀರನಾ | ತನಯಜ್ಞ | ತುರಗಮಿದು |

| | | | | | | |
|---|---|---|---|---|---|---|
| 5 | 5 | 5 | 5 | 5 | 5 | ಗು |
| — ∪∪∪ | — ∪ — | — ∪ — | ∪ ∪ ∪ — | — ∪ — | ∪ ∪ ∪ — | — |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನವನೋ | ದಿ |

ಈ ಮೇಲಿನ ಪದ್ಯವು ಮಾತ್ರಾ ಗಣದ 'ವಾರ್ಧಕ ಷಟ್ಪದಿ'ಯಲ್ಲಿ ರಚಿತವಾಗಿದೆ.

*************************************

# ಪದ್ಯ ಪಾಠ–೮. ಕೆಮ್ಮನೆ ಮೀಸೆವೊತ್ತನೇ –ಪಂಪ

ಕನ್ನಡದ ಆದಿ ಮಹಾಕವಿ ಪಂಪನು ಕ್ರಿ. ಶ. ಸುಮಾರು 941 ರಲ್ಲಿ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದನು. ಪಂಪನು 'ವಿಕ್ರಮಾರ್ಜುನ ವಿಜಯ ಮತ್ತು ಆದಿ ಪುರಾಣ' ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ಈತನಿಗೆ ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ ಎಂಬ ಬಿರುದುಗಳು ಇದ್ದವು.

## ಪದ್ಯದ ಭಾವಾರ್ಥ (ಮೌಲ್ಯವನ್ನಾಧರಿಸಿ.)

ವ॥ ದ್ರೋಣಂ ತನಗೆ ಬಡತನಮಡಸೆ ಅಶ್ವತ್ಥಾಮನನೊಡಗೊಂಡು ನಾಡಂನಾಡಂ ತೊಳಲ್ದು ಪರಶುರಾಮನಲ್ಲಿಗೆ ವಂದಂ ಅಂತುವಲ್ಕಲಾವೃತಕಟಿತಟನುಮಾಗಿರ್ದ ಜಟಾಕಲಾಪನುಮಾಗಿ ತಪೋವನಕ್ಕೆ ಪೋಪ ಭಾರ್ಗವಂ ದ್ರವ್ಯಾರ್ಥಿಯಾಗಿ ಬಂದ ಕುಂಭಸಂಭವನಂಕಂಡು ಕನಕಪಾತ್ರಕ್ಕುಪಾಯಮಿಲ್ಲಪ್ಪುದಱಂ ಮೃತ್ಪಾತ್ರದೊಳರ್ಘ್ಯಮೆತ್ತಿ ಪೂಜಿಸಿ–

ದ್ರೋಣನು ತನಗೆ ಬಡತನ ಉಂಟಾಗಲು ಅಶ್ವತ್ಥಾಮನನ್ನೂ ಜೊತೆಯಲ್ಲಿ ಕರೆದುಕೊಂಡು ದೇಶದೇಶಗಳನ್ನೆಲ್ಲ ಸುತ್ತಾಡಿ ಪರಶುರಾಮನ ಬಳಿಗೆ ಬಂದನು, ಆಗ ನಾರುಮಡಿಯಿಂದ ಕೂಡಿದ ನಡುವುಳ್ಳವನೂ ಜಟಾ ಸಮೂಹದಿಂದ ಕೂಡಿದವನೂ ಆದ ಆ ಪರಶುರಾಮನು ದ್ರವ್ಯವನ್ನು (ಹಣವನ್ನು) ಬೇಡುವುದಕ್ಕಾಗಿ ಬಂದ ದ್ರೋಣನನ್ನು ಚಿನ್ನದ ತಟ್ಟೆಗಳು ಇಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

ಚಂ॥ ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ
ದಡೆಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ
ಲ್ಲೊಡಮೆ ಸಮಂತು ಪೇಱುವರೊಳಾವುದನೀವುದೊ ಕುಂಭಸಂಭವ ॥1॥

ನಂತರ ಪರಶುರಾಮನು ದ್ರೋಣನ್ನು ಕುರಿತು, ನನ್ನ ಆಸ್ತಿಯನ್ನು ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಕೆಯೂ ಇಲ್ಲ. ಬೇಡುವವನಾದರೋ ವೇದಶಾಸ್ತ್ರ ಪಾರಂಗತನು. ಹೇಗೆ ಅವನನ್ನು ಸಂತೋಷಪಡಿಸಲಿ? ಎಲೈ ದ್ರೋಣನೇ, ಈಗ ಇದೊಂದು ಬಿಲ್ಲು ಇದೆ. ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಆಸ್ತಿ ಇಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು ಎಂದು ಹೇಳಿದನು.

**ಈ ಪದ್ಯಭಾಗದಲ್ಲ ಪರಶುರಾಮನ ದಾನಗುಣ ಮನೆಗೆ ಬಂದ ವಿದ್ವಾಂಸರನ್ನು ಗೌರವಿಸಬೇಕೆಂಬ ಉದಾತ್ತಗುಣ ಹಾಗು ಪರೋಪಕಾರ ಮೊದಲಾದ ಮೌಲ್ಯಯುತ ಅಂಶಗಳು ಅಭಿವ್ಯಕ್ತಗೊಂಡಿವೆ**

ವ॥ ಎಂಬುದುಂ ದ್ರೋಣನೆನಗೆ ವಿದ್ಯಾಧನಮೆ ಧನಮಪ್ಪುದಱಂ ದಿವ್ಯಾಸ್ತ್ರಂಗಳಂ ದಯೆಗೆಯ್ವುದೆನೆ ವಾರಣವಾಯವ್ಯಾಗ್ನೇಯಪೌರಂದರಾದಿ ಪ್ರಧಾನಾಸ್ತ್ರಂಗಳಂ ಕುಡೆ ಕೊಂಡು ಪರಶುರಾಮನಂ ಬೀಟಿಕ್ಕೊಂಡು ತನ್ನೊಡನಾಡಿಯಪ್ಪ ಕೆಳೆಯಂ ದ್ರುಪದಂಛತ್ರಾವತಿಯೊಳರಸುಗೆಯ್ದಪನೆಂದು ಕೇಳ್ದಾ ಪೊೞಲ್ಗೆವಂದು ದ್ರುಪದನರಮನೆಯ ಬಾಗಿಲೊಳ್ ನಿಂದು ಪಡಿಯಱನಂ ಕರೆದುನಿಮ್ಮೊಡನಾಡಿದ ಕೆಳೆಯಂ ದ್ರೋಣನೆಂಬ ಪಾರ್ವ ಬಂದನೆಂದು ನಿಮ್ಮರಸಂಗಱಯೆ ಪೇೞೆಂಬುದುಮಾತನಾ ಮಾಟಕ್ಕಿಯೊಳೆಬಂದಱಪುವುದುಂ ದ್ರುಪದಂ ರಾಜ್ಯಮದಿರಾಮದೋನ್ಮತ್ತನುಂ ಗರ್ವಗ್ರಹವ್ಯಗ್ರಚಿತ್ತನುಮಾಗಿ ಮೇಗಿಲ್ಲದೆ–

ಎಂದು ಹೇಳಲು ದ್ರೋಣನು ನನಗೆ ವಿದ್ಯಾಧನವೇ ಧನವಾಗಿರುವುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು ಎನ್ನಲು., ವಾರುಣ, ವಾಯವ್ಯ, ಆಗ್ನೇಯ, ಐಂದ್ರಾ ಮೊದಲಾದ ಅಸ್ತ್ರಗಳನ್ನು ಕೊಡಲು, ಅದನ್ನು ತೆಗೆದುಕೊಂಡು ಪರಶುರಾಮನಿಂದ ಅಪ್ಪಣೆ ಪಡೆದು ಹೊರಟನು. ಅಲ್ಲಿಂದ ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು ನಿಮ್ಮ ಜೊತೆಯಲ್ಲಾಟವಾಡಿದ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು ಎಂದನು. ಆ ದ್ವಾರಪಾಕನು ಆ ರೀತಿಯಲ್ಲಯೇ ಬಂದು ರಾಜನಿಗೆ ತಿಳಿಸಿದನು. ಆಗ ದ್ರುಪದನು ರಾಜ್ಯ ಎಂಬ ಮದ್ಯಪಾನದಿಂದ ಸೊಕ್ಕಿದವನೂ ಅಹಂಕಾರ ಎಂಬ ಗ್ರಹದಿಂದ ಪೀಡಿತನಾದ ಮನಸ್ಸುಳ್ಳವನೂ ಆಗಿ ಒಳ್ಳೆಯತನವಿಲ್ಲದೇ ಹೀಗೆ ನುಡಿದನು.

ಕಂ॥ ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ೞೆಂತೆನಗೆ ಕೆಳೆಯನೇ ನೂಂ
ಕಂತಪ್ಪನನಱಯೆನೆಂದು ಸಭೆಯೊಳ್ ನುಡಿದಂ ॥2॥

ದ್ರುಪದನು ದ್ವಾರಪಾಕನೊಡನೆ, ಆ ರೀತಿ ಹೇಳುವವನು ಯಾರಿಗೆ ಸಂಬಂಧಪಟ್ಟವನು? ಇದು ಹಿರಿದಾದ ಭ್ರಮೆಯಲ್ಲವೇ? ಏನು ದ್ರೋಣ ಎಂಬುವವನು ಬ್ರಾಹ್ಮಣನೇ? ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು. ಅವನನ್ನು ಹೊರಗೆ ತಳ್ಳು ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು.

**ಈ ಪದ್ಯದ ಪ್ರಶ್ನೆಗಳಲ್ಲಿ ಕಾಣುವ ತಿರಸ್ಕಾರ ಔದಾಸೀನ್ಯ, ಗರ್ವ, ಸ್ನೇಹಿತನಲ್ಲಿ ಅನಾಧರ ಭಾವ, ಅಸಹನೆ, ಸ್ವಪ್ರತಿಷ್ಠೆ ಮುಂತಾದವು ಅನುಭವವೇದ್ಯವಾದುದು, ಈ ಪದ್ಯದಲ್ಲಿ ದೃಪದನ ಗರ್ವದ ಪರಾಕಾಷ್ಠೆಯನ್ನು ಪಂಪ ಬಹು ಸ್ವಾರಸ್ಯವಾಗಿ ವರ್ಣಿಸಿದ್ದಾನೆ.**

ವ ॥ ಅಂತು ನುಡಿದುದಂ ಪಡಿಯಱಿಂ ಬಂದಾಮಾಟಕ್ಕೆಯೊಳಱಿಪೆ ದ್ರೋಣನೊತ್ತಂಬರದಿಂದೊಳಗಂ ಪೊಕ್ಕು ದ್ರುಪದನಂ ಕಂಡು–

ದ್ರುಪದನು ಹೀಗೆ ಹೇಳಿದುದನ್ನು ದ್ವಾರಪಾಲಕನು ಬಂದು ಆ ರೀತಿಯಲ್ಲಿಯೇ ತಿಳಿಸಲು ದ್ರೋಣನು ಬಲಾತ್ಕಾರದಿಂದ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ.

ಚಂ॥ ಅಱಿಯಿರೆ ನೀಮುಮಾಮುಮೊಡನೋದಿದೆವೆಂಬುದನಣ್ಣ ನಿನ್ನ ನಾ
ನಱಿಯೆನದೆಲ್ಲಿ ಕಂಡೆಯೊ ಮಹೀಪತಿಗಂ ದ್ವಿಜವಂಶಜಂಗಮೇ
ತಱಿ ಕೆಳೆಯಿಂತು ನಾಣಿಲಿಗರಪ್ಪರೆ ಮಾನಸರೆಂಬ ಮಾತುಗಳ್
ನೆಱಿಗೊಳೆ ಕುಂಭಸಂಭವನನಾ ದ್ರುಪದಂ ಕಡುಸಿಗ್ಗು ಮಾಡಿದಂ ॥3॥

ದ್ರೋಣನು ದ್ರುಪದನನ್ನು ಕುರಿತು ,ಅಣ್ಣಾ, ನೀವೂ ನಾವೂ ಜೊತೆಯಲ್ಲ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದ್ದಿಲ್ಲವೇ?' ಎಂದನು. ಆಗ ದ್ರುಪದನು ,ನಿನ್ನನ್ನು ನಾನು ತಿಳಿಯೆನು. ನೀನು ಅದೆಲ್ಲಿ ನನ್ನನ್ನು ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಗೆಳೆತನವೋ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರಾಗುತ್ತಾರೆಯೇ?' ಎಂಬ ಮಾತುಗಳಿಂದ ದ್ರೋಣನಿಗೆ

**ಈ ಪದ್ಯಭಾಗದಲ್ಲಿ ಗೆಳತನವನ್ನು ಅಪಮಾನಿಸಬಾರದು, ಗೌರವಿಸದೆ ಇರುವುದು ತರವಲ್ಲ, ಗೆಳೆತನ ಶ್ರೇಷ್ಠವಾದುದು. ಇದರಲ್ಲಿ ಮೇಲು ಕೀಳು ಜಾತಿ ಮತ ಧರ್ಮ ಇರಬಾರದು ಹೀಗೆ ಮಾಡಿದರೆ ಗೆಳೆಯನ ಮನಸ್ಸಿಗೆ ಎಷ್ಟು ನೋವಾಗುತ್ತದೆ ಎಂಬ ಮೌಲ್ಯ ಅಡಕವಾಗಿದೆ**

ವ ॥ ಅಂತು ಮಾಡಿದುದುಮಲ್ಲದೀ ನಾಣಿಲಿ ಪಾರ್ವನನೆಱಿದು ಕಳೆಯಿಮೆಂಬುದುಂ ದ್ರೋಣನಿಂತೆಂದಂ–

ವ॥ ಹಾಗೆ ಮಾಡಿದುದೂ ಅಲ್ಲದೆ ಈ ನಾಚಿಕೆಗೆಟ್ಟ ಬ್ರಾಹ್ಮಣನನ್ನು ಎಳೆದು ನೂಕು ಎನ್ನಲು ದ್ರೋಣನು ಹೀಗೆಂದನು–

ಚಂ॥ ನುಡಿ ತಡವಪ್ಪುದೊಂದು ಮೊಗದೊಳ್ ಮಱುಕಂ ದೊರೆಕೊಳ್ವುದೊಂದು ನಾ
ಣ್ಗೆಡೆಗುಡದಿರ್ಪುದೊಂದು ನುಡಿಗಳ್ ಮೊಱಿಯಂ ಮಱಿಯಿಪ್ಪುದೊಂದು ಕ
ಳ್ಗುಡಿದವರಂದಮಿಂತು ಸಿರಿ ಸಾರ್ತರೆ ಸಾರ್ವುದದರ್ಕೆ ಸಂದೆಯಂ
ಬಡದೆ ಜಲಕ್ಕನೀಗಳಱಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ ॥4॥

ದ್ರೋಣನು, ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ. ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಸಂಬಂಧವನ್ನು ಮರೆಯುವಂತೆ ಮಾಡುವುದು; ಆದುದರಿಂದ ಐಶ್ವರ್ಯವು (ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ನಿಸ್ಸಂಶಯವಾಗಿ ಈಗ ಥಟ್ಟನೆ ತಿಳಿದೆನು, ಎಂದು ಹೇಳಿದನು.

**ಈ ಪದ್ಯಭಾಗದಲ್ಲಿ ಸಿರಿ ಸಂಪತ್ತು ಶಾಸ್ವತವಲ್ಲ, ಶ್ರೀಮಂತಿಕೆ ಬಂದಾಗ ಅಹಂಕಾರದಿಂದ ಮೆರೆಯಬಾರದು ಅದು ಸಜ್ಜನರ ಲಕ್ಷಣವಲ್ಲ ಎಂಬ ಮೌಲ್ಯ ಪದ್ಯದ ಈ ಚರಣದದಲ್ಲಿ ಅಡಗಿದೆ**

ಚಂ॥ ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ
ದಳವೊಡನೋದಿದೊಂದು ಬೆಱಿಗಿಂಗೆ ಕೊಲಲ್ಕೆನಗಾಗದೀ ಸಭಾ
ವಳಯದೊಳೆನ್ನನೇಟಿಸಿದ ನಿನ್ನನನಾಕುಳಮೆನ್ನ ಚಟ್ಟರಿಂ
ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ ॥5॥

'ದ್ರೋಣನು ದ್ರುಪದನನ್ನು ಕುರಿತು, ಎಲೈ ನೀಚನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ನಾನು ಕೊಲ್ಲಲಾರೆನು. ಈ ಸಭಾ ಮಂಡಲದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಬಂಧಿಸದೆ ಬಿಟ್ಟರೆ ನಾನು ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ? ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

**ಈ ಪದ್ಯಭಾಗದಲ್ಲಿ ದ್ರೋಣನು ಗೆಳೆತನಕ್ಕೆ ನೀಡಿದ ಗೌರವ ದ್ರೋಣನ ದೈರ್ಯ ಶೌರ್ಯ ವೀರತನ ಮೊದಲಾದ ಮೌಲ್ಯಯುತ ಅಂಶಗಳು ಅಭಿವ್ಯಕ್ತಗೊಂಡಿವೆ. ದ್ರೋಣನು ಪ್ರತಿಜ್ಞೆಯನ್ನು ಮಾಡುವ ಸಂಯದಲ್ಲಿ ನೊಳವಿಂಗೆ ಕುಪ್ಪೆ ವರಂ ಎಂಬ ಗಾದೆಯ ಮಾತಿನ ಅರ್ಥ ಸ್ವಾರಸ್ಯಕರವಾಗಿದೆ.**

**ಅಭ್ಯಾಸ**

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1.ದ್ರೋಣನು ಪರಶುರಾಮನಲ್ಲಿಗೆ ಏಕೆ ಬಂದನು?

ದ್ರೋಣನು ಪರಶುರಾಮನಲ್ಲಿಗೆ ದ್ರವ್ಯವನ್ನು(ಹಣ) ಬೇಡಲು ಬಂದನು.

2. ದ್ರೋಣನು ಯಾರೊಡನೆ ಪರಶುರಾಮನಲ್ಲಿಗೆ ಬಂದನು?

ದ್ರೋಣನು ಅಶ್ವತ್ಥಾಮನೊಡನೆ ಪರಶುರಾಮನಲ್ಲಿಗೆ ಬಂದನು.

3. ಪರಶುರಾಮನು ದ್ರೋನನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?

ಪರಶುರಾಮನು ದ್ರೋಣನಿಗೆ ವಾರುಣ, ವಾಯುವ್ಯ, ಆಗ್ನೇಯ, ಇಂದ್ರಾದಿ ಪ್ರಧಾನ ಅಸ್ತ್ರಗಳನ್ನು ಕೊಟ್ಟರು.

4. ದ್ರುಪದನು ಪಡಿಯರನಿಗೆ ಏನೆಂದು ಹೇಳಿದನು?

ದ್ರೋಣನು ಯಾರೆಂದು ನಾನು ತಿಳಿಯೆನು, ಅವನನ್ನು ಹೊರಕ್ಕೆ ತಳ್ಳು ಎಂದು ದ್ರುಪದನು ಪಡಿಯರನಿಗೆ (ದ್ವಾರಪಾಲಕನಿಗೆ) ಹೇಳಿದನು.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1.ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಆರ್ಘ್ಯವನ್ನು ಕೊಡಲು ಕಾರಣವೇನು?

ಪರಶುರಾಮನು ತನ್ನಲ್ಲಿದ್ದನ್ನೆಲ್ಲಾ ದಾನಮಾಡಿದ್ದರಿಂದ ಆತನ ಬಳಿ ಬಿಲ್ಲು-ಬಾಣಗಳಲ್ಲದೆ ಬೇರೇನೂ ಇರಲಿಲ್ಲ. ಆ ಸಂದರ್ಭದಲ್ಲಿ ದ್ರೋಣನು ಅಶ್ವಸ್ಥಾಮನ ಜೊತೆಯಲ್ಲಿ ಏನಾದರೂ ದ್ರವ್ಯ ಬೇಡಲೆಂದು ಪರಶುರಾಮನ ಬಳಿಗೆ ಬಂದನು. ಆಗ ಪರಶುರಾಮನು ತನ್ನ ಬಳಿ ಚಿನ್ನದ ಪಾತ್ರೆಗಳಿಲ್ಲದುದರಿಂದ ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿಯೇ ಆರ್ಘ್ಯವನ್ನು ಕೊಟ್ಟು ಪೂಜಿಸಿದನು.

2.ದ್ರುಪದನು ದ್ರೋಣರಿಗೆ ಹೇಳಿದ ಮಾತುಗಳಾವುವು?

ದ್ರುಪದನು ದ್ರೋಣರಿಗೆ "ನೀನು ಯಾರೆಂದು ನನಗೆ ತಿಳಿದಿಲ್ಲ, ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೋ? ರಾಜನಿಗೂ ಬ್ರಾಹ್ಮಣರಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೆ? ಎಂಬ ಮಾತುಗಳಿಂದ ದ್ರೋಣನಿಗೆ ಮರ್ಮಬೇಧಕವಾಗುವಂತೆ ಹೀಯಾಳಿಸಿದನು.

3. ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು?

ದ್ರುಪದನ ಮಾತಿಗೆ ದ್ರೋಣನು "ಎಲೋ ಖಳನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು" ಎನ್ನುವ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲದೆ ಬಿಡುತ್ತಿದ್ದೇನೆ. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ? ಎಂದು ಪ್ರತ್ಯುತ್ತರ ಕೊಟ್ಟನು.

**ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ.**

1. 'ಈಗಳೊಂದಡಕೆಯುಮಿಲ್ಲ ಕೈಯೊಳ್'

ಆಯ್ಕೆ:- ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ" ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:- ದ್ರೋಣನು ತನಗೆ ಬಡತನವುಂಟಾಗಲು ಅಶ್ವತಾಮನನ್ನೂ ಕರೆದುಕೊಂಡು ದೇಶ ದೇಶಗಳಲ್ಲೆಲ್ಲ ಸುತ್ತಿ ಪರುಶುರಾಮನ ಬಳಿಗೆ ಬಂದು ಸಹಾಯ ಯಾಚಿಸಿದ ಸಂದರ್ಭದಲ್ಲಿ ಪರಶುರಾಮನು "ನನ್ನ ಪದಾರ್ಥಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟೆನು, ಈಗ ನನ್ನಲ್ಲಿ ಒಂದಡಕೆಯೂ ಇಲ್ಲ" ಎಂದು ದ್ರೋಣನಿಗೆ ಹೇಳುತ್ತಾನೆ.

ಸ್ವಾರಸ್ಯ:- ದ್ರೋಣನು ತನ್ನ ಬಳಿ ಬಂದು ಸಹಾಯ ಯಾಚಿಸಿದಾಗ ಪರಶುರಾಮನು ಯಾವುದೇ ಮುಚ್ಚುಮರೆ ಇಲ್ಲದೆ ತನ್ನ ನಿಜ ಸ್ಥಿತಿಯನ್ನು ಹೇಳಿಕೊಳ್ಳುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

2. "ವಿದ್ಯಾಧನಮೆ ಧನಮಪ್ಪುದು"

ಆಯ್ಕೆ:- ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ" ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:– ದ್ರೋಣನು ತನ್ನ ಬಳಿ ಬಂದು ಸಹಾಯ ಯಾಚಿಸಿದಾಗ ಪರಶುರಾಮನು "ಎಲೈ ದ್ರೋಣನೇ ಈಗ ಇದೊಂದು ಬಿಲ್ಲೂ ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ನನ್ನಲ್ಲಿ ಬೇರೆ ಯಾವುದೇ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚನ್ನಾಗಿ ಯೋಚಿಸಿ ಹೇಳು" ಎಂದು ಹೇಳಿದ ಸಂದರ್ಭದಲ್ಲಿ ದ್ರೋಣನು "ನನಗೆ ವಿದ್ಯಾಧನವೇ ಧನವಾಗಿರುವುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು" ಎಂದು ಹೇಳುತ್ತಾನೆ.

ಸ್ವಾರಸ್ಯ:– 'ವಿದ್ಯಾಧನವೇ ನಿಜವಾದ ಸಂಪತ್ತು' ಎಂದು ಹೇಳುವ ಮೂಲಕ ದ್ರೋಣನು ವಿದ್ಯೆಯ ಮಹತ್ವವನ್ನು ತಿಳಿಸಿರುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

3. 'ಎಂತು ನಾಣಿಲಿಗರಪ್ಪರೆ ಮಾನಸರ್'

ಆಯ್ಕೆ:– ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ" ಕೃತಿಯಿಂದ ಆರಿಸಿಕೊಳ್ಳ ಲಾಗಿರುವ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:– ದ್ರೋಣನು ದ್ರುಪದನ ಬಳಿ ಹೋಗಿ "ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಬ್ಯಾಸ ಮಾಡಿದುದನ್ನು ತಿಳಿದಿಲ್ಲವೆ? ಎನ್ನಲು ದ್ರುಪದನು ನನಗೆ ನಿನ್ನ ಪರಿಚಯವಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೋ? ರಾಜನಿಗೂ ಬ್ರಾಹ್ಮಣರಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೆ? ಎಂಬ ಮಾತುಗಳಿಂದ ದ್ರೋಣನಿಗೆ ಹೀಯ್ಯಾಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ:– ತನ್ನ ಸಹಪಾಠಿಯಾಗಿದ್ದ ಆತ್ಮೀಯ ಸ್ನೇಹಿತ ಒಬ್ಬ ಬಡವನೆಂಬ ಕಾರಣಕ್ಕೆ ;ನೀನಾರೋ ನನಗೆ ತಿಳಿದಿಲ್ಲ' ಎಂದು ಹೇಳುವ ದ್ರುಪದನ ಅಹಂಕಾರ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

4. 'ಜಲಕ್ಕನೀಗಳರೆದೇಂ ಸಿರಿ ಕಳ್ಳೊಡವಿಟ್ಟತೆಂಬುದಂ'

ಆಯ್ಕೆ:– ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ" ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:– ತನ್ನ ಬಳಿ ಸಹಾಯ ಕೇಳಲು ಬಂದ ದ್ರೋಣನ್ನು ಕುರಿತು ದ್ರುಪದನು "ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೋ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೆ?" ಎಂದು ಹೀಯಾಳಿಸಿದ ಸಂದರ್ಭದಲ್ಲಿ ದ್ರೋಣನು "ಐಶ್ವರ್ಯವೆಂಬ ಮದವೇರಿದರೆ, ಮಾತಿನಲ್ಲಿ; ಮುಖದಲ್ಲಿ; ವಕ್ರತೆಉಂಟಾಗುತ್ತದೆ; ಸಂಬಂಧವನ್ನು ಮರೆಯುವಂತೆ ಮಾಡುವುದು; ಆದುದರಿಂದ ಐಶ್ವರ್ಯವು ಕಳ್ಳಿನೊಡನೆ(ಹೆಂಡ)ಹುಟ್ಟಿತು ಎಂಬುದನ್ನು ಈಗ ನಾನು ತಕ್ಷಣವೇ ಸ್ಪಷ್ಟವಾಗಿ ತಿಳಿದೆನು' ಎಂದು ಹೇಳುತ್ತಾನೆ.

ಸ್ವಾರಸ್ಯ:– ಸಮುದ್ರಮಥನ ಕಾಲದಲ್ಲಿ ಐಶ್ವರ್ಯ(ಲಕ್ಷ್ಮಿ) ಮತ್ತು ಕಳ್ಳು(ಅಮೃತ/ಸುರಪಾನ) ಇವೆರಡೂ ಹುಟ್ಟಿದವು. ಆ ಘಟನೆಯನ್ನು ದ್ರೋಣನ ಮೂಲಕ ಮಹಾಕವಿ ಪಂಪನು 'ಐಶ್ವರ್ಯ ಮದಕ್ಕೆ' ಅನ್ವಯಮಾಡಿ ಹೇಳಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ

5. 'ನೊಳವಿಂಗೆ ಕುಪ್ಪೆ ವರಂ'

ಆಯ್ಕೆ:– ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ" ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:– ದ್ರುಪದನು ಹೀಯಾಳಿಸಿದಾಗ ಕೋಪಗೊಂಡ ದ್ರೋಣನು ದ್ರುಪದನನ್ನು ಕುರಿತು 'ಎಲೋ ಖಳನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು' ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ, ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನಿರಾಯಾಸವಾಗಿ, ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ?' ಎಂದು ಶಪಥ ಮಾಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ:– 'ನೊಣಕ್ಕೆ ಕಸವೇ ಶ್ರೇಷ್ಠ' ಎಂಬಂತೆ ವ್ಯಕ್ತಿಯ ಯೋಗ್ಯತೆಗೆ ತಕ್ಕಂತೆ ಗುಣ–ನಡತೆ– ಅಭಿರುಚಿಗಳಿರುತ್ತವೆ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

## ಭಾಷಾ ಚಟುವಟಿಕೆ

**ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ**

ವಲ್ಕಲಾವೃತ = ವಲ್ಕಲ +ಆವೃತ=ಸ.ಧೀ .ಸಂ ದ್ರವ್ಯಾರ್ಥಿ = ದ್ರವ್ಯ+ಅರ್ಥಿ =ಸ.ಧೀ.ಸಂ

ನಿಮ್ಮರಸ= ನಿಮ್ಮ + ಅರಸ=ಲೋಪ ಮದೋನ್ನತ =ಮದ+ ಉನ್ಮತ್ತ=ಗುಣ ಸಂ

ಕಳ್ಗುಡಿ = ಕಳ್ + ಕುಡಿ =ಆದೇಶ ಸಂಧಿ

***ಕೊಟ್ಟಿರುವ ಪದಗಳಲ್ಲಿ ವಿಗ್ರಹವಾಕ್ಯ ಮಾಡಿ, ಸಮಾಸ ಹೆಸರಿಸಿ.***

ನಾಣಿಲಿ = ನಾಣು(ನಾಚಿಕೆ) ಇಲ್ಲದವನು ಯಾವನೂ (ನಾಚಿಕೆಗೇಡಿ)– ಬಹುವ್ರೀಹಿ ಸಮಾಸ

ದಿವ್ಯಶರಾಳಿ = ದಿವ್ಯವಾಗ +ಶರಾಳಿ = ಕರ್ಮದಾರಯ ಸಮಾಸ

ಮಹೀಪತಿ =ಮಹಿ(ಭೂಮಿ) ಪತಿ(ಒಡೆಯ) ಆದವನು ಯಾವನೋ ಅವನೆ– ಬಹುವ್ರೀಹಿ ಸಮಾಸ

ಕಳ್ಗುಡಿದ =ಕಳ್ಳಂ(ಕಳ್ಳನ್ನು) + ಕುಡಿದ = ಕ್ರಿಯಾ ಸಮಾಸ

***ಕೆಳಗಿನ ವಾಕ್ಯಗಳಲ್ಲಿನ ಅಲಂಕಾರವನ್ನು ಲಕ್ಷಣದೊಂದಿಗೆ ಸಮನ್ವಯಗೊಳಿಸಿ***

"ನೊಳವಿಂಗೆ ಕುಪ್ಪೆ ವರವೆಂಬವೊಲಾಂಬರಮುಂಟೆ ನಿನ್ನದೊಂದಳವು?"

ಅಲಂಕಾರ :–ಉಪಮಾ ಅಲಂಕಾರ

ಲಕ್ಷಣ :– ಎರಡು ವಸ್ತುಗಲಿಗಿರುವ ಸಾದೃಶ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾ ಅಲಂಕಾರ

ಉಪಮೇಯ :– ದ್ರುಪದನ ಅಳವು(ಯೋಗ್ಯತೆ/ಪರಾಕ್ರಮ)

ಉಪಮಾನ ;– ಕುಪ್ಪೆಯನ್ನೆ ಶ್ರೇಷ್ಠವೆಂದು ಭಾವಿಸಿದ ನೊಣ

ವಾಚಕ ಪದ ;– ವೊಲ್

ಸಮನ್ವಯ :– ಇಲ್ಲಿ ಉಪಮೇಯವಾದ ದ್ರುಪದನ ಯೋಗ್ಯತೆಯನ್ನು ಕುಪ್ಪೆಯನ್ನೇ ಶ್ರೇಷ್ಠವೆಂದು ಭಾವಿಸಿದ ನೊಣಕ್ಕೆ ಹೋಲಿಸಲಾಗಿರುವುದರಿಂದ ಇದು ಉಪಮಾ ಅಲಂಕಾರವಾಗಿದೆ.

***ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ.***

ಅ) ಅಂತೆಂಬನಾರ್ಗೆ ಪಿರಿದುಂ

ಬ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ

| | | |
|---|---|---|
| 4 | 4 | 4 |
| — — | ∪—∪ | ∪ ∪ — |
| ಅಂತೇಂ | ಬನಾರ್ಗೆ | ಪಿರಿದುಂ |

=12

| | | | | |
|---|---|---|---|---|
| 4 | 4 | 4 | 4 | 4 |
| — ∪∪ | — — | ∪— ∪ | — — | ∪ ∪ — |
| ಬ್ರಾಂತುದ | ಲೇಂದ್ರೋ | ಣನೆಂಬ | ನೇಂಪಾ | ರ್ವನೆಪೆ |

=20

ಇದು ಕಂದ ಪದ್ಯ ಕ್ಕೆ ಸೇರಿದೆ

ಆ). ಖಳನೊಳವಿಂಗೆ ಕುಪ್ಪೆ ಪರಮೆಂಬವೊಲಾಂಬರಮುಂಟೆ ನಿನ್ನದೊಂ

| | | | | | | |
|---|---|---|---|---|---|---|
| ನ | ಜ | ಭ | ಜ | ಜ | ಜ | ರ |
| ∪∪∪ | ∪— ∪ | — ∪∪ | ∪— ∪ | ∪— ∪ | ∪— ∪ | — ∪— |
| ಖಳನೋ | ಳವಿಂಗೆ | ಕುಪ್ಪೆವ | ರಮೆಂಬ | ವೊಲಾಂಬ | ರಮುಂಟೆ | ನಿನ್ನದೊಂ |

ಇದು ಚಂಪಕಮಾಲಾವೃತ್ತ ಛಂದಸ್ಸಿಗೆ ಸೇರುತ್ತದೆ.

********************

# ಪಠ್ಯ ಪೂರಕ ಅಧ್ಯಯನ

## 4. ವಚನಗಳು – ಅಕ್ಕಮಹಾದೇವಿ

ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು ?**

ಉತ್ತರ: ಅಕ್ಕಮಹಾದೇವಿಯ ವಚನಗಳ ಅಂಕಿತ ಚೆನ್ನಮಲ್ಲಿಕಾರ್ಜುನ

**2. ಅಕ್ಕಮಹಾದೇವಿಯು ಯಾವುದನ್ನು ಹಾನಿ ಎಂದಿದ್ದಾಳೆ ?**

ಉತ್ತರ: ಅಕ್ಕಮಹಾದೇವಿಯು ನಾನು ಹಿಂದೆ ಮಾಡಿದ ಕೆಡುಕುಗಳೆಲ್ಲವನ್ನು ತಂದು ಮುಂದಿಟ್ಟರೆ ಅದರಿಂದ ನಿಮಗೇ ಹಾನಿ ಎಂದಿದ್ದಾರೆ.

**3. ಅರಿಯದವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು ?**

ಉತ್ತರ: ಅರಿಯದವರೊಡನೆ ಸ್ನೇಹ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯ ಹೊತ್ತಿಸಿಕೊಂಡಂತೆ ಆಗುತ್ತದೆ.

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**4. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ ?**

ಚಂದನವ ಕಡಿದು ಕೊರೆದು ತೇದೊಡೆ ಅದು ನೊಂದೆನೆಂದು ಸುಗಂಧವನ್ನು ಬಿಡುವುದಿಲ್ಲ. ಚಿನ್ನವನ್ನು ಕಡಿದು ತಿಕ್ಕಿದರೂ ಅದು ಹೊಳಪನ್ನು ಕಳೆದು ಕೊಳ್ಳುವುದಿಲ್ಲ. ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದರೂ ಸಿಹಿಯ ಬಿಡುವುದಿಲ್ಲ. ಪ್ರಕೃತಿಯಲ್ಲಿರುವ ವಸ್ತಗಳು ತಮ್ಮ ಮೂಲ ಗುಣವನ್ನು ಬಿಡುವುದಿಲ್ಲ. ನಾನು ಹಿಂದೆ ಮಾಡಿದ ಕೆಡುಕುಗಳೆಲ್ಲವನ್ನು ತಂದು ಮುಂದಿಟ್ಟರೆ ಅದರಿಂದ ನಿಮಗೇ ತೊಂದರೆ, ನೀವು ಕೊಂದರೂ ನಾನು ಶರಣೆಂಬುದ ಬಿಡುವುದಿಲ್ಲ ಎಂಬ ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ವ್ಯಕ್ತವಾಗಿದೆ.

**5. ಜ್ಞಾನಿ – ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವೇನು ?**

ಉತ್ತರ: ಅರಿಯದವರೊಡನೆ ಸ್ನೇಹ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯ ಹೊತ್ತಿಸಿಕೊಂಡಂತೆ, ಬಲ್ಲವರೊಂದಿಗೆ ಸ್ನೇಹವ ಮಾಡಿದರೆ ಮೊಸರ ಕಡೆದು ಬೆಣ್ಣೆಯ ತೆಗೆದುಕೊಂಡಂತೆ, ಚೆನ್ನಮಲ್ಲಿಕಾರ್ಜುನ ದೇವ ನಿಮ್ಮ ಶರಣರ ಸ್ನೇಹವ ಮಾಡಿದರೆ ಕರ್ಪುರದ ಗಿರಿಗೆ ಬೆಂಕಿ ತಗುಲಿದಂತೆ. ಯಾವುದಾದರು ವಸ್ತುವಿಗೆ ಬೆಂಕಿ ತಗುಲಿದರೆ ಅದು ಸುಟ್ಟು ಹೋಗಿ ಬೂದಿ ಉಳಿಯುತ್ತದೆ. ಆದರೆ ಕೊಂಬಂತೆ. ಆದರೆ ಕರ್ಪುರದ ಗಿರಿಗೆ ಬೆಂಕಿ ತಗುಲಿದರೆ ಯಾವ ಶೇಷವೂ ಉಳಿಯಲಾರದು. ಇದು ಭಕ್ತರು ಭಗವಂತನಲ್ಲಿ ಶರಣಾಗುವ ಭಾವವಾಗಿದೆ ಎಂದು ಅಕ್ಕಮಹಾದೇವಿಯು ಹೇಳಿದ್ದಾಳೆ.

*****

# 5. ನಾನು ಪ್ರಾಸ ಬಿಟ್ಟ ಕತೆ– ಎಂ ಗೋವಿಂದ ಪೈ

**ಅಭ್ಯಾಸ**

**1. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?**

**ಉತ್ತರ:– ಚಪ್ಪರದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಾರೆ, ಮತ್ತೊಂದು ಕಡೆ ಮಂಡಿಗೆಗಳನ್ನು ಮಡುಚುತ್ತಾರೆ, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಾರೆ. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರವೆಲ್ಲಾ ಗದ್ದಲ.**

**2. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು?**

**ಉತ್ತರ:– ಏನು ತೋಚಿತೊ ದೇವರೇ ಬಲ್ಲ. ಮತ್ತೆ ಚಪ್ಪರದ ಗವುಜು ನನಗೆ ಕೇಳಿಸಲಿಲ್ಲ. ನೆಟ್ಟಗೆ ಹೋದೆ, ಅಭ್ಯಾಸದ ಪುಸ್ತಕವನ್ನು ಹಿಡಿದೆ, ಬರೆಯತೊಡಗಿದೆ. ಇಂದಿನ ಮಾತಿನಲ್ಲಿ ಏಕಾಂಕ ನಾಟಕ ಎನ್ನಬಹುದಾದ ಒಂದು ನಾಟಕವನ್ನು ಇಳಿಹೊತ್ತಿನೊಳಗೆ ಬರೆದು ಮುಗಿಸಿದೆ.**

**3. ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು?**

**ಉತ್ತರ:– ಹೆಸರು ಮಕರಾಕ್ಷನ ಕಾಳಗ.**

**4. ಬಾಸೆಲ್ ಮಿಶನ್‌ನವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು?**

**ಉತ್ತರ:– 'ಹಳಗನ್ನಡ ವ್ಯಾಕರಣ ಸೂತ್ರಗಳು'**

**5. "ಬಿಲ್ಲ ಹಬ್ಬ"ವನ್ನು ರಚಿಸಿದ ಕವಿ ಯಾರು?**

**ಉತ್ತರ:– ವಾಸುದೇವ ಪ್ರಭು ಎಂಬವರು 'ಬಿಲ್ಲ ಹಬ್ಬ'ವನ್ನು ರಚಿಸಿದರು.**

**6. ಮುದ್ದಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು?**

**ಉತ್ತರ:– 1899ರಲ್ಲಿ ಶೇಕ್ಸ್‌ಪಿಯರ್ "ಟ್ವೆಲ್ಫ್‌ನೈಟ್" ಎಂಬ ನಾಟಕದ ಮೊದನೆಯ ಅಂಕದಿಂದ ಕೆಲವು ನೋಟಗಳನ್ನು ವೃತ್ತ – ಕಂದಗಳಲ್ಲಿ ಕನ್ನಡಿಸಿ, ಅವನ್ನು ಶ್ರೀನಂದಳಿಕೆ ಲಕ್ಷ್ಮೀನಾರಣಪ್ಪ(ಮುದ್ದಣ)ನವರಿಗೆ ಉಡುಪಿಗೆ ಕಳಿಸಿಕೊಟ್ಟೆ. ಮುಂದರಿಸು ಎಂದು ಅವರು ಹೇಳಿಕಳಿಸಿದರು.**

**7. ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು ಯಾವ ಕೃತಿಯನ್ನು ಬರೆದರು?**

**ಉತ್ತರ:– ಗಿಳಿವಿಂಡು**

**ಹೆಚ್ಚುವರಿ ಪ್ರಶ್ನೆಗಳು:**

**1. ಗೋವಿಂದ ಪೈರವರ ಕವಿತೆಗಳು ಮೊದಲಿಗೆ ಅಚ್ಚಾದುದು ಯಾರ ಪತ್ರಿಕೆಯಲ್ಲಿ?**

**ಉತ್ತರ:** ಗೋವಿಂದ ಪೈರವರ ಕವಿತೆಗಳು ಮೊದಲಿಗೆ ಅಚ್ಚಾದುದು ಸುವಾಸಿನಿ ಎಂಬ ಮಾಸಪತ್ರಿಕೆಯಲ್ಲಿ.

**2. ಮಹಮದ್ ಇಕ್ಬಾಲರ ಯಾವ ಕವಿತೆಯಯನ್ನು ಗೋವಿಂದ ಪೈರವರು ಕನ್ನಡೀಕರಿಸಿದರು?**

**ಉತ್ತರ:** ಮಹಮಹದದ ಇಕ್ಬಾಲರ 'ಹಿಂದೂಸ್ತಾನ ಹಮಾರಾ' ಎಂಬ ಗೀತೆಯನ್ನು ಕನ್ನಡೀಕರಿಸಿದರು.

**3. ಪ್ರಾಸರಹಿತವಾದ ಕವಿತೆಗಳು ಮೊದಲ ಬಾರಿಗೆ ಯಾವ ಪತ್ರಿಕೆಯಲ್ಲಿ ಪ್ರಕಟವಾದವು?**

**ಉತ್ತರ:** ಪ್ರಾಸರಹಿತವಾದ ಕವಿತೆಗಳು ಮೊದಲ ಬಾರಿಗೆ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಪ್ರಕಟವಾದವು.

# 6. ಶುಕನಾಸನ ಉಪದೇಶ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

**1. ಯಾರಿಗೆ ಗುರುವಾಣಿ ಹೊರೆಯೆನಿಸುತ್ತದೆ?**

ಮೂರ್ಖನ ಕಿವಿಗೆ ಗುರುವಾಣಿ ಹೊರೆಯೆನಿಸುತ್ತದೆ.

**2. ಯಾರ ಕಿವಿಗೆ ಉಪದೇಶ ನಾಟವುದಿಲ್ಲ?**

ಉತ್ತರ:– ರಾಜರ ಮನೆತನದಲ್ಲಿ ಹುಟ್ಟಿದವರಿಗೆ ಅಹಂಕಾರದಿಂದ ಕಿವಿ ಕಿವುಡಾಗಿ ಎಂತಹ ಉಪದೇಶವೂ ಕಿವಿಗೆ ನಾಟುವುದಿಲ್ಲ.

**3. ದುಡ್ಡಿನ ಪೈತ್ಯ ಅಡರಿದವರಿಗೆ ಯಾವುದು ಕ್ಷುದ್ರವಾಗಿ ಕಾಣುತ್ತದೆ?**

**ಉತ್ತರ:–** ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ.

**4. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ?**

ಉತ್ತರ:– ಸಜ್ಜನರಿಗೆ ಗುರುವಚನ ಎನ್ನುವುದು ಕಿವಿಗೆ ಒಂದು ಆಭರಣ. ಅದರಿಂದ ಅವರ ಶ್ರೀಮುಖ ಇನ್ನಷ್ಟು ಶ್ರೀಮಂತವಾಗುತ್ತದೆ. ಮುಸ್ಸಂಜೆಯಕತ್ತಲನ್ನು ಚಂದ್ರ ಕಳೆವಂತೆ ಬಗೆಬಗೆಯ ಕೊಳೆಯನ್ನೆಲ್ಲ ಹಿತವಚನಗಳು ತೊಳೆದುಬಿಡುತ್ತವೆ. ಆಗ ಬಾಳಿನಲ್ಲಿ ಸಂಯಮ, ಪಕ್ವತೆ, ಶಾಂತಿ ಮುಂತಾದವು ಕಾಣಿಸಿಕೊಳ್ಳುತ್ತವೆ. ಗುರೂಪದೇಶವೆಂದರೆ ಜನರ ಒಳ ಹೊರ ಕೊಳೆಗಳನ್ನು ತೊಳೆದುಬಿಡುವ ನೀರಿಲ್ಲದ ಸ್ನಾನ (ತಲೆ ನೆರೆಯದ, ಮೈ, ಸುಕ್ಕುಗಟ್ಟದೆ ಮೂಡುವ ಮುಪ್ಪು: ಬೊಜ್ಜು ಬೆಳೆಯದೆ ಬರುವ ಗುರುತ್ವ: ಬಂಗಾರವಿಲ್ಲದೆ ಮಾಡಿ ಬೆಲೆಬಾಳುವ ಕಿವಿಯೋಲೆ: ಪಂಜು ಇಲ್ಲದೆ ಬೆಳಗುವ ಬೆಳಕು: ಉದ್ವೇಗ ಬರಿಸದ ಜಾಗರಣೆಯಾಗಿದೆ.)

**5. ರಾಜರ ಪ್ರಕೃತಿ ಹೇಗಿರುತ್ತದೆ?**

ಉತ್ತರ:– ರಾಜರ ಪ್ರಕೃತಿಯು, ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆ(ವ್ಯಕ್ತಿತ್ವ) ಯಲ್ಲಿ ಕತ್ತಲು ತುಂಬಿರುತ್ತದೆ. ಇದು ಎಲ್ಲ ದುಡ್ಡಿನ ಮಹಿಮೆ, ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷ, ಅದರ ಅಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ದಿ ಮಂಕಾಗಿ ಬಿಡುತ್ತದೆ.

**6. ಗುರೂಪದೇಶವು ಯಾರಿಗೆ ಮೆಚ್ಚಿಗೆ ಯಾಗುವುದಿಲ್ಲ?**

ಉತ್ತರ:– ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವು ಅವರ ಕಿವಿಗೆ ನಾಟುವುದಿಲ್ಲ. ಯಾರದೋ ದಾಕ್ಷಿಣ್ಯಕ್ಕೆ ಉಪದೇಶವನ್ನು ಆಲಿಸಿದರೂ ಎಂಥ ಅನಾದರ ಆ ಮೋರೆಯಲ್ಲಿ! ಆನೆಯಂತೆ ಅರೆ ಮುಚ್ಚಿದ ಕಣ್ಣಲ್ಲಿ "ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ" ಎನುವಂಥ ಭಾವ, ಇಂಥವರಿಗೆ ಗುರೂಪದೇಶ ಮೆಚ್ಚಿಗೆ ಆಗುವುದಿಲ್ಲ

*********** **ಮನಾನಾ** ***********